ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 3 ಭಾನುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 315 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯರಿಗೆ ಕಾಂಗ್ರೆಸ್ ಟಿಕೆಟ್ ನೀಡುವಂತೆ ಆಗ್ರಹ



ಮೈಸೂರಿನಲ್ಲಿ ಕೆಂಪಯ್ಯ ಅಭಿಮಾನಿ ಬಳಗದಿಂದ ಸಭೆ ನಡೆಸಲಾಯಿತು.

ಮೈಸೂರು,ಮಾ.2(ಎಂಕೆ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ನೀಡುವಂತೆ ಕೆಂಪಯ್ಯ ಅಭಿಮಾನಿ ಬಳಗ ಒತ್ತಾಯಿಸಿದೆ.

ನಗರದ ಸಿದ್ಧಾರ್ಥ ಹೋಟೆಲ್‌ನಲ್ಲಿ ಸಭೆ ನಡೆಸಿದ ಬಳಗದವರು, ಮೈಸೂರು ಭಾಗಕ್ಕೆ ಸಾಮಾಜಿಕ ಹಾಗೂ ಆಡಳಿತ ಸೇವಾ ಕಾರ್ಯಗಳ ಮೂಲಕ ಚಿರಪರಿಚಿತರಾಗಿರುವ ನಿವೃತ್ತ ಐಪಿಎಸ್ ಅಧಿಕಾರಿಗಳಾದ ಕೆಂಪಯ್ಯ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿ, ಗೃಹ ಸಚಿವರ ಆಪ್ತ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿರುವ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಡಬೇಕು. ಅಲ್ಲದೆ ಮೈಸೂರಿಗೆ ಅವರು ಅತ್ಯಂತ ಚಿರಪರಿಚಿತರಾಗಿದ್ದು, ಸ್ಥಳಿಯ ಸಮಸ್ಯೆಗಳನ್ನು ಬಲ್ಲವರಾಗಿದ್ದಾರೆ. ಇಂತಹ ಪ್ರಾಮಾಣಿಕರಿಗೆ ಲೋಕಸಭಾ ಟಿಕೆಟ್ ನೀಡುವಂತೆ ಮುಂದಿನ ಎರಡ್ಮೂರು ದಿನಗಳನ್ನು ಎಐಸಿಸಿ ರಾಜ್ಯ ಉಸ್ತುವಾರಿಗಳು, ಸಿಎಂ, ಡಿಸಿಎಂ ಅವರಿಗೆ ಮನವಿ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಕೆಂಪಯ್ಯ ಅಭಿಮಾನಿ ಬಳಗದ ಶ್ರೀನಿವಾಸ್ ಮಿತ್ರ, ಜೆ.ಆರ್. ಮೋಹನ್‌ಕುಮಾರ್, ಶಿವಕುಮಾರ್, ಮುದ್ದಣ್ಣ, ಬಾಬು, ದೊರೆಸ್ವಾಮಿ, ಅಚ್ಚುತ, ಚಂದ್ರು, ಪಾಂಡೆ, ಗೋವಿಂದರಾಜು, ದಿವಾಕರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಕೆ.ಮರಿಗೌಡರನ್ನು ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಓಬಿಸಿ ವಿಭಾಗದ ಅಧ್ಯಕ್ಷ ಹೊನ್ನಪ್ಪ, ಹಿನಕಲ್ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ರಮೇಶ್, ಹೊಟ್ಟೆಗೌಡ, ಚಂದ್ರಶೇಖರ್, ಉತ್ತನಹಳ್ಳಿ ಶಿವಣ್ಣ ಅಭಿನಂದಿಸಿದರು.

ಇಂದಿನಿಂದ ಈವಿವಿಯಿಂದ 88ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವ

ಜ್ಯೋತಿರ್ಲಿಂಗಗಳ ಪುಣ್ಯ ದರ್ಶನವು ಮಾ.10ರವರೆಗೆ ನಡೆಯಲಿದೆ. ಮಾ.4ರಿಂದ ಪ್ರತಿನಿತ್ಯ ಸಂಜೆ ಪ್ರವಚನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಮಾ.3ರಂದು ಸಂಜೆ 5ರಿಂದ 6ರವರೆಗೆ ಹೆಸರಾಂತ ಗಾಯಕ ಅಮ್ಮ ರಾಮಚಂದ್ರರವರಿಂದ ಭಕ್ತಿಗೀತೆಗಳ ಗಾನಸುಧೆ ಏರ್ಪಡಿಸಲಾಗಿದೆ.

ಮೈಸೂರು,ಮಾ.2–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಯಾದವಗಿರಿ ಮತ್ತು ಜಯಲಕ್ಷ್ಮೀಪುರಂ ಸೇವಾ ಕೇಂದ್ರಗಳ ವತಿಯಿಂದ ಮಾ.3ರಿಂದ 10ರವರೆಗೆ 88ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವವನ್ನು ಒಂಟಿಕೊಪ್ಪಲು ಕಾಳಿದಾಸ ರಸ್ತೆಯಲ್ಲಿರುವ (ಚಂದ್ರಕಲಾ ಆಸ್ಪತ್ರೆ ಸಮೀಪ) 'ಓಂ ಶಾಂತಿ ಮಂಟಪದಲ್ಲಿ ಆಯೋಜಿಸಲಾಗಿದೆ.

ಮಾ.3ರಂದು ಸಮಾರಂಭವನ್ನು ಸಂಜೆ 6 ಗಂಟೆಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸುವರು. ಬೇಲೂರು ತಾಲೂಕಿನ ಹಳೇಬೀಡು ಶ್ರೀ ಕ್ಷೇತ್ರ ಪುಷ್ಪಗಿರಿಯ ಕಾಯಕಯೋಗಿ ಶ್ರೀ ಶ್ರೀ 1108 ಜಗದ್ಗುರು ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಲಿದ್ದು, ಮುಖ್ಯ ಅತಿಥಿಯಾಗಿ ಮಂಡ್ಯ ಜಿಲ್ಲೆ ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜ್, ಅತಿಥಿಯಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಆಗಮಿಸಲಿದ್ದಾರೆ. ವಿಶೇಷ ಅತಿಥಿಯಾಗಿ ಕೆ.ಆರ್. ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಟಿ.ಪಿ.ಶೋಭಾ ಭಾಗವಹಿಸಲಿದ್ದು, ಈವಿವಿ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿಕೆ ಲಕ್ಷ್ಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.



ಮಾಜಿ ಕಾರ್ಪೊರೇಟರ್ ಪೈಲ್ವಾನ್ ಶ್ರೀನಿವಾಸ್ ಅವರ ಹುಟ್ಟುಹಬ್ಬವನ್ನು ಹೆಬ್ಬಾಳು ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಸೋಸಿಯೇಷನ್ ಅಧ್ಯಕ್ಷ ಪ್ರಕಾಶ್ ದೊಡ್ಡಣ್ಣ, ಉಪಾಧ್ಯಕ್ಷ ಡಾ.ಶ್ರೀನಿವಾಸ್, ಕಾರ್ಯದರ್ಶಿ ಡಾ.ವಿಠಲ್, ಸಹ ಕಾರ್ಯದರ್ಶಿ ದಿನೇಶ್ ಚಂದ್ರ ಕಿರಣ್, ಮೈಸೂರು ರಕ್ಷಣಾ ವೇದಿಕೆ ಉಪಾಧ್ಯಕ್ಷ ಕುಮಾರ್‌ಗೌಡ, ಡಾ.ಚಕ್ರದರ್ ಸೂರಿ, ಜಾನಿ ಇನ್ನಿತರರು ಉಪಸ್ಥಿತರಿದ್ದರು.

ಹುಣಸೂರು ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಬಸವಲಿಂಗಯ್ಯ ಆಯ್ಕೆ

ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡರಿಗೆ ಧನ್ಯವಾದ



ಹುಣಸೂರು ಟಿಎಪಿಸಿಎಂಎಸ್ ನೂತನ ಅಧ್ಯಕ್ಷ ಬಸವಲಿಂಗಯ್ಯ ಅವರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜೆಡಿಎಸ್ ಎಸ್ಸಿ, ಎಸ್ಟಿ ಘಟಕದಿಂದ ಸನ್ಮಾನಿಸಲಾಯಿತು.

ಮೈಸೂರು, ಮಾ.2(ಬಿಎಲ್‌ಯು)– 50 ವರ್ಷಗಳ ಇತಿಹಾಸದಲ್ಲಿ ಸಹಕಾರ ಕ್ಷೇತ್ರದಲ್ಲಿ ದಲಿತ ಮುಖಂಡನನ್ನು ಅಧ್ಯಕ್ಷನನ್ನಾಗಿ ಮಾಡಿದ ಕೀರ್ತಿ ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ಜಿ.ಡಿ. ಹರೀಶ್‌ಗೌಡರಿಗೆ ಸಲ್ಲುತ್ತದೆ ಎಂದು ಹುಣಸೂರು ಟಿಎಪಿಸಿಎಂಎಸ್ ನೂತನ ಅಧ್ಯಕ್ಷ ಬಸವಲಿಂಗಯ್ಯ ತಿಳಿಸಿದರು.

ಹುಣಸೂರು ಟಿಎಪಿಸಿಎಂಎಸ್ ಅಧ್ಯಕ್ಷನಾಗಿ ಆಯ್ಕೆಯಾಗಿರುವುದಕ್ಕೆ ಮೈಸೂರಿನ ಪತ್ರಕರ್ತರ ಭವನದಲ್ಲಿ ಜೆಡಿಎಸ್ ಎಸ್ಸಿ, ಎಸ್ಟಿ ಘಟಕದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಮುದಾಯದ ನಾಯಕರನ್ನು ಗುರುತಿಸಿ ಅವಕಾಶ ಕೊಟ್ಟ ಜಿ.ಟಿ.ದೇವೇಗೌಡರ ಕುಟುಂಬಕ್ಕೆ ಈ ವೇಳೆ ಧನ್ಯವಾದ ಹೇಳಿದರು.

ಮೈಸೂರು ಜಿಲ್ಲಾ ಜೆಡಿಎಸ್ ಎಸ್ಸಿ,ಎಸ್ಟಿ ಘಟಕದ ಅಧ್ಯಕ್ಷ ಶಿವ ಕುಮಾರಸ್ವಾಮಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಪಿ.ನಾಗರಾಜು, ಮಾಜಿ ಅಧ್ಯಕ್ಷ ಸುಬ್ಬಯ್ಯ ಸೇರಿದಂತೆ ಇನ್ನಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರಿಂದ ಸಂಚಾರ ಆರಂಭಿಸಿದ 20 ಅಶ್ವಮೇಧ ಕ್ಲಾಸಿಕ್ ಬಸ್ಸುಗಳು

● ಸುಸಜ್ಜಿತ ಬಸ್‌ಗಳ ಸಂಚಾರಕ್ಕೆ ಸಚಿವ ಡಾ.ಮಹದೇವಪ್ಪ ಚಾಲನೆ ● ಮೈಸೂರಿಂದ ಬೆಂಗಳೂರು, ಟಿ.ನರಸೀಪುರ, ಹೆಚ್.ಡಿ.ಕೋಟೆ, ಹುಣಸೂರು, ಹಾಸನ, ವಿರಾಜಪೇಟೆಗೆ ಪ್ರಯಾಣ

ಮೈಸೂರು,ಮಾ.2(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಿಂದ ವಿವಿಧೆಡೆ ಸಂಚರಿಸಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 20 ನೂತನ ಅಶ್ವಮೇಧ ಕ್ಲಾಸಿಕ್ ಬಸ್ಸುಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಸಿರು ನಿಶಾನೆ ತೋರಿಸಿ, ಪ್ರಯಾಣಿಕರ ಸೇವೆಗೆ ಸಮರ್ಪಿಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಶನಿವಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಗ್ರಾಮಾಂತರ ಘಟಕದಿಂದ ಸಂಚರಿಸಲಿರುವ 20 ನೂತನ ಅಶ್ವಮೇಧ ಕ್ಲಾಸಿಕ್ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಲಾಯಿತು. ಈಗಾಗಲೇ ಬೆಂಗಳೂರು, ಮಂಡ್ಯ ಸೇರಿದಂತೆ ವಿವಿಧ ಘಟಕಗಳಿಂದ ಅಶ್ವಮೇಧ ಕ್ಲಾಸಿಕ್ ಬಸ್ಸುಗಳು ಸಂಚಾರ ಆರಂಭಿಸಿದ್ದು, ಪ್ರಯಾಣಿಕರ ಮನಗೆದ್ದಿವೆ. ಇದೀಗ ಮೈಸೂರು ಘಟಕಕ್ಕೆ ಹೊಸದಾಗಿ 20 ಅಶ್ವಮೇಧ ಕ್ಲಾಸಿಕ್ ಬಸ್ಸುಗಳು ಸೇರ್ಪಡೆಗೊಂಡು, ಸೇವೆ ಆರಂಭಿಸಿವೆ.

ಪ್ರಯಾಣದ ಮಾರ್ಗ: ಇಂದಿನಿಂದ ಸಂಚಾರ ಆರಂಭಿಸಿದ ಅಶ್ವಮೇಧ ಕ್ಲಾಸಿಕ್ ಬಸ್ಸುಗಳಲ್ಲಿ ಮೈಸೂರು–ಬೆಂಗಳೂರು ನಡುವೆ 3 ಬಸ್, ನಂಜನಗೂಡು–ಮೈಸೂರು–ಬೆಂಗಳೂರು 3 ಬಸ್, ನಂಜನಗೂಡು–ಟಿ.ನರಸೀಪುರ–ಬೆಂಗಳೂರಿಗೆ 7 ಬಸ್, ಹೆಚ್.ಡಿ.ಕೋಟೆ–ಬೆಂಗಳೂರಿಗೆ 2 ಬಸ್, ಹುಣಸೂರು–ಬೆಂಗಳೂರಿಗೆ 2 ಬಸ್, ಹಾಸನ–ಬೆಂಗಳೂರಿಗೆ 2 ಬಸ್ ಹಾಗೂ ಮೈಸೂರು–ವಿರಾಜಪೇಟೆ ನಡುವೆ ಒಂದು ಬಸ್ ಸಂಚರಿಸಲಿದೆ.

ಬಸ್ ವಿಶೇಷ: ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್ ಬಸ್‌ಗಳಾಗಿ ಅಶ್ವಮೇಧ ಕ್ಲಾಸಿಕ್ ಬಸ್ಸುಗಳು ಸಂಚರಿಸಲಿವೆ. ಬಿ.ಎಸ್–6 ಮಾದರಿಯ ಈ ಬಸ್ಸುಗಳು ಪರಿಸರ ಸ್ನೇಹಿ ಬಸ್‌ಗಳಾಗಿವೆ. ಸೆನ್ಸಾರ್ ಚಾಲಿತ ನ್ಯೂಮ್ಯಾಟಿಕ್ ಬಾಗಿಲು, ತುರ್ತು ಬಟನ್ ಅಳವಡಿಸಲಾಗಿದೆ. ಸಾಮಾನ್ಯ ಬಸ್‌ಗಳಿಗಿಂತ ಒಂದು ಅಡಿ ಎತ್ತರ ಹೊಂದಿರುವುದರಿಂದ ಬೆಳಕು ಹಾಗೂ ಗಾಳಿ ಪ್ರಯಾಣಿಕರಿಗೆ ಲಭ್ಯವಿರುತ್ತದೆ. ಪ್ರಯಾಣಿಕರ ಸೀಟ್ ನಡುವೆ ಹೆಚ್ಚಿನ ಸ್ಥಳಾವಕಾಶ ಇರುವುದರಿಂದ ಆರಾಮದಾಯಕ ಪ್ರಯಾಣಕ್ಕೆ ಸಹಕಾರಿಯಾಗಿದೆ. ನೀರಿನ ಬಾಟಲ್ ಹಾಗೂ ಪತ್ರಿಕೆ ಇಡಲು ಪೌಚ್ ವ್ಯವಸ್ಥೆ ಇದೆ. ಮೊಬೈಲ್ ಚಾರ್ಜಿಂಗ್, ಪ್ಯಾನಿಕ್ ಬಟನ್, ಬಸ್‌ನ ಮುಂದೆ ಹಾಗೂ ಹಿಂದೆ ಸಿಸಿ ಕ್ಯಾಮರಾ ಅಳವಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್, ನಗರ ವಿಭಾಗದ ನಿಯಂತ್ರಣಾಧಿಕಾರಿ ವೀರೇಶ್, ಕಾರ್ಮಿಕ ಕಲ್ಯಾಣಾಧಿಕಾರಿ ಪುಟ್ಟೇಗೌಡ, ಮುಖಂಡರಾದ ಅಜೀಜ್ ಅಬ್ದುಲ್ಲಾ, ಜೆ.ಗೋಪಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯ ಬಳಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೂತನ ಅಶ್ವಮೇಧ ಕ್ಲಾಸಿಕ್ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿದರು.

"ಮೈಸೂರಿನಿಂದ ಮೊದಲ ಹಂತದಲ್ಲಿ ಕಾರ್ಯಾರಂಭ ಮಾಡಿರುವ 20 ಅಶ್ವಮೇಧ ಕ್ಲಾಸಿಕ್ ಬಸ್ಸುಗಳು ಪ್ರಯಾಣಿಕರ ಸ್ನೇಹಿ ಬಸ್ಸುಗಳಾಗಿವೆ. ಸಾಮಾನ್ಯ ಎಕ್ಸ್‌ಪ್ರೆಸ್ ಬಸ್‌ಗಳ ದರಗಳೇ ಅಶ್ವಮೇಧ ಕ್ಲಾಸಿಕ್ ಬಸ್‌ಗಳಿಗೂ ಅನ್ವಯವಾಗುತ್ತದೆ. ಮೈಸೂರು ವಿಭಾಗದಲ್ಲಿ 1244 ಬಸ್‌ಗಳಿದ್ದು, 1153 ಮಾರ್ಗಸೂಚಿಯಲ್ಲಿ ಪ್ರತಿದಿನ 3.75 ಲಕ್ಷ ಕಿ.ಮಿ ಸಂಚರಿಸಲಿವೆ. ದಿನಕ್ಕೆ ಸರಾಸರಿ 6.07 ಲಕ್ಷ ಪ್ರಯಾಣಿಕರು ಸಾರಿಗೆ ಬಸ್‌ಗಳಲ್ಲಿ ಸಂಚರಿಸಲಿದ್ದು, ಇಲಾಖೆಗೆ 1,93,07,000 ರೂ. ಆದಾಯ ಸಂಗ್ರಹವಾಗಲಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಶಕ್ತಿ ಯೋಜನೆ ಜಾರಿಯಾದ ದಿನದಿಂದ(ಜೂ.11,2023) ಇಲ್ಲಿಂಯವರೆಗೆ ಮೈಸೂರು ವಿಭಾಗದ ಬಸ್‌ಗಳಲ್ಲಿ 9.40 ಕೋಟಿ ಪ್ರಯಾಣಿಕರು ಸಂಚರಿಸಿದ್ದು, ಶಕ್ತಿ ಯೋಜನೆಯಿಂದ 213.84 ಕೋಟಿ ರೂ. ಮೊತ್ತದ ಟಿಕೆಟ್ ಮಹಿಳಾ ಪ್ರಯಾಣಿಕರಿಗೆ ನೀಡಲಾಗಿದೆ. ಶಕ್ತಿ ಯೋಜನೆ ಜಾರಿಗೂ ಮುನ್ನ ಜಿಲ್ಲೆಯಲ್ಲಿ ಪ್ರತಿದಿನ 4.62 ಲಕ್ಷ ಪ್ರಯಾಣಿಕರು ಸಾರಿಗೆ ಬಸ್‌ನಲ್ಲಿ ಸಂಚರಿಸುತ್ತಿದ್ದರು. ಈಗ 6.07 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದಾರೆ.

–ಬಿ.ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಗ್ರಾಮಾಂತರ ವಿಭಾಗ



ಮುಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕೆ.ಮರಿಗೌಡ ಅವರನ್ನು ಮುಖಂಡರಾದ ಎಂ.ಆರ್.ರವಿಕುಮಾರ್ (ಡೆಲ್ಲಿ), ಡಿ.ಕೆ.ಕಾಂತರಾಜ್, ಕೂರ್ಗಳ್ಳಿ ಕುಮಾರಣ್ಣ, ಬಸವಣ್ಣ, ಕಂಟ್ರಾಕ್ಟ್ ದೇವರಾಜಣ್ಣ ಅಭಿನಂದಿಸಿದರು.




ಮುಡಾ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೆ.ಮರೀಗೌಡ ಅವರನ್ನು ಕಾಂಗ್ರೆಸ್ ಮುಖಂಡ ಶಿಂಷಾ ದಿನೇಶ್ ತಮ್ಮ ಬೆಂಬಲಿಗರೊಂದಿಗೆ ಅಭಿನಂದಿಸಿದರು.



ಮುಡಾ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೆ.ಮರೀಗೌಡರನ್ನು ದೊಡ್ಡಹುಂಡಿ ಗ್ರಾಮಸ್ಥರು ಅಭಿನಂದಿಸಿದರು. ಮಾಜಿ ಗ್ರಾ.ಪಂ. ಅಧ್ಯಕ್ಷ ಸೋಮಣ್ಣ, ಸಿ.ಚಿಕ್ಕಣ್ಣ, ಚಿಕ್ಕೇಗೌಡ, ಡಿ.ಸಿ.ಬಸವೇಗೌಡ, ಅಂಗಡಿ ನಾಗರಾಜು, ಬಿ.ಜವರೇಗೌಡ, ಶಿವಕುಮಾರ, ಪಿ.ಬಸವರಾಜು, ಮೊಟ್ಟೆ ನಾಗಣ್ಣ, ನಾಗೇಂದ್ರ, ಬಸವಲಿಂಗ, ಡೈರಿ ಬಸಪ್ಪ, ಕೆ.ನಾಗೇಗೌಡ, ರಮೇಶ, ದಾಸಿ ಬಸಪ್ಪ, ಶಿವಣ್ಣ, ಯ.ನಾಗಣ್ಣ, ಬಸವ ರಾಜಣ್ಣ, ಡಿ.ಎನ್.ಮಹದೇವು, ಮಂಜು, ಕಿಟ್ಟಿ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.3.2024 ಭಾನುವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ,
ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಬೆಳಗ್ಗೆ 9ರಿಂದ; ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಬೆಳಗ್ಗೆ 6.30ರಿಂದ, ಸ್ಥಳ: ಆಸ್ಪತ್ರೆ ಆವರಣ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ:** 104ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಘಟಿಕೋತ್ಸವ ಭಾಷಣ: ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಉಪಸ್ಥಿತರು: ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ಕ್ರಾಫರ್ಡ್ ಭವನ (ವಿವಿ ಕಾರ್ಯಸೌಧ), ಬೆಳಗ್ಗೆ 10ಕ್ಕೆ.

■ **ಶ್ರೀ ರಾಮ್ ಯುವ ಬ್ರಿಗೇಡ್, ಸಾಮಾಜಿಕ ಸ್ವಯಂ ಸೇವಾ ಸಂಘ:** ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಮಾಜಿ ಶಾಸಕ ಎಲ್.ನಾಗೇಂದ್ರ, ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಟಿ.ದೇವೇಗೌಡ, ಮೈಸೂರು ಮತ್ತು ಚಾಮರಾಜನಗರ ನ್ಯಾಯಾಂಗ ಇಲಾಖೆ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ವಿ.ಶೇಷಾದ್ರಿ, ಡಿ.ರಾಘವೇಂದ್ರ, ವೀರೇಶ್ ರೆಡ್ಡಿ, ಆರ್.ಮಹೇಶ್‌ಕುಮಾರ್, ಪ್ರದೀಪ್‌ಕುಮಾರ್, ಪ್ರವೀಣ್‌ಕುಮಾರ್, ಸ್ಥಳ: #38, ರವಿಶಂಕರ್ ಲೇಔಟ್, ಬೋಗಾದಿ, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್:** ಮೈಸೂರು ಜಿಲ್ಲಾ ಅಧಿವೇಶನ, ದೂರಕರೆ ಉಪನ್ಯಾಸ ಮಾಲಿಕೆಯ 200ರ ಸಂಭ್ರಮ, ಉದ್ಘಾಟನೆ: ಪರಿಷತ್ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್, ಪ್ರಾಸ್ತಾವಿಕ ನುಡಿ: ವಲಯ ಪ್ರಮುಖ ಡಾ.ವಿ.ರಂಗನಾಥ್, ಮುಖ್ಯ ಅತಿಥಿಗಳು : ಬೆಂಗಳೂರು ನಗರ ಸಮಿತಿ ಅಧ್ಯಕ್ಷ ಎಂ.ಎಸ್.ನರಸಿಂಹಮೂರ್ತಿ, ಡಾ.ಜಿ.ರಾಮರತನ್, ನಾರಾಯಣ ಶೇವಿರೆ, ತಿಮ್ಮಣ್ಣ ಭಟ್, ಕ.ವೆಂ.ನಾಗರಾಜ, ದಿವಾಕರ ಹೆಗಡೆ, ಬಿ.ಕೆ.ಜಗದೀಶ್, ಸ್ಥಳ: ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ, ನಂಜುಮಳಿಗೆ, ಲಕ್ಷ್ಮೀಪುರಂ, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ:** ಶರಣ ಸಂಗಮ–291, ಪ್ರಾಧ್ಯಾಪಕ ಡಾ. ಡಿ.ಎಸ್. ಗುರು ಅವರಿಂದ ಪ್ರಜ್ಞಾವಂತ–ಶರಣರ ವಚನಗಳಲ್ಲಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಸಮಿತಿ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹೊಯ್ಸಳ ಕನ್ನಡ ಸಂಘ:** ಡಾ.ಎಸ್.ಸುಧಾ ಅವರ ನೆನಪಿನ ಹೆಜ್ಜೆಗಳು ಹಾಗೂ ಕೆ.ರಮೇಶ್ ಅವರ ಕಾಣದ ಗ್ರಾಮಕ್ಕೆ ಕೈಮರ ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ: ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಥಮ ಪ್ರತಿ ಸ್ವೀಕಾರ: ಭ್ರಮರತ್ನಂ, ಕೃತಿ ಕುರಿತು ಮಾತನಾಡುವವರು: ಸಂಸ್ಕೃತಿ ಸುಬ್ರಹ್ಮಣ್ಯ, ಕೆರೋಡಿ ಲೋಲಾಕ್ಷಿ, ಉಪಸ್ಥಿತರು: ಪ್ರಕಾಶಕ ನರಸಿಂಹ, ಡಾ.ಎಸ್.ಸುಧಾ, ಕೆ.ರಮೇಶ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಹಿರಿಯ ವಿದ್ಯಾರ್ಥಿಗಳ ಸಂಘ, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್:** ಹಿರಿಯ ವಿದ್ಯಾರ್ಥಿಗಳ ಸಭೆ ಹಾಗೂ ಕವನ ವಾಚನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಸಮರ್ಥನಂ ಅಂಗವಿಕಲರ ಸಂಸ್ಥೆ ಸಂಸ್ಥಾಪಕ ವ್ಯವಸ್ಥಾಪಕ ಡಾ.ಮಹಂತೇಶ್ ಜಿ.ಕಿವಡಸಣ್ಣವರ್, ಹಿರಿಯ ವಿದ್ಯಾರ್ಥಿ ಹೆಚ್.ಕೆ.ನಾಗೇಂದ್ರ, ವಿಜಯರಾಘ ವಾಚಾರ್ ಟ್ರಸ್ಟ್ ಅಧ್ಯಕ್ಷೆ ಎ.ವೈದೇಹಿ, ಕಾರ್ಯದರ್ಶಿ ಡಾ.ಎ.ಪುಷ್ಪ ಅಯ್ಯಂಗಾರ್, ಅಧ್ಯಕ್ಷತೆ: ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ.ಇಳಂಗೋವನ್, ಸ್ಥಳ: ಪಾಲಿಟೆಕ್ನಿಕ್ ಆವರಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಮಾಲೀಕರ ಸಂಘ:** 2ನೇ ಮೈಸೂರು ಜಿಲ್ಲಾ ಸಮ್ಮೇಳನ, ಮೆರವಣಿಗೆ, ಬಹಿರಂಗ ಸಭೆ, ಉದ್ಘಾಟನೆ: ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಗಿರೀಶ್ ತುಮಕೂರು, ಉಪಸ್ಥಿತರು: ಹಿರಿಯ ಕಾರ್ಮಿಕ ಮುಖಂಡ ಕಾಂ. ಶೇಷಾದ್ರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ಸೋಮರಾಜೇ ಅರಸ್, ರಾಮಕೃಷ್ಣ, ದೇವದಾಸ್, ಸ್ಥಳ: ಗಾಂಧಿ ವೃತ್ತ, ಬೆಳಗ್ಗೆ 11ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** 19ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ : ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಘಟಿಕೋತ್ಸವ ಭಾಷಣ : ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ಉಪಸ್ಥಿತರು : ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಕುಲಸಚಿವರಾದ ಪ್ರೊ. ಕೆ.ಬಿ. ಪ್ರವೀಣ, ಪ್ರೊ. ಕೆ.ಎಲ್.ಎನ್. ಮೂರ್ತಿ, ಸ್ಥಳ: ವಿಜ್ಞಾನ ಭವನ, ಕರಾಮುವಿವಿ, ಮ. 12ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ:** ಡಾ.ಬಿ.ಆರ್.ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಸಮಕಾಲೀನ ಜಗತ್ತು ಎಂಬ ವಿಷಯದ ಮೇಲೆ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯ ಅತಿಥಿಗಳು: ಸಣ್ಣ ಕೈಗಾರಿಕಾ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ಶರಣಬಸಪ್ಪ ದರ್ಶನಾಪುರ, ಸಮಾರೋಪ ನುಡಿ: ಸಾಮಾಜಿಕ ಹೊರಗಿಡುವಿಕೆ ಮತ್ತು ಅಂತರ್ಗತ ನೀತಿಯ ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ. ಯಗತಿ ಚಿನ್ನರಾವ್, ಉಪಸ್ಥಿತರು: ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಸ್ಥಳ: ಘಟಿಕೋತ್ಸವ ಭವನ, ಕರಾಮುವಿ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಗೀತ್ ಗಾತಾ ಚಲ್–22 :** ಡಾ. ಎಂ.ಎಸ್. ನಟಶೇಖರ್ ಮತ್ತು ಸಂಗಡಿಗರಿಂದ ಡಾಕ್ಟರ್ಸ್ ಮ್ಯೂಸಿಕಲ್ ನೈಟ್, ಮಹಾಪೋಷಕರು : ಡಾ. ಸಿ. ಉಮೇಶ್ ಕಾಮತ್, ಸಂಘಟನಾ ಅಧ್ಯಕ್ಷರು : ಡಾ. ಪಿ.ಎ. ಕುಶಾಲಪ್ಪ, ಸ್ಥಳ: ಕಲಾಮಂದಿರ, ಹುಣಸೂರು ರಸ್ತೆ, ಸಂಜೆ 5 ರಿಂದ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ, ಚಿಲಿಪಿಲಿ ಸಂಗೀತ ಸಾಂಸ್ಕೃತಿಕ ಕಲಾ ಅಕಾಡೆಮಿ, ಧಾರವಾಡ :** ಶ್ರೀ ಗುರು ವಚನ ಪ್ರಭ ಗಾನ–2024 ಹಾಗೂ ವಚನ ಗಾನೋತ್ಸವ, ಉದ್ಘಾಟನೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಅಧ್ಯಕ್ಷತೆ : ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಬಹುಮಾನ ವಿತರಣೆ : ಚಿಲಿಪಿಲಿ ಸಂಗೀತ ಸಾಂಸ್ಕೃತಿಕ ಕಲಾ ಅಕಾಡೆಮಿ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಮುಖ್ಯ ಅತಿಥಿಗಳು : ಗಾನಭಾರತಿ ಅಧ್ಯಕ್ಷ ಡಾ. ರಮಾ ವಿ. ಬೆಣ್ಣೂರ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 5ಕ್ಕೆ.

■ **ರಾಗಾ ವೈಭವ :** ಪಂಡಿತ್ ಪ್ರವೀಣ್ ಗೋಡ್ಕಿಂಡಿ–ಬಾನ್ಸುರಿ ಮತ್ತು ವಿದ್ವಾನ್ ಅನಿಲ್ ಶ್ರೀನಿವಾಸನ್–ಪಿಯಾನೋ ಅವರಿಂದ ಇನ್‌ಸ್ಟ್ರುಮೆಂಟಲ್ ಜುಗಲ್‌ಬಂದಿ, ವಿದ್ವಾನ್ ರೂಪಕ್ ಕಲ್ಲೂರ್‌ಕರ್–ತಬಲ, ವಿದ್ವಾನ್ ಬಿ.ಸಿ. ಮಂಜುನಾಥ್–ಮೃದಂಗ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ:** ರಂಗಭೂಮಿ ಡಿಪ್ಲೋಮಾ ವಿದ್ಯಾರ್ಥಿಗಳಿಂದ 'ಮಹಾಮಾಯಿ' ನಾಟಕ ಪ್ರದರ್ಶನ, ನಿರ್ದೇಶನ: ನಟನ ರಂಗಶಾಲೆ ಪ್ರಾಂಶುಪಾಲ ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶ್ರೀ ಲಕ್ಷ್ಮೀನರಸಿಂಹ ಧರ್ಮಶಾಲಾ ಮತ್ತು ವೇದ ಪಾಠಶಾಲಾ ಉದ್ಘಾಟನೆ ಮತ್ತು ಲೋಕಾರ್ಪಣೆ, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎಸ್.ಎ.ರಾಮದಾಸ್, ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್, ಕರ್ನಾಟಕ ಬ್ಯಾಂಕ್ ನಿರ್ದೇಶಕ ನ್ಯಾ.ಎ.ವಿ. ಚಂದ್ರಶೇಖರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾಧ್ಯಕ್ಷ ಡಿ.ಬಿ. ಪ್ರಕಾಶ್, ಮಾಜಿ ವಲಯಾಧ್ಯಕ್ಷ ಬಿ.ಎಲ್. ನಾಗೇಂದ್ರ ಪ್ರಸಾದ್, ಅಧ್ಯಕ್ಷತೆ : ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಜಯರಾಮ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ ಸಮುಚ್ಚಯ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 10ಕ್ಕೆ, ಸಂಜೆ 6.30 ರಿಂದ ಸಂಗೀತ ವಿದ್ಯಾನಿಧಿ ಡಾ. ವಿದ್ಯಾಭೂಷಣ ಮತ್ತು ಸಂಗಡಿಗರಿಂದ ಭಕ್ತಿ ಸಂಗೀತ.

■ **ರಂಗರತ್ನಾಕರ:** ವೃತ್ತಿ ರಂಗಗೀತೆಗಳ ಗಾಯನ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಲಕ್ಷ್ಮೀ ಎಂ.ಕಿರಣ್ ಮಾದೇಗೌಡ, ಮುಖ್ಯ ಅತಿಥಿಗಳು: ಕನ್ನಡ ವಿಕಾಸ ಶೈಕ್ಷಣಿಕ ಸಂಸ್ಥೆ ಕಾರ್ಯದರ್ಶಿ ಪ್ರೊ.ಹೆಚ್.ಜಿ.ಕೃಷ್ಣಪ್ಪ, ರಾಮಕೃಷ್ಣನಗರ ವಾಯು ವಿಹಾರಿಗಳ ಒಕ್ಕೂಟದ ಸಂಚಾಲಕ ಎಂ. ಕೆಂಪಯ್ಯ, ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆ ಅಧ್ಯಕ್ಷ ಬಸವಲಿಂಗಪ್ಪ ಹಾಡ್ಯ, ಅಪ್ಪು (ದಾಸಪ್ಪ) ವಿದ್ವಾನ್ ಕಿರಗಸೂರು ರಾಜಪ್ಪ, ಮಹೇಶ್ ಬಾಗಳಿ, ಶ್ರೀಮತಿ ಸುರಭಿ, ಕು. ಭೂಮಿಕ, ಎಚ್.ಎಸ್.ಗೋವಿಂದಗೌಡ, ಎಸ್.ಎಸ್.ಪುಟ್ಟೇಗೌಡ ಅವರಿಂದ ರಂಗ ಗೀತೆಗಳ ಗಾಯನ, ಸ್ಥಳ: ಶ್ರೀ ರಾಮಕೃಷ್ಣ ಪರಮಹಂಸ ಉದ್ಯಾನವನ, ರಾಮಕೃಷ್ಣನಗರ ಐ ಬ್ಲಾಕ್, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಬಿ.ಟಿ. ಲಲಿತಾ ನಾಯಕ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ:– ಒಡಹುಟ್ಟಿನ ನುಡಿಗಳು– ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ. ಸಂಗಮೇಶ್ ಸವದತ್ತಿ ಮಠ, 6.50 ರೈತರಿಗೆ ಸಲಹೆ, 8.30 ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ 2024 ಕುರಿತು ತಿಳಿಸಿಕೊಡಲಿದ್ದಾರೆ ಡಾ.ಜಯಂತ್ ಎಂ.ಎಸ್., ಮತ್ತು ಆಡಿ.ಸುಧೀರ್ ನಾಯಕ್, 9.05 ಸಹಬಾಳ್ವೆ–ವಿಶ್ವ ವನ್ಯಜೀವಿ ದಿನದ ಸಂದರ್ಭದಲ್ಲಿ ಅರಣ್ಯ ಇಲಾಖೆ ಮೈಸೂರು ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ್ ಅವರೊಂದಿಗೆ ಮಾತುಕತೆ, 9.40 ನಮ್ಮ ಆರೋಗ್ಯ–ನಮ್ಮ ಆರೋಗ್ಯ–ವಿಶ್ವ ಶ್ರವಣ ದಿನದ ಅಂಗವಾಗಿ ಶ್ರವಣ ಸಮಸ್ಯೆಗಳು ಮತ್ತು ಪರಿಹಾರ ಡಾ. ಮಂಜುಳಾ ಪಿ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಹಳ್ಳದಕೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.45 ಜನಪದ ಸಂಗೀತ –ಚಿನ್ನಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ಸವಿತಾ ಅಮರೇಶ್, ಸೀಮಾ ಎಂ. ಅಂಗಡಿ, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಸಿಪಾಯಿ", 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶಿವ ಪಂಚಾಕ್ಷರಿ ಮಹಿಮೆ, ಪ್ರಸ್ತುತಿ– ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿಯ ಕಲಾವಿದರು, 6.50 ಕೃಷಿರಂಗ–ಹಂದಿ ಸಾಕಾಣಿಕೆ ಕುರಿತು ಡಾ.ಟಿ.ಪಿ. ರಾಘವೇಂದ್ರ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಕಲಿಯುವ ಮನೆಯ ಅನಂತ ಕುಮಾರ್ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಮಲ್ಲಾಡಿ ಸಹೋದರರಿಂದ ಯುಗಳ ಗಾಯನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 3 ಭಾನುವಾರ 2024

ಸಂಪುಟ: 44 | ಸಂಚಿಕೆ: 315 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೋದಿ ಭಾರತ ಕಂಡ ಅಪ್ರತಿಮ ಪ್ರಧಾನಮಂತ್ರಿ; ಮತ್ತೆ ಬಹಳ ದೊಡ್ಡ ಬಹುಮತದೊಂದಿಗೆ ಗೆಲ್ಲುತ್ತಾರೆ...

–ದೇಶದ ಹಿರಿಯ ರಾಜಕೀಯ ಮುತ್ಸದ್ದಿ ಎಸ್.ಎಂ.ಕೃಷ್ಣ ಅಭಿಮತ



" ರಾಜಕೀಯ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಶತಮಾನ ಪೂರೈಸಿರುವ ಪ್ರತಿಷ್ಠಿತ ಮೈಸೂರು ವಿಶ್ವ ವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸುತ್ತಿದೆ. ಇವರು ಮೈಸೂರು ವಿವಿಯ ಹಳೆಯ ವಿದ್ಯಾರ್ಥಿ ಎನ್ನುವುದು ಗಮನಾರ್ಹ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ ಪದವಿ, ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದ ಇವರು ಅಮೆರಿಕಾದ ಸದರ್ನ್ ಮೆಥೊಡಿಸ್ಟ್ ವಿವಿಯಲ್ಲಿ ಉನ್ನತ ಶಿಕ್ಷಣ ಪೂರೈಸಿ, ಪ್ರತಿಷ್ಠಿತ ಫುಲ್‌ಬ್ರೈಟ್ ವಿದ್ಯಾರ್ಥಿ ವೇತನವನ್ನೂ ಪಡೆದಿದ್ದರು. ಶಿಕ್ಷಣ ಮುಗಿಸಿದ ನಂತರ ಬೆಂಗಳೂರಿನಲ್ಲಿ ಕೆಲಕಾಲ ಕಾನೂನು ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಬಳಿಕ ರಾಜಕೀಯ ರಂಗ ಪ್ರವೇಶಿಸಿದರು. ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ ಇವರು ವಿಧಾನ ಪರಿಷತ್ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ, ರಾಜ್ಯದ ಪ್ರಥಮ ಉಪಮುಖ್ಯ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಕೇಂದ್ರ ವಿದೇಶಾಂಗ ಸಚಿವರಾಗಿ, ಮಹಾರಾಷ್ಟ್ರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಮುಖ್ಯಮಂತ್ರಿಯಾಗಿದ್ದಾಗ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜಧಾನಿ ಬೆಂಗಳೂರು ಪ್ರವರ್ಧಮಾನಕ್ಕೆ ಬಂತು. ಎಲ್ಲಾ ವಿಧದಲ್ಲೂ ಬೆಂಗಳೂರಿನ ಚಿತ್ರಣವನ್ನೇ ಬದಲಿಸಿದರು. ಮೈಸೂರಿನಲ್ಲಿ ಇನ್ಫೋಸಿಸ್ ಸಂಸ್ಥೆ ಸ್ಥಾಪನೆಗೂ ಇವರೇ ಕಾರಣಕರ್ತರು. 'ಪದ್ಮವಿಭೂಷಣ' ಎಸ್.ಎಂ.ಕೃಷ್ಣ ಅವರು 91ನೇ ವಯಸ್ಸಿನಲ್ಲಿ ತಾವು ಓದಿದ ಮೈಸೂರು ವಿವಿಯ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಪಾತ್ರರಾಗುತ್ತಿರುವ ಸುಸಂದರ್ಭದಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮನಬಿಚ್ಚಿ ಮಾತನಾಡಿದ್ದಾರೆ.

ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: *ಶತಮಾನ ಪೂರೈಸಿರುವ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ತಮಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸುತ್ತಿರುವ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು?.*

ಎಸ್.ಎಂ.ಕೃಷ್ಣ: ನಾನು ಓದಿದಂತಹ ಮಹಾರಾಜ ಕಾಲೇಜು, ಮೈಸೂರು ವಿಶ್ವ ವಿದ್ಯಾನಿಲಯದ ಅಂಗಸಂಸ್ಥೆ. ಹಾಗಾಗಿ ನಾನು ಓದಿದ ವಿವಿಯಿಂದಲೇ ಈ ಗೌರವಕ್ಕೆ ಭಾಜನವಾಗುತ್ತಿರುವುದು ತುಂಬಾ ಸಂತೋಷ ತಂದಿದೆ. ಮೈಸೂರಿಗೆ ಬಂದಾಗಲೆಲ್ಲಾ ನನ್ನ ಕಾಲೇಜು ದಿನಗಳು ನೆನಪಾಗುತ್ತವೆ. ಅದು ಉತ್ತಮ ನಾಗರಿಕನಾಗುವ ರಚನಾತ್ಮಕ ಕ್ರಾಂತಿಯ ಕಾಲಘಟ್ಟ, ಆದ್ದರಿಂದ ಹಿಂದಿರುಗಿ ನೋಡಿದಾಗ ತುಂಬಾ ಖುಷಿಯಾಗುತ್ತದೆ. ಆದರೂ ನಮ್ಮ ಕಾಲವನ್ನು ನಾವು ಇನ್ನೂ ಹೆಚ್ಚು ಉಪಯುಕ್ತವಾಗಿ ಬಳಕೆ ಮಾಡಬಹುದಿತ್ತೇನೋ ಎನ್ನುವ ಭಾವನೆ ಕಾಡುತ್ತದೆ.

ಮಿತ್ರ: *ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹಾಗೂ ರಾಜ್ಯ ಶಿಕ್ಷಣ ನೀತಿ(ಎಸ್‌ಇಪಿ) ಗೊಂದಲ ಸೃಷ್ಟಿಯಾಗಿರುವ ಬಗ್ಗೆ ನಿಮ್ಮ ಅಭಿಪ್ರಾಯವೇನು?.*

ಎಸ್‌ಎಂಕೆ: ಗೊಂದಲಗಳು ಇಲ್ಲದಿದ್ದಾಗ ಮಾತ್ರ ವಿದ್ಯಾ ಕ್ಷೇತ್ರ ಸ್ವಚ್ಛಂಧವಾಗಿ ಬಹಳ ಮುಂದುವರೆಯಲು ಸಾಧ್ಯ. ಈ ರೀತಿ ಅನಾವಶ್ಯಕವಾಗಿ ಗೊಂದಲ ಸೃಷ್ಟಿಸುತ್ತಿರುವುದು ಸಾದುವಲ್ಲ ಎನ್ನುವುದು ನನ್ನ ಭಾವನೆ.

ಮಿತ್ರ: *ಇತ್ತೀಚೆಗೆ ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ್ ಪರ ಘೋಷಣೆ ವಿಚಾರ ಹಾಗೂ ಆ ಸಂಬಂಧ ರಾಜಕೀಯ ಆರೋಪ–ಪ್ರತ್ಯಾರೋಪದ ಬಗ್ಗೆ ನಿಮ್ಮ ಅನಿಸಿಕೆ ಏನು?.*

ಎಸ್‌ಎಂಕೆ: ನಾನು ರಾಜಕಾರಣದಿಂದ ನಿವೃತ್ತಿ ಪಡೆದಿರುವುದರಿಂದ ಅದರಿಂದ ಬಹಳ ದೂರ ಉಳಿದಿದ್ದೇನೆ. ಆದರೆ ವಿಧಾನಸೌಧದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗುವುದನ್ನು ಯಾರು ಒಪ್ಪುತ್ತಾರೆ. ಅದು ಯಾರೂ ಒಪ್ಪದ ಸಂಗತಿ. ಈ ಸಂಬಂಧ ತನಿಖೆ ನಡೆಸುತ್ತಿರುವುದಾಗಿ ಹೇಳಿದ್ದಾರೆ, ನೋಡೋಣ...

ಮಿತ್ರ: *ನಿನ್ನೆಯಷ್ಟೇ ಬೆಂಗಳೂರಿನ ಪ್ರಸಿದ್ಧ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿದ ಪ್ರಕರಣದ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?.*

ಎಸ್‌ಎಂಕೆ: ಈ ಘಟನೆ ತುಂಬಾ ಆಘಾತಕಾರಿ. ಇನ್ನೂ ತನಿಖಾ ಸಂಸ್ಥೆಗಳು ಪ್ರಕರಣದ ತನಿಖೆ ನಡೆಸುತ್ತಿವೆ. ಸ್ಫೋಟಿಸಿದ್ದರ ಹಿಂದಿರುವ ಉದ್ದೇಶವೇನು? ಅದರ ಹಿಂದೆ ಯಾರಿದ್ದಾರೆ? ಯಾವ ಶಕ್ತಿಗಳು ಈ ದುಷ್ಕೃತ್ಯ ನಡೆಸಿವೆ? ಎನ್ನುವುದರ ಬಗ್ಗೆ ಅಮೂಲಾಗ್ರವಾಗಿ ತನಿಖೆ ಮಾಡುತ್ತಿದ್ದಾರೆ. ತನಿಖೆ ವರದಿ ಬರುವವರೆಗೂ ಎಲ್ಲರೂ ಕಾಯಬೇಕಾಗುತ್ತದೆ.

ಮಿತ್ರ: *ಕೆಲ ರಾಜಕಾರಣಿಗಳು ಇತ್ತೀಚೆಗೆ ಯಾವುದೇ ಇತಿ–ಮಿತಿ ಇಲ್ಲದೆ, ಸಭ್ಯತೆ ಮೀರಿ ಮಾತ ನಾಡುತ್ತಾರೆ. ಅಂತಹವರಿಗೆ ಹಿರಿಯರಾಗಿ ನೀವೇ ನಾದರೂ ಸಲಹೆ ನೀಡುವಿರಾ?.*

ಎಸ್‌ಎಂಕೆ: ಪ್ರತಿಯೊಂದು ಕಾಲಘಟ್ಟದಲ್ಲೂ ರಾಜಕಾರಣ ತನ್ನದೇ ಆದ ಚೌಕಟ್ಟಿನಲ್ಲಿ ನಡೆಯುತ್ತಾ ಬಂದಿದೆ. ಇಂದಿನ ಚೌಕಟ್ಟು ಅದೇ ಇರಬಹುದೇನೋ?. ಆದರೆ ಜನಪ್ರತಿನಿಧಿಗಳಾದವರು ಬಹಳ ಗಂಭೀರವಾಗಿ ಹಾಗೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಯಾವುದೇ ವಿಚಾರದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗ ಸಭ್ಯತೆಯ ಚೌಕಟ್ಟನ್ನು ಮೀರಬಾರದು. ಇದು ಸಾರ್ವತ್ರಿಕವಾಗಿ ಎಲ್ಲರೂ ಒಪ್ಪುವಂತಹ ವಿಚಾರ.

ಮಿತ್ರ: *ಮುಂಬರುವ ಲೋಕಸಭಾ ಚುನಾವಣೆ ಬಗ್ಗೆ ನಿಮ್ಮ ಅಭಿಪ್ರಾಯ ಏನಿರಬಹುದು?.*

ಎಸ್‌ಎಂಕೆ: ಪ್ರಧಾನಿ ಮೋದಿ ಅವರು ಯಾವ ಆಕಾಂಕ್ಷೆಗಳನ್ನೂ ಇಟ್ಟುಕೊಳ್ಳದೆ ದೇಶಕ್ಕಾಗಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಭಾರತ ಕಂಡ ಒಬ್ಬ ಅಪ್ರತಿಮ ಪ್ರಧಾನ ಮಂತ್ರಿ ನರೇಂದ್ರ ಮೋದಿ. ನಾವು ಅವರಿಗೆ ಇನ್ನೂ ಹೆಚ್ಚಿನ ಶಕ್ತಿ ಕೊಡಬೇಕು. ಅವರ ಕೈಗಳನ್ನು ಬಲಪಡಿಸಬೇಕು. ಭಾರತ ಇನ್ನೂ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುವ ದಿಸೆಯಲ್ಲಿ ನಾವು ಸಹಕರಿಸಬೇಕು. ದೇಶದ ಜನರ ಬೆಂಬಲದಿಂದ ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರು ಬಹಳ ದೊಡ್ಡ ಬಹುಮತದೊಂದಿಗೆ ಗೆಲ್ಲುತ್ತಾರೆ ಎಂಬುದು ನನ್ನ ಬಲವಾದ ನಂಬಿಕೆ.

ಮಿತ್ರ: *ಪ್ರಧಾನಮಂತ್ರಿ, ಮುಖ್ಯಮಂತ್ರಿ ಹೀಗೆ ಗೌರವಾನ್ವಿತ ಸ್ಥಾನದಲ್ಲಿರುವವರನ್ನು ಏಕ ವಚನದಲ್ಲಿ ಸಂಬೋಧಿಸಿ, ವ್ಯಂಗ್ಯ ಮಾಡುವ ಸಂಸ್ಕೃತಿ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?.*

ಎಸ್‌ಎಂಕೆ: ಯಾರೇ ಆಗಲಿ ಗಂಭೀರವಾಗಿ, ಜವಾಬ್ದಾರಿಯುತವಾಗಿ ಮಾತನಾಡಬೇಕು. ರಾಜಕಾರಣದಲ್ಲೂ ಒಂದು ನೀತಿ ಸಂಹಿತೆ ಇದೆ. ಪ್ರತಿಯೊಬ್ಬರೂ ಪರಸ್ಪರ ಗೌರವಿಸ ಬೇಕು. ಎದುರಾಳಿಗಳನ್ನೂ ಕೂಡ ಗೌರವದಿಂದ ಸಂಬೋಧಿಸಬೇಕು. ಇದು ಇಂದಿನ ಅಗತ್ಯಗಳಲ್ಲಿ ಬಹು ಮುಖ್ಯವಾದುದು.

ಮಿತ್ರ: *ರಾಜಕಾರಣಕ್ಕೆ ಯುವ ಜನತೆ ಅವಶ್ಯಕತೆಯ ನಿಟ್ಟಿನಲ್ಲಿ ನಿಮ್ಮ ಸಲಹೆ ಏನು?.*


ಎಸ್‌ಎಂಕೆ: ರಾಜಕಾರಣದಲ್ಲಿ ಯುವ ಜನತೆ ಅವಶ್ಯಕತೆ ತುಂಬಾ ಇದೆ. ಯುವ ಜನತೆ ರಾಜಕಾರಣದಲ್ಲಿ ತಮ್ಮನ್ನು ತಾವು ಹೆಚ್ಚು ತೊಡಗಿಸಿಕೊಳ್ಳಬೇಕು. ದೇಶ ಕಟ್ಟುವಂತಹ, ದೇಶದ ಭವಿಷ್ಯವನ್ನು ಗುರುತಿಸುವಂತಹ ದಿಸೆಯಲ್ಲಿ ಅವರು ರಾಜಕೀಯ ಕ್ಷೇತ್ರದಲ್ಲಿ ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕಿದೆ.

ವಾರಣಾಸಿಯಿಂದಲೇ ಪ್ರಧಾನಿ ಮೋದಿ ಸ್ಪರ್ಧೆ

ಲೋಕಸಭೆ ಚುನಾವಣೆಗೆ ಬಿಜೆಪಿಯ 195 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ



- ಕರ್ನಾಟಕದ ಒಂದೂ ಕ್ಷೇತ್ರದ ಅಭ್ಯರ್ಥಿ ಈ ಪಟ್ಟಿಯಲ್ಲಿಲ್ಲ
- ಗಾಂಧಿ ನಗರದಿಂದ ಅಮಿತ್ ಶಾ, ಲಖನೌದಿಂದ ರಾಜನಾಥ ಸಿಂಗ್, ಸುಷ್ಮಾ ಸ್ವರಾಜ್ ಪುತ್ರಿಗೂ ಟಿಕೆಟ್
- ಮೊದಲ ಪಟ್ಟಿಯಲ್ಲಿ 28 ಮಹಿಳೆಯರು, 57 ಹಿಂದುಳಿದ ವರ್ಗ, 27 ಎಸ್‌ಸಿ, 18 ಎಸ್‌ಟಿ; ಇಬ್ಬರು ಸಿಎಂಗಳು, 34 ಕೇಂದ್ರ ಸಚಿವರಿದ್ದಾರೆ



ರಾಜನಾಥ್‌ಸಿಂಗ್



ಅಮಿತ್ ಷಾ

ನವದೆಹಲಿ, ಮಾ.2– ಮುಂಬರುವ ಲೋಕಸಭಾ ಚುನಾವಣೆಗೆ ಭಾರೀ ತಯಾರಿ ನಡೆಸಿರುವ ಬಿಜೆಪಿ ಇಂದು ತನ್ನ ಪಕ್ಷದ 195 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯ ದಿನಾಂಕಗಳನ್ನು ಭಾರತೀಯ ಚುನಾವಣಾ ಆಯೋಗವು (ಇಸಿಐ) ಘೋಷಿಸುವ ಮೊದಲು ಬಿಜೆಪಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ 370+ ಮತ್ತು NDA 400+ ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದೆ. ಮೊದಲ ಪಟ್ಟಿಯಲ್ಲಿ ಕರ್ನಾಟಕದ ಯಾವುದೇ ಕ್ಷೇತ್ರದ ಅಭ್ಯರ್ಥಿಯ ಹೆಸರು ಪ್ರಕಟ ಮಾಡಿಲ್ಲ. ವಾರಣಾಸಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಸ್ಪರ್ಧಿಸುತ್ತಿದ್ದಾರೆ. ಗುಜರಾತ್‌ನ ಗಾಂಧಿನಗರದಿಂದ ಅಮಿತ್ ಶಾ, ಲಖನೌದಿಂದ ರಾಜನಾಥಸಿಂಗ್ ಸ್ಪರ್ಧಿಸುತ್ತಿದ್ದಾರೆ. ಈ ಬಾರಿ ಮಾಜಿ ಸಚಿವೆ ದಿವಂಗತ ಸುಷ್ಮಾ ಸ್ವರಾಜ್ ಅವರ ಪುತ್ರಿಗೆ ಟಿಕೆಟ್ ನೀಡಲಾಗಿದೆ. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಕೇರಳದ ತಿರುವನಂತ ಪುರಂನಿಂದ ಕಣಕ್ಕಿಳಿಯಲಿದ್ದಾರೆ. ಬಿಜೆಪಿಯ ಮೊದಲ ಪಟ್ಟಿಯಲ್ಲಿ ಹೊಸ ಮುಖಗಳಿಗೆ ಆದ್ಯತೆ ನೀಡಲಾಗಿದ್ದು, ಹಲವು ಕಡೆ ಹಾಲಿ ಸಂಸದರಿಗೆ ಕೊಕ್ ನೀಡಲಾಗಿದೆ. ಈ ಪಟ್ಟಿಯಲ್ಲಿ 28 ಮಹಿಳೆಯರು, 57 ಹಿಂದುಳಿದ ವರ್ಗದವರು, 27 ಪರಿಶಿಷ್ಟ ಜಾತಿ, 18 ಪರಿಶಿಷ್ಟ ಪಂಗಡದವರಿಗೆ ಅವಕಾಶ ಕಲ್ಪಿಸಲಾಗಿದೆ. ಇಬ್ಬರು ಮಾಜಿ ಮುಖ್ಯಮಂತ್ರಿಗಳು ಹಾಗೂ 34 ಕೇಂದ್ರ ಸಚಿವರಿಗೆ ಟಿಕೆಟ್ ನೀಡಲಾಗಿದೆ. ಯುವಕರಿಗೆ ಹೆಚ್ಚಿನ ಆದ್ಯತೆ ನೀಡಿರುವ ಬಿಜೆಪಿ, 50 ವರ್ಷಕ್ಕಿಂತ ಕಡಿಮೆ ವಯಸ್ಸಿನ 47 ಮಂದಿಯನ್ನು ಮೊದಲ ಪಟ್ಟಿಯಲ್ಲಿ ಘೋಷಿಸಿದೆ.

ಉತ್ತರ ಪ್ರದೇಶ 51, ಪಶ್ಚಿಮ ಬಂಗಾಳ 20, ಮಧ್ಯಪ್ರದೇಶ 24, ಗುಜರಾತ್ ಮತ್ತು ರಾಜಸ್ಥಾನದಿಂದ ತಲಾ 15, ಕೇರಳದ 12, ತೆಲಂಗಾಣದ 9, ಅಸ್ಸಾಂನ 11, ಜಾರ್ಖಂಡ್ ಮತ್ತು ಛತ್ತೀಸ್‌ಗಢದಿಂದ ತಲಾ 11 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ದೆಹಲಿಯ 5, ಜಮ್ಮು ಮತ್ತು ಕಾಶ್ಮೀರದಿಂದ 2, ಉತ್ತರಾಖಂಡದಿಂದ 3, ಅರುಣಾಚಲ ಪ್ರದೇಶದಿಂದ 2 ಮತ್ತು ಗೋವಾ, ತ್ರಿಪುರ, ಅಂಡಮಾನ್ ಮತ್ತು ನಿಕೋಬಾರ್, ದಮನ್ ಮತ್ತು ದಿಯುನಿಂದ ತಲಾ 1 ಕ್ಷೇತ್ರದ ಅಭ್ಯರ್ಥಿಗಳ ಹೆಸರನ್ನು ಘೋಷಿಸಲಾಗಿದೆ.

ಕರ್ನಾಟಕದಲ್ಲಿ ಯಾರ ಹೆಸರೂ ಇಲ್ಲ: ಬಿಜೆಪಿ ಘೋಷಿಸಿದ ಮೊದಲ ಪಟ್ಟಿಯಲ್ಲಿ ಕರ್ನಾಟಕದ ಯಾವ ಕ್ಷೇತ್ರಕ್ಕೂ ಅಭ್ಯರ್ಥಿಯನ್ನು ಘೋಷಿಸಿಲ್ಲ. ಬಿಜೆಪಿ ಮತ್ತು ಜೆಡಿಎಸ್ ನಡುವಿನ ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಕರ್ನಾಟಕದ ಅಭ್ಯರ್ಥಿಗಳನ್ನು ಘೋಷಿಸಿಲ್ಲ ಎಂದು ಹೇಳಲಾಗಿದೆ. ಅಲ್ಲದೇ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಹಾಲಿ ಸಂಸದರಿಗೆ ಕೊಕ್ ನೀಡಿ ಹೊಸ ಮುಖಗಳಿಗೆ ಮಣೆ ಹಾಕಲು ಬಿಜೆಪಿ ಮುಂದಾಗಿರುವುದರಿಂದ ರಾಜ್ಯದ ಅಭ್ಯರ್ಥಿಗಳ ಆಯ್ಕೆ ತುಸು ವಿಳಂಬವಾಗಿದೆ ಎಂದು ಹೇಳಲಾಗಿದೆ.

ಮಂಗಳೂರು ಕುಕ್ಕರ್ ಬಾಂಬ್‌ಗೂ ರಾಮೇಶ್ವರಂ ಕೆಫೆ ಸ್ಫೋಟಕ್ಕೂ ಸಾಮ್ಯ

- ತನಿಖಾ ಪೊಲೀಸರ ಶಂಕೆ
- ಇಲ್ಲಿನ ಸ್ಫೋಟಕದಲ್ಲೂ ಒಂದೇ ರೀತಿಯ ಪದಾರ್ಥ ಬಳಕೆ
- ಬ್ಯಾಗ್ ನೇರವಾಗಿ ಇಟ್ಟಿದ್ದರಿಂದ ಹೋಟೆಲ್ ಮೇಲ್ಛಾವಣಿ ಛಿದ್ರಗೊಂಡಿದೆ; ಅಡ್ಡಾದಿಡ್ಡಿ ಇಟ್ಟಿದ್ದರೆ 20ರಿಂದ 30 ಜನ ಬಲಿಯಾಗುತ್ತಿದ್ದರು
- ದುಷ್ಕರ್ಮಿ ಒಂದು ಗಂಟೆ ಕಾದು, ಅಧಿಕ ಜನ ಸೇರಿದಾಗ ಸ್ಫೋಟಿಸಿದ್ದಾನೆ

ಬೆಂಗಳೂರು, ಮಾ.2(ಕೆಎಂಶಿ)– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ರೂವಾರಿಗಳೇ ಬೆಂಗಳೂರು ನಗರದ ಹೋಟೆಲ್‌ನಲ್ಲಿ ನಿನ್ನೆ ಸ್ಫೋಟ ನಡೆಸಿದ್ದಾರೆಂದು ಪೊಲೀಸರು ಶಂಕಿಸಿದ್ದಾರೆ. ವಿಶ್ವಮಟ್ಟದಲ್ಲಿ ಐಟಿ ಕಾರಿಡಾರ್ ಎಂದು ಗುರುತಿಸಲ್ಪಟ್ಟಿರುವ ನಗರದ ವೈಟ್‌ಫೀಲ್ಡ್‌ನ ಜನದಟ್ಟಣೆ ಪ್ರದೇಶವೇ ಸುಕ್ಷಿತವಾಗಿಲ್ಲ ಎಂಬುದನ್ನು ಜಾಗತಿಕ ಮಟ್ಟದಲ್ಲಿ ತೋರ್ಪಡಿಸಲು ಇಂತಹ ಯತ್ನ ಮಾಡಲಾಗಿದೆ ಎಂದು ಶಂಕಿಸಲಾಗಿದೆ.

ಭಯೋತ್ಪಾದನಾ ಸಂಘಟನೆಗಳಿಂದ ಪ್ರಚೋದಿತಗೊಂಡ ಕೆಲವು ಪುಡಿ ಸಂಘಟನೆಗಳು ಈ ಕೃತ್ಯದಲ್ಲಿ ಭಾಗಿಯಾಗಿವೆ.

ಕೇಂದ್ರದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂಬುದನ್ನು ಸಹಿಸಲಾಗದೆ, ಅಲ್ಲದೆ, ಆಡಳಿತ ಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿ, ಸಾರ್ವಜನಿಕರು ಅತ್ತ ಗಮನಹರಿಸಿರುವ ಸಂದರ್ಭದಲ್ಲಿ ವಿಶ್ವಮಟ್ಟದ ಗಮನ ಸೆಳೆಯುವ ಕೃತ್ಯ ಇದಾಗಿದೆ ಎಂದು ಶಂಕಿಸಲಾಗಿದೆ.



ಆರೋಪಿ

ಮಂಗಳೂರು ಕುಕ್ಕರ್ ಸ್ಫೋಟ ಪ್ರಕರಣದಲ್ಲಿ ಬಳಸಿದ ಸಾಧನಗಳನ್ನೇ ಇಲ್ಲೂ ಬಳಸಲಾಗಿದೆ, ಹೀಗಾಗಿ ಈ ವ್ಯಕ್ತಿ ಕರಾವಳಿಯವನಾಗಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ. ಹೋಟೆಲ್‌ನಲ್ಲಿ ಸ್ಫೋಟಕ ತುಂಬಿದ ಬ್ಯಾಗ್ ಅನ್ನು ನೇರವಾಗಿ ಇಡದೆ ಅಡ್ಡಾದಿಡ್ಡಿಯಾಗಿ ಇಟ್ಟಿದ್ದರೆ 20 ರಿಂದ 30 ಜನರು ಪ್ರಾಣ ಕಳೆದುಕೊಳ್ಳುತ್ತಿದ್ದರು. ನೇರವಾಗಿ ಇಟ್ಟಿದ್ದರಿಂದ ಅದು ಮೇಲಕ್ಕೆ ಚಿಮ್ಮಿ ಹೋಟೆಲ್‌ನ ಮಾಲ್ಛಾವಣಿ ಛಿದ್ರವಾಗಿದ್ದು, ಕೆಲವರಿಗೆ ಗಾಯಗಳಾಗಿ, ದೊಡ್ಡ ಅಪಾಯ ತಪ್ಪಿದೆ. ನಗರ ಸಾರಿಗೆ ಬಸ್‌ನಲ್ಲಿ ಐಟಿ ಕಾರಿಡಾರ್ ಪ್ರದೇಶಕ್ಕೆ ಧಾವಿಸಿದ ಯುವಕ, ಮಧ್ಯಾಹ್ನ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿಗಳು ಊಟಕ್ಕೆ ಬರುವ ಮತ್ತು ಜನನಿಬಿಡ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಈ ಸ್ಫೋಟಕ ಇಟ್ಟಿದ್ದಾನೆ. ಇಡ್ಲಿಗಾಗಿ ಟೋಕನ್ ಪಡೆದು, ಒಂದು ತಾಸು ಅಲ್ಲಿಯೇ ಕಳೆದು, ಜನರು ದೊಡ್ಡ ಸಂಖ್ಯೆಯಲ್ಲಿ ಸೇರಿದ ನಂತರ ತಿಂಡಿ ತಿಂದು, ತಾನು ತಂದಿದ್ದ ಸ್ಫೋಟಕ ವಸ್ತುವನ್ನು ಕಟ್ಟೆ ಮೇಲಿಟ್ಟು ತೆರಳಿದ್ದಾನೆ.

ಕಟ್ಟೆಚ್ಚರ ವಹಿಸುವಂತೆ ಪೊಲೀಸರಿಗೆ ಸಿಎಂ ಸಿದ್ದರಾಮಯ್ಯ ಸೂಚನೆ

ಬೆಂಗಳೂರು, ಮಾ.2(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸ್ಥಳ ಪರಿಶೀಲನೆ ಮತ್ತು ಗಾಯಾಳುಗಳ ಕ್ಷೇಮ ವಿಚಾರಿಸಿದ ನಂತರ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದಿದ್ದಲ್ಲದೆ, ಮುಂದಿನ ದಿನಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚಿಸಿದ್ದಾರೆ.



ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಕಿಡಿಗೇಡಿಗಳು ಕಾನೂನು ಸುವ್ಯವಸ್ಥೆ ಹಾಳು ಮಾಡಲು ಪ್ರಯತ್ನಿಸುತ್ತಾರೆ ಎಚ್ಚರವಿರಲಿ. ಜನನಿಬಿಡ ಪ್ರದೇಶ, ಪ್ರವಾಸಿ ಕೇಂದ್ರ, ಅಣೆಕಟ್ಟುಗಳ ಸುರಕ್ಷತೆ, ಆಸ್ಪತ್ರೆ, ಸರ್ಕಾರಿ ಕಚೇರಿ, ರೈಲು ಮತ್ತು ಬಸ್ ನಿಲ್ದಾಣಗಳಲ್ಲಿ ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕು ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಿ ಎಂದಿದ್ದಾರೆ.

ಬಾಂಬ್ ಸ್ಫೋಟ ಮಾಡಿದ ವ್ಯಕ್ತಿ ಮತ್ತು ಗುಂಪನ್ನು ಶೀಘ್ರದಲ್ಲೇ ಬಂಧಿಸುವ ಭರವಸೆಯನ್ನು ಪೊಲೀಸರು ಮುಖ್ಯಮಂತ್ರಿ ಅವರಿಗೆ ಇದೇ ವೇಳೆ ನೀಡಿದ್ದು, ತನಿಖೆ ಎನ್‌ಐಎಗೆ ವಹಿಸುವುದು ಬೇಡ ಎಂದಿದ್ದಾರೆ. ರಾಜ್ಯಸಭಾ ಚುನಾವಣಾ ಫಲಿತಾಂಶದ ನಂತರ ಸಂಭ್ರಮಾಚರಣೆ ಸಂದರ್ಭದಲ್ಲಿ ● 9ನೇ ಪುಟಕ್ಕೆ

ಸಿಸಿಬಿ ತನಿಖೆ

ಈಗಾಗಲೇ ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ

ಬೆಂಗಳೂರು, ಮಾ.2– ನಗರದ ರಾಮೇಶ್ವರಂ ಕೆಫೆಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಆದೇಶ ಹೊರಡಿಸಿದ್ದಾರೆ. ಹೆಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಬಾಂಬ್ ಸ್ಫೋಟದ ಬಗ್ಗೆ ಪ್ರಕರಣ ದಾಖಲಾಗಿತ್ತು. ಇದರ ತನಿಖೆಯನ್ನು ರಾಜ್ಯ ಸರ್ಕಾರವು ಸಿಸಿಬಿ ಹೆಗಲಿಗೆ ಒಪ್ಪಿಸಿದ್ದು, ತನಿಖಾಧಿಕಾರಿಯಾಗಿ ಎಸಿಪಿ ನವೀನ್ ಕುಲಕರ್ಣಿ ನೇಮಕಗೊಂಡಿದ್ದಾರೆ.

ರಾಮೇಶ್ವರಂ ಕೆಫೆ ಘಟನೆಗೆ ಸಂಬಂಧಿಸಿದಂತೆ ಪೊಲೀಸ್ ತನಿಖೆ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. ಘಟನಾ ಸ್ಥಳದಲ್ಲಿ ದೊರೆತ ಕುರುಹುಗಳ ಆಧಾರದ ಮೇಲೆ ಅನೇಕ ಪೊಲೀಸ್ ತಂಡಗಳು ಬೇರೆ ಬೇರೆ ಆಯಾಮಗಳಿಂದ ತನಿಖೆ ಕೈಗೊಳ್ಳುತ್ತಿವೆ. ಇದೊಂದು ಭದ್ರತಾ ವಿಷಯಕ್ಕೆ ಸಂಬಂಧಿಸಿದ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ (ಕೋಪದಿಂದ) : "ನಿಮ್ಮನ್ನು ಮದುವೆ ಆಗುವ ಬದಲು ಒಬ್ಬ ರಾಕ್ಷಸನನ್ನು ಮದುವೆಯಾಗಿದ್ರೂ ನಾನು ಎಷ್ಟೋ ಸುಖವಾಗಿರ್ತಿದ್ದೆ."

ಗಂಡ : ಹಾಗೆಲ್ಲ ರಕ್ತಸಂಬಂಧದಲ್ಲಿ ಮದುವೆ ಆಗಬಾರದು ಕಣೆ! ಮಕ್ಕಳಿಗೂ ಒಳ್ಳೆಯದಲ್ಲ!!

ಮೈಸೂರು ಮಿತ್ರ

ಭಾನುವಾರ, 3 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮಹಾತ್ಮರ ಮನಸ್ಸು ಸಂಪತ್ತಿರುವಾಗ ಕಮಲದಂತೆ ಕೋಮಲವಾಗಿಯೂ, ಆಪತ್ಕಾಲದಲ್ಲಿ ಮಹಾಶೈಲದ ಬಂಡೆಗಳ ರಾಶಿಯಂತೆ ಗಟ್ಟಿಯಾಗಿಯೂ ಇರುತ್ತದೆ – ಬತೃಹರಿ ನೀತಿಶತಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಣ್ಣೋದು ಭಂಗದ ಕೂಳು, ಆಡೋದು ಅರಸನ ಮಾತು

ನಿಮ್ಮ ಪತ್ರಗಳು

ಭಾಷ್ಯಂ ಸ್ವಾಮೀಜಿಗೆ ಮತ್ತಷ್ಟು ಪುರಸ್ಕಾರ ದೊರೆಯಲಿ

ಮಾನ್ಯರೇ,



ಮೈಸೂರಿನ ವಿಜಯನಗರದಲ್ಲಿರುವ ಶ್ರೀಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿಯವರಿಗೆ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ದೊರಕಿರುವುದು ಹೆಮ್ಮೆಯ ವಿಷಯ. ಸರಳ ವ್ಯಕ್ತಿತ್ವದ ಸ್ವಾಮೀಜಿಯವರಿಗೆ ಈಗಾಗಲೇ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಪ್ರಶಸ್ತಿಗಳು ಲಭಿಸಿವೆ. ಅವರು ಎಂದೂ ಪ್ರಶಸ್ತಿಗಳನ್ನು ಅಪೇಕ್ಷಿಸಿದವರಲ್ಲ. ಎಲ್ಲರೊಂದಿಗೆ ಸಮಾನ ಬಾಂಧವ್ಯವನ್ನು ಹೊಂದಿ, ಉತ್ತಮವಾಗಿ ಸ್ಪಂದಿಸುವುದು ಅವರ ವಿಶೇಷ ಗುಣ. ಮೈಸೂರಿನ ಸರ್ಕಾರಿ ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಸಾಕಷ್ಟು ಶಿಷ್ಯವೃಂದವನ್ನು ತಯಾರು ಮಾಡಿದ್ದಾರೆ. ಮೂಲತಃ ಮೇಲುಕೋಟೆಯವರಾದ ಸ್ವಾಮೀಜಿ ಹೂಟಗಳ್ಳಿಯಲ್ಲಿ ಸುದರ್ಶನ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಹಲವಾರು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಅಜಾತಶತ್ರು ಪ್ರೊ.ಭಾಷ್ಯಂ ಸ್ವಾಮೀಜಿಯವರಿಗೆ ಇನ್ನೂ ಹೆಚ್ಚಿನ ಪ್ರಶಸ್ತಿಗಳು, ಪುರಸ್ಕಾರಗಳು ದೊರಕಲಿ ಎಂಬುದೇ ನಮ್ಮೆಲ್ಲರ ಆಶಯ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ವಿದ್ಯುತ್ ದರ ಇಳಿಕೆ ಸ್ವಾಗತಾರ್ಹ

ಮಾನ್ಯರೆ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಇತ್ತೀಚಿನ ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ವಿದ್ಯುತ್ ದರವನ್ನು ಇಳಿಸಿರುವುದು ಸ್ವಾಗತಾರ್ಹ. 100 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಕೆದಾರರಿಗೆ ಪ್ರತಿ ಯೂನಿಟ್ ಮೇಲೆ 1 ರೂಪಾಯಿ 10 ಪೈಸೆ ಇಳಿಕೆ ಮಾಡಲಾಗಿದೆ. ಅದೇ ರೀತಿಯಲ್ಲಿ ವಾಣಿಜ್ಯ ಬಳಕೆದಾರರಿಗೆ 1 ರೂಪಾಯಿ 25 ಪೈಸೆ ಇಳಿಕೆ ಮಾಡಲಾಗಿದೆ. ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ 40 ಪೈಸೆ ಹಾಗೂ ಏತ ನೀರಾವರಿ ಬಳಕೆದಾರರಿಗೆ 2 ರೂಪಾಯಿ ಇಳಿಕೆ ಮಾಡಲಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಸಾಮಾನ್ಯರಿಗೆ ವಿದ್ಯುತ ದರ ಇಳಿಕೆ ಸ್ವಲ್ಪಮಟ್ಟಿನ ಸಮಾಧಾನ ನೀಡಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕಾನ್ಸ್‌ಟೇಬಲ್‌ಗೆ ಭದ್ರತೆ ಇಲ್ಲದ ರೈಲಿನಲ್ಲಿ ಪ್ರಯಾಣಿಕರಿಗೆ ಭದ್ರತೆ ಒದಗಿಸುವರೇ?

ಮಾನ್ಯರೆ,

ಭಾರತೀಯ ರೈಲ್ವೆ ಇಲಾಖೆಗೆ ಸಂಬಂಧಿಸಿದ ನೈರುತ್ಯ ರೈಲ್ವೆ ವಲಯದ ಮೈಸೂರಿನಿಂದ ಬೆಂಗಳೂರಿಗೆ ಪ್ರತಿನಿತ್ಯ ಸುಮಾರು ಇಪ್ಪತ್ತಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತವೆ. ಇತ್ತೀಚಿನ ದಿನದಲ್ಲಿ ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ರೈಲಿನಲ್ಲಿ ರೈಲು ಚಲಿಸುವಾಗಲೇ ಆರು ಜನ ಪುಂಡರು ಕಾನ್ಸ್‌ಟೇಬಲ್‌ಗೆ ಚಾಕುವಿನಿಂದ ಇರಿದಿದ್ದಾರೆ. ಆದರೆ ಈ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ರೈಲಿನಲ್ಲಿ ಕಾನ್ಸ್‌ಟೇಬಲ್‌ಗೆ ಚಾಕುವಿನಿಂದ ಇರಿದಿರುವ ಹಿನ್ನೆಲೆ ಕಾನೂನು ಸುವ್ಯವಸ್ಥೆ ಕಾಪಾಡುವ ಕರ್ತವ್ಯನಿರತ ನೌಕರರಿಗೆ ಭದ್ರತೆ ಇಲ್ಲದ ಮೇಲೆ ಇನ್ನು ಜನಸಾಮಾನ್ಯರ ಪಾಡೇನು. ಮೈಸೂರು – ಬೆಂಗಳೂರು ನಡುವೆ ಪ್ರತಿನಿತ್ಯ ಓಡಾಡುವ ಮಹಿಳೆಯರು ಸೇರಿದಂತೆ ಸಾರ್ವಜನಿಕರಿಗೆ ಹೇಗೆ ಭದ್ರತೆ ಒದಗಿಸುತ್ತಾರೆ? ಮೈಸೂರು ಬೆಂಗಳೂರು ನಡುವೆ ಸಂಚರಿಸುವ ರೈಲುಗಳಲ್ಲಿ ಪುಂಡ ಪುಡಾರಿಗಳ ಹಾವಳಿ ಹೆಚ್ಚಾಗಿರುವ ಕಾರಣ ಈ ಮಾರ್ಗವು ಸೇರಿದಂತೆ ಪ್ರತಿ ರೈಲ್ವೆ ನಿಲ್ದಾಣಗಳಲ್ಲಿ ಪ್ರಯಾಣಿಕರನ್ನು ಕಟ್ಟುನಿಟ್ಟಾಗಿ ತಪಾಸಣೆ ಮಾಡಿ, ತರುವ ಬ್ಯಾಗ್‌ಗಳನ್ನು ಪರಿಶೀಲನೆ ನಡೆಸಿ ಕಾನೂನುಬಾಹಿರವಾಗಿ ರೈಲ್ವೆನಲ್ಲಿ ಸಾಗಿಸುವ ಆಯುಧಗಳನ್ನು ಮತ್ತು ನಿಷೇಧಿತ ವಸ್ತುಗಳನ್ನು ತಡೆ ಹಿಡಿಯಲು ನೈರುತ್ಯ ರೈಲ್ವೆ ವಲಯದ ಅಧಿಕಾರಿಗಳು ಸೂಕ್ತವಾದ ರೈಲ್ವೆ ಪೊಲೀಸರನ್ನು ನಿಯೋಜಿಸಿ ರೈಲಿನಲ್ಲಿ ಆಗುವ ಅನಾಹುತಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಮಕ್ಕಳ ದೃಷ್ಟಿದೋಷ ಆತಂಕಕಾರಿ, ಮೊಬೈಲ್ ವೀಕ್ಷಣೆಗೆ ಮಿತಿಯಿರಲಿ

ಮಾನ್ಯರೆ,

ಪ್ರಸ್ತುತ ತಂತ್ರಜ್ಞಾನವು ಮನುಷ್ಯನ ಸಾಕಷ್ಟು ಕೆಲಸಗಳನ್ನು ಸರಳಗೊಳಿಸಿದೆ. ಕುಳಿತಲ್ಲೇ ಸಕಲ ಕೆಲಸಗಳನ್ನು ಪೂರೈಸುವ, ಕಣ್ಣೆದುರಲ್ಲೇ ಇಡೀ ಜಗತ್ತಿನ ಬೆಳವಣಿಗೆಯನ್ನು ಪ್ರದರ್ಶಿಸುವ ಪವಾಡಸದೃಶ ಉಪಕರಣಗಳ ತಂತ್ರಜ್ಞಾನದಿಂದ ಇದು ಸಾಧ್ಯವಾಗಿದೆ. ಆದರೆ, ಅತಿಯಾದರೆ ಅಮೃತವೂ ವಿಷ ಎನ್ನುವ ಮಾತು ತಂತ್ರಜ್ಞಾನಕ್ಕೆ ಅನ್ವಯವಾಗಿ, ಆರೋಗ್ಯಕ್ಕೆ ಸಂಬಂಧಿಸಿದ ಹಿನ್ನಡೆಗಳನ್ನು ಮನುಷ್ಯ ತಂತ್ರಜ್ಞಾನದಿಂದ ಅನುಭವಿಸುವಂತಾಗಿರುವುದು ನಾಗರಿಕ ಸಮಾಜ ಆತ್ಮವಿಮರ್ಶೆ ಮಾಡಿಕೊಳ್ಳುವಂತಹ ವಿಚಾರ. ಅದರಲ್ಲೂ ರಾಜ್ಯದಲ್ಲಿ 6ರಿಂದ 16ವರ್ಷದ ಸುಮಾರು 38 ಸಾವಿರ ಮಕ್ಕಳಲ್ಲಿ ಕಾಣಿಸಿಕೊಂಡಿರುವ ದೃಷ್ಟಿದೋಷಕ್ಕೆ ಮೊಬೈಲ್, ಟಿವಿ ವೀಕ್ಷಣೆಯ ಗೀಳು ಕಾರಣವಾಗಿರುವ ಸಂಗತಿ ಸಹಜವಾಗಿ ಆತಂಕ ಹುಟ್ಟಿಸಿದೆ.

ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಬೇಕು, ಅವರ ಕಣ್ಣಿನ ಆರೋಗ್ಯಕ್ಕೆ ಸ್ಮಾರ್ಟ್‌ಫೋನ್ ಅಥವಾ ಟಿವಿ ಒಳ್ಳೆಯದಲ್ಲ ಎಂಬ ಸಹಜ ಅರಿವು ಕೊರೊನಾ ಪೂರ್ವದಲ್ಲಿ ತಕ್ಕಮಟ್ಟಿಗೆ ಇತ್ತು. ಕೊರೊನಾ ಕಾಲಘಟ್ಟದಲ್ಲಿ ಬೇರೂರಿದ ಆನ್‌ಲೈನ್ ಶಿಕ್ಷಣ, ಸ್ಮಾರ್ಟ್‌ಫೋನ್ ಆಧಾರಿತ ಕಲಿಕಾ ಪ್ರವೃತ್ತಿಯು ಮಕ್ಕಳನ್ನು ಮೊಬೈಲ್‌ಗೆ ಸನಿಹವಾಗಿಸಿದಾಗ ಪೋಷಕರು ಅಸಹಾಯಕರಾದರು. ಗಂಟೆಗಟ್ಟಲೆ ಸ್ಮಾರ್ಟ್‌ಫೋನ್‌ನಲ್ಲಿ ಕಳೆಯುವ ಮಕ್ಕಳು ಏನನ್ನು ವೀಕ್ಷಿಸುತ್ತಿದ್ದರೆ ಎಂಬುದು ಪೋಷಕರ ಗಮನಕ್ಕೆ ಬಾರದಂತಾಗಿದೆ. ಬಹುತೇಕ ಮನೆಗಳಲ್ಲಿ ಪೋಷಕರೇ ದಿನದ ಬಹುಕಾಲ ಸ್ಮಾರ್ಟ್‌ಫೋನ್‌ಗಳಲ್ಲಿ ಮುಳುಗುತ್ತಿರುವುದು ಮಕ್ಕಳಿಗಿದು ಒಪ್ಪಿತ ಪ್ರಮಾದಕ್ಕೆ ತೆರೆದ ದಾರಿ ಮಾಡಿಕೊಟ್ಟಾಂತಾಗಿರುವುದು ವಿಪರ್ಯಾಸ.

ಹಾಗಾಗಿ, ಪೋಷಕರು ತಮ್ಮ ಮನೆಗಳಲ್ಲಿ ಮಕ್ಕಳು ಸ್ಮಾರ್ಟ್‌ಫೋನ್‌ಗಳಲ್ಲಿ ಎಷ್ಟು ಸಮಯ ಕಳೆಯುತ್ತಿದ್ದಾರೆ ಎಂಬುದರ ಮೇಲೆ ಹೆಚ್ಚು ನಿಗಾ ಇಡಬೇಕಾಗಿದೆ. ಹಾಗೂ ಸರಿಯಾದ ಮಾರ್ಗಸೂಚಿಗಳನ್ನು ನಿಗದಿಪಡಿಸದಿದ್ದರೆ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಡಿಜಿಟಲ್ ಪರಿಕರಗಳೇ ಅಪಾಯಕಾರಿಯಾಗಬಲ್ಲವು.

–ಕೆ.ಎಸ್.ಸುರೇಶ್, ಶಿಕ್ಷಕರು, ಕೆ.ಜಿ.ಹಳ್ಳಿ, ಹೆಚ್.ಡಿ. ಕೋಟೆ.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಮರಣದಂಡನೆಗೆ ಗುರಿಯಾಗಿದ್ದ ಮಾಜಿ ಸೇನಾಧಿಕಾರಿಗಳು ಸುರಕ್ಷಿತವಾಗಿ ತಾಯ್ನಾಡಿಗೆ ಬಂದ ಪವಾಡ...!



ಪ್ರಪಂಚದ ಯಾವುದೇ ಪ್ರದೇಶದಲ್ಲಿ ಭಾರತೀಯರು ಸಮಸ್ಯೆಗೆ ಸಿಲುಕಿದಾಗ ಅವರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲು ಕಾಲಕಾಲಕ್ಕೆ ಅಂದಿನ ಸರಕಾರಗಳು ಕಾರ್ಯಾಚರಣೆಗಳನ್ನು ನಡೆಸಿದ್ದವು. ಆ ಸಂದರ್ಭಗಳಲ್ಲಿ ಅಳೆದು ತೂಗಿ ನೋಡಿ ಮುಂದು ವರೆಯುವಂತಹ ಮಾನಸಿಕತೆ ಸರಕಾರಗಳ ಕಾರ್ಯದಲ್ಲಿ ಕಾಣುತ್ತಿತ್ತು. 2014ರವರೆಗೆ ಅಧಿಕಾರದಲ್ಲಿದ್ದ ಸರಕಾರಗಳು ವಿದೇಶಗಳಲ್ಲಿ ಅಪಾಯದಲ್ಲಿದ್ದ ಭಾರತೀಯರನ್ನು ರಕ್ಷಿಸಿದ ಕೆಲವು ಮಹತ್ವದ ರಕ್ಷಣಾ ಕಾರ್ಯಾಚರಣೆಗಳು ಇಲ್ಲಿ ಉಲ್ಲೇಖಾರ್ಹ;

1990ರಲ್ಲಿ ಕುವೈತ್ ಅನ್ನು ಇರಾಕ್ ಆಕ್ರಮಿಸಿದ ಸಂದರ್ಭದಲ್ಲಿ ಭಾರತೀಯ ವಾಯುಪಡೆ ಮತ್ತು ನೌಕಾಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿ ಯುದ್ಧಗ್ರಸ್ತ ಪ್ರದೇಶದಿಂದ 175000 ಭಾರತೀಯರನ್ನು ರಕ್ಷಿಸಿ ಸ್ವದೇಶಕ್ಕೆ ಕರೆತಂದಿದ್ದವು. 2006ರಲ್ಲಿ ಇಸ್ರೇಲ್ ಮತ್ತು ಲೆಬನಾನ್ ಮಧ್ಯೆ ಸಮರ ಸ್ಫೋಟಗೊಂಡಾಗ ಬೆರೂತ್‌ನಗರದಲ್ಲಿದ್ದ 2280 ಭಾರತೀಯರನ್ನು ಭಾರತದ ರಕ್ಷಣಾ ಪಡೆಗಳು ಕಾರ್ಯಾಚರಣೆ ನಡೆಸಿ ಕರೆತಂದಿದ್ದವು. 2011ರಲ್ಲಿ ಲಿಬಿಯಾದಲ್ಲಿ ಅಂತರ್ಯುದ್ಧ ಏರ್ಪಟ್ಟಾಗ 'ಆಪರೇಷನ್ ಸ್ವದೇಶಾಗಮನ' ಹೆಸರಿನಲ್ಲಿ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲಾಯಿತು. ಆ ಸಂದರ್ಭಗಳಲ್ಲಿ ಭಾರತವು ರಕ್ಷಣಾತ್ಮಕ ವಿದೇಶಾಂಗ ನೀತಿ ಹೊಂದಿತ್ತು.

2014ರಲ್ಲಿ ಕೇಂದ್ರದಲ್ಲಿ ಸರಕಾರ ಬದಲಾವಣೆಯೊಂದಿಗೆ ದೇಶದ ವಿದೇಶಾಂಗ ನೀತಿಯಲ್ಲೂ ಸಮಗ್ರ ಪರಿವರ್ತನೆಯ ಪರ್ವ ಪ್ರಾರಂಭವಾಯಿತು. ದೇಶದ ವಿದೇಶಾಂಗ ನೀತಿಯನ್ನು ರಕ್ಷಣಾತ್ಮಕತೆಯಿಂದ ಆಕ್ರಮಣಕಾರಿ ನೀತಿಗೆ ಪರಿವರ್ತಿಸಲಾಯಿತು. ವಿಶ್ವದ ಯಾವುದೇ ಮೂಲೆಯಲ್ಲಿ ಏಕೈಕ ಭಾರತೀಯನು ಸಂಕಷ್ಟಕ್ಕೆ ಸಿಲುಕಿದಲ್ಲಿ ಅವರನ್ನು ರಕ್ಷಿಸಲು ಭಾರತ ಸರಕಾರವು ಸರ್ವ ಶಕ್ತಿಯನ್ನು ಬಳಸುವುದೆಂದು ಇತ್ತೀಚಿನ ಕೆಲವು ಯಶಸ್ವಿ ಕಾರ್ಯಾಚರಣೆಗಳ ನಂತರ ಜಗತ್ತಿಗೆ ಮನವರಿಕೆಯಾಗಿದೆ. ಭಾರತ ಎಂದು **'ಸ್ನೇಹಕ್ಕೂ ಬದ್ಧ ಸಮರಕ್ಕೂ ಸಿದ್ಧ'** ಎಂಬ ಕಾರ್ಯತಂತ್ರವನ್ನು ವಿದೇಶ ನೀತಿಯಲ್ಲಿ ಅನುಸರಿಸುತ್ತಿದೆ. ಅಮೇರಿಕದಂತಹ ಶಕ್ತರಾಷ್ಟ್ರಗಳು ಕಾರ್ಯಾಚರಿಸಲು ಹಿಂಜರಿಯುವ ಅಪಾಯಕಾರಿ ಪ್ರದೇಶಗಳಿಂದ ಭಾರತೀಯ ರಕ್ಷಣಾ ಪಡೆಗಳು ಅಸಾಮಾನ್ಯ ಸಾಹಸ, ಕಾರ್ಯತಂತ್ರಗಳ ಮೂಲಕ ದೇಶ–ವಿದೇಶಗಳ ಸಂಕಷ್ಟಕ್ಕೀಡಾದ ನಾಗರಿಕರನ್ನು ಸುರಕ್ಷಿತವಾಗಿ ಸ್ವದೇಶಗಳಿಗೆ ಮರಳಿಸುವಲ್ಲಿ ಯಶಸ್ವಿಯಾಗಿವೆ. **ಇದಕ್ಕೆ ಕಾರಣ ಪ್ರಧಾನಿ ಮೋದಿಯವರ ವೈಯಕ್ತಿಕ ವರ್ಚಸ್ಸು, ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತವರ ಸಚಿವಾಲಯದ ರಾಜತಾಂತ್ರಿಕ ಜಾಣ್ಮೆ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್‌ರ ಸಮರ್ಥ ಕೂಟನೀತಿ ಹಾಗೂ ರಕ್ಷಣಾ ಪಡೆಗಳ ಸಾಹಸದಿಂದ ಸಾಧ್ಯವಾಗಿದೆ.** 2014ರ ಆಪರೇಷನ್ ದಾದಿಯಿಂದ ಇತ್ತೀಚೆಗೆ ಕತಾರ್‌ನಲ್ಲಿ ಮರಣದಂಡನೆ ಶಿಕ್ಷೆಗೊಳಗಾದ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳನ್ನು ಸ್ವದೇಶಕ್ಕೆ ತರುವಲ್ಲಿ ಭಾರತ ಸರಕಾರವು ತೋರಿದ ದೃಢತೆ ಮತ್ತು 2014ರ ಆಪರೇಷನ್ ಕಾರ್ಯ ಅತ್ಯಂತ ರೋಚಕ.

2014ರ ಆಪರೇಷನ್ ದಾದಿ ಕಾರ್ಯಾಚರಣೆ

ಈ ವರ್ಷ ಜೂನ್‌ನಲ್ಲಿ ಸಿರಿಯಾ, ಇರಾಕ್ ಮೇಲೆ ಮತಾಂಧ, ಕ್ರೂರ, ಉಗ್ರ ಸಂಘಟನೆಯಾದ ಐಸಿಸ್ ನಡೆಸಿದ ಆಕ್ರಮಣದಿಂದ ಯುದ್ಧ ಪರಿಸ್ಥಿತಿ ಸೃಷ್ಟಿಯಾಗಿತ್ತು. ಈ ಸಂದರ್ಭದಲ್ಲಿ ಇರಾಕ್‌ನ ಟಕ್ರಿತ್ ನಗರದ ಆಸ್ಪತ್ರೆಯೊಂದರಲ್ಲಿ ಕರ್ತವ್ಯದಲ್ಲಿದ್ದ ಕೇರಳ ಮೂಲದ ನಲ್ವತ್ತಾರು ಭಾರತೀಯ ನರ್ಸ್‌ಗಳನ್ನು ಐಸಿಸ್ ಉಗ್ರರು ಅಪಹರಿಸಿದರು. ಭಾರತವು ಇರಾಕ್‌ನೊಂದಿಗೆ ಸಂಪರ್ಕ ಸಾಧಿಸಿ ಇವರನ್ನು ರಕ್ಷಿಸಿ ಕರೆತರುವಲ್ಲಿ ಯಶಸ್ವಿಯಾಗಿತ್ತು.

2015, ಆಪರೇಷನ್ ರಾಹತ್

ಯೆಮೆನ್‌ನಲ್ಲಿ ಸ್ಫೋಟಗೊಂಡ ಅಂತರ್ಯುದ್ಧದ ಸಂದರ್ಭದಲ್ಲಿ ಭಾರತೀಯ ಸೇನೆಯು ಆಪರೇಷನ್ ರಾಹತ್ ಎಂಬ ಸಂಕೇತ ನಾಮದಡಿ 4 ಸಾವಿರ ಭಾರತೀಯರು ಮತ್ತು ವಿದೇಶಿಯರನ್ನು ಸುರಕ್ಷಿತವಾಗಿ ಕರೆದು ತಂದಿತ್ತು. ಮೋದಿಯವರು ಸೌದಿ ದೊರೆ ಸಲ್ಮಾನ್‌ರಿಗೆ ಮಾಡಿದ ಒಂದು ದೂರವಾಣಿ ಕರೆಯಿಂದ ಇದು ಸಾಧ್ಯವಾಯಿತೆಂದು ಆಗಿನ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಹೇಳಿದ್ದರು.

2020ರ ಆಪರೇಷನ್ ಸಮುದ್ರಸೇತು

2020ರಲ್ಲಿ ಕೊರೊನಾದಿಂದಾಗಿ ಸಾವಿರಾರು ಭಾರತೀಯರು ಮಾಲ್ಡಿವ್ಸ್ ಸಹಿತ ಕೆಲವು ದ್ವೀಪ ರಾಷ್ಟ್ರಗಳಲ್ಲಿ ಅತಂತ್ರವಾಗಿ ಸಿಲುಕಿಕೊಂಡಿದ್ದರು. ಸಮುದ್ರಸೇತು ನಾಮಾಂಕಿತ ಕಾರ್ಯಾಚರಣೆಯಲ್ಲಿ ಭಾರತೀಯ ನೌಕಾಪಡೆಯ ಐಎನ್‌ಎಸ್ ಜಲಾಶ್ವ ಮತ್ತು ಶಾರ್ದೂಲ್ ಯುದ್ಧ ನೌಕೆಗಳು ನಡೆಸಿದ ಸಫಲ ಕಾರ್ಯಾಚರಣೆಯಲ್ಲಿ ಇವರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲಾಗಿತ್ತು.

ಆಪರೇಷನ್ ವಂದೇ ಭಾರತ್

ಕೋವಿಡ್ ಕಾಲವಾದ 2020ರಿಂದ 2022ರ ಅವಧಿಯಲ್ಲಿ ವಿದೇಶಗಳಲ್ಲಿದ್ದ ಭಾರತೀಯರನ್ನು ಕರೆತರಲು ನಡೆಸಲಾದ ಬೃಹತ್ ಕಾರ್ಯಾಚರಣೆಯೆಂದು ದಾಖಲಾಗಿದೆ. ಸುಮಾರು 2.97 ಕೋಟಿ ಭಾರತೀಯರನ್ನು ಸಕಲ ಕೋವಿಡ್ ಸುರಕ್ಷಾ ವ್ಯವಸ್ಥೆಗಳೊಂದಿಗೆ ಸ್ವದೇಶಕ್ಕೆ ಕರೆತರಲಾಗಿತ್ತು.

ಆಪರೇಷನ್ ದೇವಿಶಕ್ತಿ

2021ರಲ್ಲಿ ಆಫ್ಘಾನಿಸ್ಥಾನದಲ್ಲಿ ತಾಲಿಬಾನ್ ಆಡಳಿತ ಆರಂಭವಾದ ಬಳಿಕ ಭಾರತೀಯರಿಗೆ ಅಲ್ಲಿ ಜೀವನ ನಡೆಸುವುದು ಅಸಾಧ್ಯವೆಂದು ಭಾರತಕ್ಕೆ ಬರಲು ಹಾತೊರೆಯುತ್ತಿದ್ದರು. ಭಾರತೀಯ ರಕ್ಷಣಾ ಪಡೆಗಳು ಆಪರೇಷನ್ ದೇವಿಶಕ್ತಿ ಕಾರ್ಯಾಚರಣೆಯಲ್ಲಿ 206 ಅಫ್ಘಾನ್‌ರ ಸಹಿತ 669 ಮಂದಿಯನ್ನು ಹಾಗೂ ಗುರುಗ್ರಂಥ ಸಾಹಿಬ್ ಕೆಲವು ಪುರಾತನ ಹಿಂದು ಶಾಸನಗಳನ್ನು ಸುರಕ್ಷಿತವಾಗಿ ಕರೆತಂದರು.

ಆಪರೇಷನ್ ಗಂಗಾ

2022ರಲ್ಲಿ ರಷ್ಯಾ–ಉಕ್ರೇನ್ ನಡುವೆ ಸಮರ ಶುರುವಾಯಿತು. ಆಗ ವಿದ್ಯಾಭ್ಯಾಸಕ್ಕಾಗಿ ಉಕ್ರೇನ್‌ಗೆ ತೆರಳಿ ವಿವಿಧ ನಗರಗಳ ಕಾಲೇಜ್‌ಗಳಲ್ಲಿ ವ್ಯಾಸಂಗ ನಡೆಸುತ್ತಿದ್ದ ಸುಮಾರು 22500 ವಿದ್ಯಾರ್ಥಿಗಳನ್ನು ಭಾರತಕ್ಕೆ ಕರೆತರಲಾಯಿತು. ಈ ಕಾರ್ಯಾಚರಣೆಗೆ ವಾಯುಪಡೆಯ 14 ವಿಮಾನಗಳ ಸಹಿತ ಒಟ್ಟು 90 ವಿಮಾನಗಳನ್ನು ನಿಯೋಜಿಸಲಾಯಿತು. ಆಪರೇಷನ್ ಕಾವೇರಿ ಸಂಕೇತನಾಮದಲ್ಲಿ 2023ರಲ್ಲಿ ಸುಡಾನ್‌ನಲ್ಲಿ ಆಂತರಿಕ ಕಲಹ ನಡೆದಾಗ ಸುಮಾರು 3000 ಭಾರತೀಯರನ್ನು ಸ್ವದೇಶಕ್ಕೆ ಕರೆತರಲಾಯಿತು. ಈ ಎಲ್ಲ ಕಾರ್ಯಾಚರಣೆಗಳನ್ನು ಮೀರಿ ಗಲ್ಫ್ ರಾಷ್ಟ್ರ ಕತಾರ್‌ನಲ್ಲಿ ಕಳೆದ ವರ್ಷ ಇಸ್ರೇಲ್‌ಗೆ ಬೇಹುಗಾರಿಕೆ ನಡೆಸಿದ ಆರೋಪದಲ್ಲಿ ಮರಣದಂಡನೆ ಶಿಕ್ಷೆಗೊಳಗಾದ ಭಾರತೀಯ ನೌಕಾಪಡೆಯ 8 ಮಾಜಿ ಅಧಿಕಾರಿಗಳನ್ನು ರಕ್ಷಿಸಿ ಸ್ವದೇಶಕ್ಕೆ ಕರೆತರುವ ಮೂಲಕ ಭಾರತ ತನ್ನ ಶಕ್ತಿ, ಸಾಮರ್ಥ್ಯ ಹಾಗೂ ರಾಜತಾಂತ್ರಿಕ ನೈಪುಣ್ಯವನ್ನು ಜಗತ್ತಿಗೆ ಪರಿಚಯಿಸಿತು. ಈ ಪ್ರಕರಣದಲ್ಲಿ ಭಾರತ ಸರಕಾರವು ವಿಫಲವಾದಲ್ಲಿ ವಿಶ್ವದಲ್ಲಿ ಭಾರತದ ಹಾಗೂ ದೇಶದೊಳಗೆ ಮೋದಿಯವರ ವರ್ಚಸ್ಸಿಗೆ ತೀವ್ರ ಹಾನಿಯಾಗುತ್ತಿತ್ತು. ವಾಸ್ತವವಾಗಿ ಭಾರತ ಸರಕಾರಕ್ಕೆ ಈ ಪ್ರಕರಣವು ಅತ್ಯಂತ ಸಂಕೀರ್ಣ, ಸವಾಲಿನ, ಕಠಿಣ ಸಮಸ್ಯೆಯನ್ನು ತಂದೊಡ್ಡಿತ್ತು.

ಏನಿದು ಪ್ರಕರಣ? ಏಕೆ ಮರಣದಂಡನೆ ಶಿಕ್ಷೆ

ಕತಾರ್‌ನ ರಾಷ್ಟ್ರೀಯ ನೌಕಾಪಡೆಗೆ ತರಬೇತಿ ನೀಡುವ ದಹ್ರಾ ಗ್ಲೋಬಲ್ ಟೆಕ್ನಾಲಜಿ ಅಂಡ್ ಕನ್ಸಲ್ಟೆಂಟೆನ್ಸಿ ಸರ್ವಿಸಸ್ ಸಂಸ್ಥೆಯ ಪರವಾಗಿ ಭಾರತದ ನೌಕಾಸೇನೆಯ ಎಂಟು ನಿವೃತ್ತ ಅಧಿಕಾರಿಗಳಾದ ಕ್ಯಾ. ನವತೇಜ್ ಗಿಲ್, ಸೌರಭ್ ವಸಿಷ್ಠ, ಕಮಾಂಡರ್‌ಗಳಾದ ಪೂರ್ಣೆಂದು ತಿವಾರಿ, ಅಮಿತ್‌ನಾಗ್ ಪಾಲ್, ಎಸ್.ಕೆ.ಗುಪ್ತ, ಬಿ.ಕೆ.ವರ್ಮ ಹಾಗೂ ಸುಗುಣಾಕರ್ ಮತ್ತು ನಾವಿಕ ರಾಗೇಶ್‌ರವರು ಕೆಲಸ ಮಾಡುತ್ತಿದ್ದರು. ಈ ಅಧಿಕಾರಿಗಳು ಕತಾರ್‌ನಲ್ಲಿ ನಿರ್ಮಾಣವಾಗುತ್ತಿರುವ ಜಲಾಂತರ್ಗಾಮಿಯ ತಂತ್ರಾಂಶ ಮಾಹಿತಿಯನ್ನು ಇಸ್ರೇಲ್‌ಗೆ ನೀಡಿದ್ದಾರೆಂಬ ಗೂಢಚರ್ಯೆ ಆರೋಪದಡಿ ದಿ. 30–08–2022ರಂದು ಬಂಧಿಸಲಾಯಿತು. 2022, ಡಿಸೆಂಬರ್‌ನಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್‌ರವರು ಅಧಿಕಾರಿಗಳನ್ನು ಶೀಘ್ರ ನಾವು ವಾಪಸು ಕರೆತರುತ್ತೇವೆ ಎಂದು ಆಶ್ವಾಸನೆ ನೀಡಿದರು. ಆದರೆ ರಾಜತಾಂತ್ರಿಕ ಪ್ರಯತ್ನಗಳು ವಿಫಲವಾಗಲಿಲ್ಲ. ಭಾರತದಷ್ಟು ಕತಾರ್‌ನ ನ್ಯಾಯಾಲಯಗಳಲ್ಲಿ ಪಾರದರ್ಶಕವಾಗಿ ವಿಚಾರಣೆಗಳು ನಡೆಯುವುದಿಲ್ಲ. ಕಥಿತ ಆರೋಪಗಳ ಆಧಾರದಲ್ಲೂ ಈ ದೇಶದಲ್ಲಿ ಮರಣದಂಡನೆಯಂತಹ ಕಠಿಣ ಶಿಕ್ಷೆ ನೀಡಲಾಗುತ್ತದೆ. ಈ ಪ್ರಕಾರ ಸರಿಯಾದ ಸಾಕ್ಷ್ಯಾಧಾರಗಳಿಲ್ಲದಿದ್ದರೂ, ಆರೋಪಗಳು ಸಾಬೀತಾಗದಿದ್ದರೂ ಖತಾರ್ ನ್ಯಾಯಾಲಯವು ದಿನಾಂಕ 26–10–2023ರಂದು ಈ ಅಧಿಕಾರಿಗಳಿಗೆ ಮರಣದಂಡನೆ ವಿಧಿಸಿತು.

ಶಿಕ್ಷೆಗೆ ಕಾರಣವಾದ ಕಥನಗಳು (NARRATIVES)

ಮಧ್ಯಪ್ರಾಚ್ಯದಲ್ಲಿ ಸೌದಿ ನಂತರ ಖತಾರ್ ಅತ್ಯಂತ ಸಮೃದ್ಧ, ಶಕ್ತಿಶಾಲಿ, ಕಟ್ಟರ್‌ಪಂಥಿ ಇಸ್ಲಾಮಿಕ್ ರಾಷ್ಟ್ರವಾಗಿದೆ. ಒಂದೊಮ್ಮೆ ಇಸ್ಲಾಮಿಕ್ ಜಗತ್ತಿನ ಮೇಲೆ ಪ್ರಭುತ್ವಕ್ಕಾಗಿ ಸೌದಿ ಅರೇಬಿಯಾವನ್ನು ಎದುರು ಹಾಕಿಕೊಂಡಿತ್ತು. ವಿಶ್ವಾದ್ಯಂತ ಇಸ್ಲಾಂನ ಪ್ರಚಾರಕ್ಕಾಗಿ ಈ ದೇಶ ಇಸ್ಲಾಮಿಕ್ ಸಂಸ್ಥೆ, ಸಂಘಟನೆಗಳಿಗೆ ಹಣಕಾಸು ನೆರವು ನೀಡುತ್ತಿದೆ ಎನ್ನಲಾಗಿದೆ. ಹಮಾಸ್, ಹಿಜ್ಬುಲ್ಲಾ, ತಾಲಿಬಾನ್, ಬೊಕೊಹರಾಂನಂತಹ ಉಗ್ರ ಸಂಘಟನೆಗಳ ಪ್ರಮುಖರಿಗೆ ಈ ದೇಶದಲ್ಲಿ ರಾಜಾಶ್ರಯವಿದೆ. ಇಸ್ಲಾಮಿಕ್ ಜಗತ್ತು ಯಹೂದಿಗಳು, ಇಸ್ರೇಲ್‌ನೊಂದಿಗೆ ಶತಮಾನಗಳಿಂದ ವೈರತ್ವ ಹೊಂದಿವೆ. ಇಸ್ರೇಲ್ ವಿರುದ್ಧ ಅತ್ಯಂತ ಸೂಕ್ಷ್ಮ, ಸಂವೇದನಶೀಲ ವಿಷಯಗಳ ಮೇಲೆ ಸಂಪೂರ್ಣ ಇಸ್ಲಾಮಿಕ್ ಜಗತ್ತಿನಲ್ಲಿ ಹಿಂಸಾತ್ಮಕ ಪ್ರತಿಭಟನೆಗಳಾಗುತ್ತವೆ. ಈ ವಿಚಾರ ಉಗ್ರವಾದಿ ಸಂಘಟನೆಗಳ ಪ್ರಮುಖರಿಗೆ ಚೆನ್ನಾಗಿ ತಿಳಿದಿದೆ.

ಕತಾರ್ ಅತ್ಯಂತ ಶ್ರೀಮಂತ, ಶಕ್ತಿಶಾಲಿ, ಅತ್ಯಾಧುನಿಕ ದೇಶವಾಗಿರುವುದರ ಹಿಂದೆ ಭಾರತೀಯರ ಅಪಾರ ಪರಿಶ್ರಮವಿದೆ. ಕತಾರ್‌ನ ಆರ್ಥಿಕಾಭಿವೃದ್ಧಿಯ ಎಲ್ಲ ಹಂತಗಳಲ್ಲಿ, ಕ್ಷೇತ್ರಗಳಲ್ಲಿ ಭಾರಿ ಸಂಖ್ಯೆಯಲ್ಲಿರುವ ಭಾರತೀಯರು ಆಳುವವರ ವಿಶ್ವಾಸಕ್ಕೆ ಪಾತ್ರವಾಗಿರುವ ಪ್ರಭಾವಿ ಸಮುದಾಯವಾಗಿದೆ. ಈ ಬಗ್ಗೆ ಅಸಹನೆ, ಅಸಮಾಧಾನ ಹೊಂದಿರುವ ಕೆಲವು ಇಸ್ಲಾಮಿಕ್ ಸಂಘಟನೆಗಳ ಪ್ರಮುಖರು ಭಾರತೀಯರ ವಿರುದ್ಧ ಖತಾರ್‌ನ ಆಳರಸರಲ್ಲಿ ಅಪನಂಬಿಕೆ, ಅಸಹನೆ ಸೃಷ್ಟಿಯ ಕುತಂತ್ರದ ಒಂದು ಭಾಗವಾಗಿ ಕತಾರ್‌ನ ಶತ್ರುವಾಗಿರುವ ಇಸ್ರೇಲ್‌ಗಾಗಿ ಭಾರತೀಯರು ಬೇಹುಗಾರಿಕೆ ನಡೆಸಿದರೆಂಬ ಗಂಭೀರ ಆರೋಪವನ್ನು ಸೃಷ್ಟಿಸಿದರೆಂಬ ಸುದ್ದಿ ಇದೆ. ಈ ಆರೋಪದ ಆಧಾರದಲ್ಲಿ ಅಲ್ಲಿನ ನ್ಯಾಯಾಲಯ ಭಾರತೀಯ ಸೇನಾಧಿಕಾರಿಗಳಿಗೆ ಮರಣದಂಡನೆ ನೀಡಿದೆ. ಬೇಹುಗಾರಿಕೆಯಂತಹ ಗಂಭೀರ ಪ್ರಕರಣಗಳಲ್ಲಿ ಆರೋಪಿಗಳಿಗೆ ಕತಾರ್‌ನಲ್ಲಿ ಮರಣದಂಡನೆ, ಜೀವಾವಧಿಯಂತಹ ಕಠಿಣ ಶಿಕ್ಷೆ ನೀಡಲಾಗುತ್ತಿದೆ. ಇಂತಹ ಆರೋಪಗಳಲ್ಲಿ ಕಠಿಣ ಶಿಕ್ಷೆಗೊಳಗಾಗಿರುವ ನೂರಾರು ವಿದೇಶಿಯರು ಕತಾರ್ ಸೆರೆಮನೆಗಳಲ್ಲಿದ್ದಾರೆ. 2015, ಜೂನ್‌ನಲ್ಲಿ ಬೇಹುಗಾರಿಕೆ ಆರೋಪದಲ್ಲಿ ಜೀವಾವಧಿ ಶಿಕ್ಷೆಗೊಳಗಾದ ಫಿಲಿಫೈನ್ಸ್ ನಾಗರಿಕರನ್ನು ಅಲ್ಲಿನ ಸರಕಾರ ರಕ್ಷಿಸಿ ತರುವ ಯತ್ನವನ್ನು ಕೈಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಎಂಟು ಮಾಜಿ ಸೇನಾಧಿಕಾರಿಗಳ ಬಿಡುಗಡೆಯು ಪ್ರಧಾನಿ ಮೋದಿಯವರ ವರ್ಚಸ್ಸು ಹಾಗೂ ಭಾರತದ ರಾಜತಾಂತ್ರಿಕ ಕಾರ್ಯಕ್ಷಮತೆಗೆ ದೊರೆತ ವಿಜಯವಾಗಿದೆ.

ಮೌನಕ್ಕೆ ಶರಣಾದ ಭಾರತದ ವಿಪಕ್ಷಗಳು

ಕತಾರ್‌ನಲ್ಲಿ ಮೃತ್ಯುದಂಡ ಘೋಷಣೆಯಾಗುತ್ತಿದ್ದಂತೆ ಪ್ರಧಾನಿ ಮೋದಿಯವರನ್ನು ವಿಪಕ್ಷಗಳು ವಿಶೇಷವಾಗಿ ಕಾಂಗ್ರೆಸ್ ನಾಯಕರು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದರು. ಮೋದಿಯವರ 56 ಇಂಚಿನ ಎದೆಯ ಸಾಮರ್ಥ್ಯ ಇಷ್ಟೇನಾ? ಭಾರತ ವಿಶ್ವಗುರು ಅಂದರೆ ಇದೇನಾ? ಎಂದು ಅಪಮಾನಿಸಿದ್ದರು. ವಿಶ್ವದ ಯಾವುದೇ ದೇಶದಲ್ಲಿರುವ ಭಾರತೀಯನಿಗೆ ಜ್ವರ ಬಂದರೆ ಮೋದಿ ಕಾರಣ. ಆತ ಗುಣಮುಖನಾದರೆ ವೈದ್ಯರಿಂದ ಎನ್ನುವಷ್ಟು ಕಾಂಗ್ರೆಸಿಗರಲ್ಲಿ ಮೋದಿಯವರ ಬಗ್ಗೆ ದ್ವೇಷವಿದೆ. ಆಂತರ್ಯದಲ್ಲಿ ಮೋದಿಯವರನ್ನು ಹಣಿಯಲು ಕಾಂಗ್ರೆಸ್ಸಿಗರು ಮರಣದಂಡನೆ ಶಿಕ್ಷೆ ಜಾರಿಯಾಗುವುದನ್ನು ಬಯಸುತ್ತಿದ್ದರು ಎಂದು ಅನ್ನಿಸುತ್ತಿತ್ತು. ಆದರೆ ಕಾಂಗ್ರೆಸ್ಸಿಗರ ದುರದೃಷ್ಟಕ್ಕೆ ಶಿಕ್ಷೆ ರದ್ದಾಗುತ್ತಿದ್ದಂತೆ ಮೌನಕ್ಕೆ ಶರಣಾದರು. ಜೈರಾಂ ರಮೇಶ್‌ರಂತಹ ಹಿರಿಯ ನಾಯಕರು 'ಈ ಸಂತೋಷ ಸಂಪೂರ್ಣ ರಾಷ್ಟ್ರಕ್ಕೆ ಸೇರುತ್ತದೆ. ಅಧಿಕಾರಿಗಳಿಗೆ, ಮತ್ತವರ ಕುಟುಂಬಗಳಿಗೆ ಶುಭಾಶಂಯಗಳು' ಎಂದಷ್ಟೇ ಹೇಳುವ ಮೂಲಕ ತಮ್ಮ ಸಣ್ಣ ಬುದ್ಧಿಯನ್ನು ತೋರಿದರು. ಸೌಜನ್ಯಕ್ಕಾದರೂ ಪ್ರಧಾನಿ ಮೋದಿ ಹಾಗೂ ಅವರ ತಂಡವನ್ನು ಅಭಿನಂದಿಸಲಿಲ್ಲ. ಕಾಂಗ್ರೆಸ್ಸಿಗರ ಈ ಮನೋಭಾವ ದೇಶದ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಗುಣಕ್ಕೆ ಮತ್ಸರವಿರಬಾರದು–ಸಾಧನೆಗೆ ಅಸೂಯೆಪಡಬಾರದು.

ಯಶಸ್ಸಿಗೆ ಕಾರಣವಾದ ಮೋದಿ ವರ್ಚಸ್ಸು–ರಾಜತಾಂತ್ರಿಕ ಕಸರತ್ತು

ಕತಾರ್ ನ್ಯಾಯಾಲಯ ಮರಣದಂಡನೆ ಘೋಷಿಸುತ್ತಿದ್ದಂತೆ ದೇಶದಲ್ಲಿ ರಾಜಕೀಯ ಬಿರುಗಾಳಿ ಎದ್ದಿತು. ವಿಪಕ್ಷಗಳು, ಎಡಪಂಥೀಯ ಮಾಧ್ಯಮಗಳು ಈ ಅವಕಾಶವನ್ನು ಬಳಸಿ ಕಟುವಾದ ಟೀಕಾಪ್ರಹಾರಗಳನ್ನೇ ಮಾಡಿದವು. ಆದರೆ ಮೋದಿ ಸರಕಾರ ಈ ಟೀಕೆಗಳನ್ನು ನಿರ್ಲಕ್ಷಿಸಿ ಅಧಿಕಾರಿಗಳನ್ನು ರಕ್ಷಿಸಲು ಸದ್ದಿಲ್ಲದೇ ರಾಜತಾಂತ್ರಿಕ ಉಪಕ್ರಮಗಳನ್ನು ಆರಂಭಿಸಿತು. ವಿದೇಶಾಂಗ ಸಚಿವ ಎಸ್.ಜೈಶಂಕರ್‌ರವರು ಕತಾರ್‌ನ ಮಿತ್ರ ರಾಷ್ಟ್ರವಾದ ಇರಾನ್‌ಗೆ ತೆರಳಿ ಅಲ್ಲಿನ ಅಧಿಕಾರಿಗಳಿಗೆ ಕತಾರ್ ಮೇಲೆ ಒತ್ತಡ ಹೇರಲು ಸೂಚಿಸಿದರು. ಈ ಸಂದರ್ಭದಲ್ಲಿ ಭವಿಷ್ಯದಲ್ಲಿ ಇರಾನ್‌ಗೆ ಭಾರಿ ಪ್ರಮಾಣದ ಆದಾಯ ತರಲಿರುವ ಚಾಬಹಾರ್ ಬಂದರಿನ ಅಭಿವೃದ್ಧಿಗೆ ಭಾರತವು ಮಾಡಿರುವ ಭಾರಿ ಮೊತ್ತದ ಹೂಡಿಕೆ ಹಾಗೂ ನಿರ್ಮಾಣ ಕಾರ್ಯಗಳ ಬಗ್ಗೆ ಸೂಕ್ಷ್ಮವಾಗಿ ಮಾಹಿತಿ ನೀಡಿದರು. ಬಂದರು ನಿರ್ಮಾಣ ಯೋಜನೆಯಿಂದ ಭಾರತವು ಹಿಂದೆ ಸರಿದಲ್ಲಿ ಆಗಬಹುದಾದ ನಷ್ಟವನ್ನು ತಿಳಿದ ಇರಾನ್ ಸರಕಾರ ಭಾರತಕ್ಕೆ ಸಹಕಾರ ನೀಡಿತು. ಟರ್ಕಿಯೊಂದಿಗೂ ಭಾರತದ ವಿದೇಶ ಮಂತ್ರಾಲಯ ಮಧ್ಯಸ್ಥಿಕೆ ವಹಿಸುವಂತೆ ಪ್ರಸ್ತಾಪ ಮಾಡಿತು. ಕತಾರ್‌ನ ಶಾಂತಿ ಪರಿವಾರದೊಂದಿಗೆ ಉತ್ತಮ ಸಂಬಂಧ ಹೊಂದಿರುವ ಅಮೇರಿಕವು ಇಸ್ರೇಲ್ ನಾಗರಿಕರನ್ನು ಹಮಾಸ್‌ನಿಂದ ಬಿಡುಗಡೆ ಮಾಡಲು ಕತಾರ್ ಅಮಾರ್‌ರ ಸಹಾಯ ಪಡೆದಿತ್ತು. ಅಮೇರಿಕಕ್ಕೂ ಶಾಹಿ ಪರಿವಾರದ ಮೇಲೆ ಒತ್ತಡ ಹೇರುವಂತೆ ಭಾರತ ಮನವಿ ಮಾಡಿತು.

ಸಂಪೂರ್ಣ ಪ್ರಕರಣವು ಪ್ರಧಾನಿ ಮೋದಿಯವರ ನಿರ್ದೇಶನದಂತೆ ನಡೆಯುತ್ತಿತ್ತು. 2023 ಡಿಸೆಂಬರ್ 1ರಂದು ದುಬೈಯಲ್ಲಿ ನಡೆದ Cop 28 ಶೃಂಗದ ನೇಪಥ್ಯದಲ್ಲಿ ಪ್ರಧಾನಿ ಮೋದಿಯವರು ಖತಾರ್‌ನ ಅಮೀರ್ ಶೇಖ್ ತಮೀಂ ಬಿನ್–ಹಮದ್–ಅಲ್–ಥಾನಿಯವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಆನಂತರ ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಾ ಮೋದಿಯವರು "ಕತಾರ್‌ನ ಅಮೀರ್‌ರು ಆ ದೇಶದಲ್ಲಿರುವ ಭಾರತೀಯರ ಹಿತಾಸಕ್ತಿಯನ್ನು ರಕ್ಷಿಸುವ ಭರವಸೆ ನೀಡಿದ್ದಾರೆ" ಎಂದಷ್ಟೇ ತಿಳಿಸಿದರು. ಅಂತರರಾಷ್ಟ್ರೀಯ ನಿಯಮಾನುಸಾರ ಕೆಲವು ಮಹತ್ವದ ವಿಚಾರಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯವರು ಸೇನಾಧಿಕಾರಿಗಳ ಬಿಡುಗಡೆಯ ಬಗ್ಗೆ ಪರೋಕ್ಷವಾಗಿ ಸಂಕೇತ ನೀಡಿದ್ದಾರೆ. ಮಾತುಕತೆಯ ನಂತರ ದಿ. 28–12–2023ರಂದು ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಪರಿವರ್ತಿಸಲಾಯಿತು.

ಇದಾದ ನಂತರ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಅಜಿತ್ ಧೋವಲ್ ಕತಾರ್‌ಗೆ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳು, ಅಮೀರ್ ಜೊತೆ ಮಾತುಕತೆ ನಡೆಸಿದರು. ಧೋವಲ್‌ರು ಅಧಿಕಾರಿಗಳೊಂದಿಗೆ ನಡೆಸಿದ ಮಾತುಕತೆಯಲ್ಲಿ ಖತಾರ್‌ನ ಕಾನೂನಿನಂತೆ ಸೇನಾಧಿಕಾರಿಗಳ ಬಿಡುಗಡೆ ಅಸಾಧ್ಯವಾದಲ್ಲಿ ಕತಾರ್‌ನಲ್ಲಿರುವ ಸುಮಾರು 7 ಲಕ್ಷ ಭಾರತೀಯರನ್ನು ಸ್ವದೇಶಕ್ಕೆ ಕರೆಸಿಕೊಳ್ಳಬೇಕಾಗಬಹುದು ಎಂದು ಪರೋಕ್ಷ ಎಚ್ಚರಿಕೆ ನೀಡಿದರು. ಈ ರೀತಿ ಆದಲ್ಲಿ ಕತಾರ್‌ನ ಸಂಪೂರ್ಣ ಆರ್ಥಿಕತೆ ಮುಂದಿನ ಕೆಲವೇ ತಿಂಗಳಲ್ಲಿ ನಾಶವಾಗುವುದು ನಿಶ್ಚಿತ. ಇನ್ನೊಂದು ಪ್ರಸ್ತಾಪದಲ್ಲಿ ಉಭಯ ದೇಶಗಳಿಗೂ ದೀರ್ಘಾವಧಿಯಲ್ಲಿ ಭಾರಿ ಆದಾಯ ತರಲಿರುವ 2048ರವರೆಗೆ ಪ್ರತಿವರ್ಷ ಕತಾರ್‌ನಿಂದ 7.5 ಮಿಲಿಯನ್ ಟನ್ ಪ್ರಾಕೃತಿಕ ಅನಿಲವನ್ನು (LNG) ಭಾರತಕ್ಕೆ ಪೂರೈಕೆ ಮಾಡುವ 78 ಬಿಲಿಯನ್ ಡಾಲರ್ ಮೌಲ್ಯದ ಒಪ್ಪಂದದ ಮೇಲೂ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಮನವರಿಕೆ ಮಾಡಲಾಯಿತು. ಇದಾದ ನಂತರ ಎಚ್ಚೆತ್ತ ಕತಾರ್ ಆಳರಸರು ಉಭಯ ದೇಶಗಳ ಮಧ್ಯೆ ಆರ್ಥಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಬಲಿಷ್ಠವಾದ ಖತಾರ್ ಸಕಾರಾತ್ಮಕ ನೆಲೆಯಲ್ಲಿ ಚರ್ಚಿಸಿ ಪ್ರಕರಣವನ್ನು ಸುಖಾಂತ್ಯಗೊಳಿಸಿದರು. ಮರಣದಂಡನೆ ಘೋಷಣೆಯಾದ 109 ದಿನಗಳ ನಂತರ ದಿನಾಂಕ 12–2–2024ರಂದು ಕತಾರ್ ಸರಕಾರ ಎಂಟು ಮಾಜಿ ಸೇನಾಧಿಕಾರಿಗಳ ಬಿಡುಗಡೆ ಮಾಡಿತು. ಕತಾರ್‌ನಲ್ಲಿರುವ ಭಾರತೀಯ ದೂತಾವಾಸಕ್ಕೆ ಆಗಮಿಸಿದ ಇವರು ಮಧ್ಯರಾತ್ರಿ ದಿಲ್ಲಿ ವಿಮಾನ ನಿಲ್ದಾಣಕ್ಕೆ ಆಗಮಿಸುವುದರೊಂದಿಗೆ ಭಾರತವು ಮಹತ್ತರ ರಾಜತಾಂತ್ರಿಕ ವಿಜಯ ಸಾಧಿಸಿತ್ತು.

ಕೆಪಿಎನಲ್ಲಿ ಡಿವೈಎಸ್ಪಿ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ

ಮೈಸೂರು,ಮಾ.2(ಆರ್‌ಕೆ)– ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ)ಯಲ್ಲಿ 2023ರ ಮಾರ್ಚ್ 1 ರಿಂದ 2024ರ ಫೆಬ್ರವರಿ 13ರವರೆಗೆ ಬುನಾದಿ ತರಬೇತಿ ಪೂರೈಸಿದ 6 ಡಿವೈಎಸ್ಪಿ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮ ಶನಿವಾರ ನಡೆಯಿತು.

ಕೆಪಿಎ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ತರಬೇತಿ) ಅಲೋಕ್ ಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಗೌರವ ವಂದನೆ ಸ್ವೀಕರಿಸಿದರು.





ಮೈಸೂರು ಕೆಪಿಎ ಸಭಾಂಗಣದಲ್ಲಿ ಆರು ಡಿವೈಎಸ್ಪಿ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮ ಶನಿವಾರ ನಡೆಯಿತು.

ಕೆಪಿಎ ನಿರ್ದೇಶಕ ಲೋಕೇಶ್ ಭಜಗಲಾಸರ್, ಉಪನಿರ್ದೇಶಕ ಎನ್.ನಿರಂಜನರಾಜ್ ಅರಸ್, ಸಹಾಯಕ ನಿರ್ದೇಶಕರಾದ ಎಂ.ಶಿವಶಂಕರ್, ವಿ.ನರಸಿಂಹ ತಾಮ್ರಧ್ವಜ, ಹೆಚ್.ಎಂ.ಖಾನ್, ಹೆಚ್.ಎಸ್. ರೇಣುಕಾರಾಧ್ಯ, ಎಸ್.ವೆಂಕಟೇಶ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಿವಿಲ್ ಡಿವೈಎಸ್ಪಿಗಳಾಗಿ ನೇಮಕಗೊಂಡಿರುವ ವಿಜಯ ಕ್ರಾಂತಿ, ಗೀತಾ ಪಾಟೀಲ್ ಮುರ್ತುಜಾ ಖಾದ್ರಿ, ಅಬಕಾರಿ ಡಿವೈಎಸ್ಪಿಗಳಾದ ಜಿ.ಹರ್ಷರಾಜ್, ವಿ.ಕೀರ್ತಿ ಕುಮಾರ್ ಮತ್ತು ಸಂತೋಷ್ ಮೋಡಗಿ ಅಕಾಡೆಮಿಯಲ್ಲಿ ಬುನಾದಿ ತರಬೇತಿ ಪಡೆದವರು. 38ನೇ ತಂಡದಲ್ಲಿ ವಿಜಯ ಕ್ರಾಂತಿ ಅವರು ಉತ್ತಮ ಸಾಧನೆಗೈದು ಸರ್ವೋತ್ತಮ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ವಿಜೇತ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಎಡಿಜಿಪಿ ಅಲೋಕ್‌ಕುಮಾರ್ ಅವರು, ಐಪಿಎಸ್, ಕೆಎಸ್‌ಪಿಎಸ್, ಕೆಎಸ್‌ಇಪಿಎಸ್ ಎಂಬುದೆಲ್ಲಾ ಸೇವೆಯಾಗಿದ್ದು, ಡಿವೈಎಸ್ಪಿಗಳಾಗಿದ್ದೇವೆ ಎಂಬ ಅಹಂ ಬಿಟ್ಟು ಇದೊಂದು ಸೇವೆ ಎಂದು ತಿಳಿದು ಕೆಲಸ ಮಾಡಿ ಎಂದು ಕಿವಿಮಾತು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಜೆಪಿ ಸರ್ಕಾರದಲ್ಲಿ ನಡೆದ ಸ್ಫೋಟಕ್ಕೂ ಅಲ್ಪಸಂಖ್ಯಾತರ ತುಷ್ಟೀಕರಣ ಕಾರಣವೇ?

ಬಿಜೆಪಿ ನಾಯಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆ

- ಮಾಸ್ಕ್, ಟೋಪಿ ಹಾಕಿರುವ ವ್ಯಕ್ತಿಯಿಂದ ಕೃತ್ಯ
- ಚಲನವಲನದ ಬಗ್ಗೆ ಸಿಸಿಟಿವಿ ದೃಶ್ಯಾವಳಿ ಲಭ್ಯ
- ಮಂಗಳೂರು ಕುಕ್ಕರ್ ಸ್ಫೋಟಕ್ಕೂ ಇದಕ್ಕೂ ಸಾಮ್ಯತೆ ಇಲ್ಲ
- ಸಂಘಟನೆ ಕೃತ್ಯವೇ ಎಂಬ ಬಗ್ಗೆ ಖಚಿತತೆ ಇಲ್ಲ

ಮೈಸೂರು, ಮಾ.2(ಬಿಎಲ್‌ಯು)–



ಅಲ್ಪಸಂಖ್ಯಾತರ ಬಗ್ಗೆ ಕಾಂಗ್ರೆಸ್ ತಳೆದಿರುವ ಉಷ್ಟೀಕರಣದಿಂದ ಬಾಂಬ್ ಸ್ಫೋಟ ವಾದರೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಬಾಂಬ್ ಸ್ಫೋಟ ಕೃತ್ಯಗಳಿಗೂ ಅಲ್ಪಸಂಖ್ಯಾತರ ತುಷ್ಟೀಕರಣ ಕಾರಣವೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಸರಿ ನಾಯಕರನ್ನು ಪ್ರಶ್ನಿಸಿ, ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಅಲ್ಪ ಸಂಖ್ಯಾತರ ಬಗ್ಗೆ ಕಾಂಗ್ರೆಸ್ ತುಷ್ಟೀಕರಣ ಮಾಡುತ್ತಿರುವ ಕಾರಣ ಬಾಂಬ್ ಸ್ಫೋಟ ನಡೆಯುತ್ತಿದೆ ಎಂಬ ಬಿಜೆಪಿ ಆರೋಪಕ್ಕೆ ಹೀಗೆ ತಿರುಗೇಟು ನೀಡಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೂಡ ಬಾಂಬ್ ಸ್ಫೋಟ ನಡೆದಿದೆ. ಹಾಗಾದರೆ ಬಿಜೆಪಿಯವರು ಅಲ್ಪ ಸಂಖ್ಯಾತರ ತುಷ್ಟೀಕರಣ ಪರಿಣಾಮ ಬಾಂಬ್ ಸ್ಫೋಟವಾಯಿತು ಎಂದು ಅರ್ಥೈಸಬಹುದೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜಕೀಯ ಕಾರಣಕ್ಕೆ ಬಿಜೆಪಿಯವರು ಇಂತಹ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಅಲ್ಪ ಸಂಖ್ಯಾತರ ಪರವಾಗಿರುವುದಕ್ಕೂ ಬಾಂಬ್ ಸ್ಫೋಟ ನಡೆದಿರುವುದಕ್ಕೂ ಏನು ಸಂಬಂಧ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಇಂತಹ ವಿಚಾರದಲ್ಲಿ ಯಾರೂ ರಾಜಕಾರಣ ಮಾಡಬಾರದು ಎಂದು ಸಲಹೆ ನೀಡಿದರು.

ಇನ್ನು ಎಫ್‌ಎಸ್‌ಎಲ್ ರಿಪೋರ್ಟ್ ಬಂದಿಲ್ಲ

“ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ಪ್ರಕರಣದಲ್ಲಿ ಯಾರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿರುವ ಬಗ್ಗೆ ಎಫ್‌ಎಸ್‌ಎಲ್‌ನಿಂದ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. ಈ ಪ್ರಕರಣದಲ್ಲಿ ಯಾರನ್ನು ರಕ್ಷಣೆ ಮಾಡುವುದಿಲ್ಲ. ಇನ್ನು ಎಫ್‌ಎಸ್‌ಎಲ್ ವರದಿಯೇ ಬಂದಿಲ್ಲ ಅಂದ ಮೇಲೆ ಬಿಜೆಪಿ ಆರೋಪಗಳಿಗೆ ಏನು ಉತ್ತರ ನೀಡಲಿ?

–ಸಿದ್ದರಾಮಯ್ಯ, ಮುಖ್ಯಮಂತ್ರಿ

ಮಂಗಳೂರಿನ ಕುಕ್ಕರ್ ಬಾಂಬ್ ಬ್ಲಾಸ್ಟ್‌ಗೂ ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದಿರುವ ಬಾಂಬ್ ಸ್ಫೋಟಕ್ಕೂ ಸಾಮ್ಯತೆ ಇಲ್ಲ. ಮಂಗಳೂರಿನಲ್ಲಿ ಕುಕ್ಕರ್ ಬ್ಲಾಸ್ಟ್ ಆಗಿದೆ. ಆದರೆ ರಾಮೇಶ್ವರಂ ಕೆಫೆಯಲ್ಲಿ ಟೈಮರ್ ಇಟ್ಟು ಬ್ಲಾಸ್ಟ್ ಮಾಡಿದ್ದು, ಎರಡು ಕೃತ್ಯಕ್ಕೆ ಸಂಬಂಧವಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.

ಮಾಸ್ಕ್ ಹಾಗೂ ಟೋಪಿ ಹಾಕಿಕೊಂಡು ಬಂದ ವ್ಯಕ್ತಿ ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿದ್ದಾರೆ. ಹೋಟೆಲ್ ನಲ್ಲಿ ತಿಂಡಿಯ ಟೋಕನ್ ಪಡೆದು ಅಲ್ಲೇ ಉಪಹಾರ ಸೇವಿಸಿದ್ದಾನೆ. ನಂತರ ಟೈಮರ್ ಫಿಕ್ಸ್ ಮಾಡಿ ಬ್ಲಾಸ್ಟ್ ಮಾಡಿ ಪರಾರಿಯಾಗಿದ್ದಾನೆ ಎಂದು ಸಿದ್ದರಾಮಯ್ಯ ವಿವರಿಸಿದರು.

ಬಾಂಬ್ ಸ್ಫೋಟಿಸಿದ ವ್ಯಕ್ತಿ ಬಸ್ಸಿನಿಂದ ಇಳಿಯುವುದು, ಹೋಟೆಲ್‌ಗೆ ಬರುವುದು ಸೇರಿದಂತೆ ಎಲ್ಲಾ ದೃಶ್ಯಗಳು ಸಿಸಿ ಟಿವಿಯಿಂದ ದೊರೆತಿದೆ. ಇದನ್ನು ಆಧರಿಸಿ ಪೊಲೀಸರು ಆರೋಪಿ ಗುರುತು ಪತ್ತೆ ಪ್ರಯತ್ನದಲ್ಲಿ ತೊಡಗಿದ್ದಾರೆ ಎಂದರು.

ಇದು ಭಯೋತ್ಪಾದಕ ಕೃತ್ಯವೇ ಅಥವಾ ವ್ಯಕ್ತಿಯೊಬ್ಬ ನಡೆಸಿರುವ ಕೃತ್ಯವೇ ಎಂಬುದು ಇನ್ನು ಸ್ಪಷ್ಟವಾಗಿಲ್ಲ. ಎಲ್ಲಾ ಆಯಾಮದ ಬಗ್ಗೆ ತನಿಖೆ ನಡೆಯುತ್ತಿದ್ದು, ಪೊಲೀಸರು ಚುರುಕಿನಿಂದ ತನಿಖಾ ಕಾರ್ಯ ಕೈಗೊಂಡಿದ್ದಾರೆ. ತನಿಖಾ ಹಂತದಲ್ಲಿರುವ ಕಾರಣ ಈಗಲೇ ಸ್ಪಷ್ಟವಾಗಿ ಏನನ್ನು ಹೇಳಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ನೂಕು ನುಗ್ಗಲಲ್ಲಿ ಮುಗ್ಗರಿಸಿದ ಸಿಎಂ

ಮೈಸೂರು, ಮಾ.2(ಬಿಎಲ್‌ಯು)–ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳ ನೂಕು ನುಗ್ಗಲು ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಗ್ಗರಿಸಿದರು. ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ತರುವಾಯ ಪತ್ರಕರ್ತರ ಜೊತೆ ಮಾತನಾಡಲು ಮುಂದೆ ಸಾಗುವ ವೇಳೆ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳ ತಳ್ಳಾಟ, ನೂಕಾಟ ಆರಂಭವಾಯಿತು. ಈ ವೇಳೆ ಸಿದ್ದರಾಮಯ್ಯ ಮುಗ್ಗರಿಸಿದರು. ಕೆಳಗೆ ಬೀಳುವ ಸಂದರ್ಭದಲ್ಲಿ ಕಾರ್ಯಕರ್ತರೇ ಸಿದ್ದರಾಮಯ್ಯ ಅವರನ್ನು ಹಿಡಿದುಕೊಂಡರು. ಇಂತಹ ಸಂದರ್ಭದಲ್ಲಿ ಸಿದ್ದರಾಮಯ್ಯ ಕೋಪಗೊಳ್ಳುವುದು ಸರ್ವೆ ಸಾಮಾನ್ಯ. ಇಂತಹ ನೂಕಾಟ–ತಳ್ಳಾಟ ವೇಳೆ ಕೆಲವರಿಗೆ ಕಪಾಳ ಮೋಕ್ಷ ಮಾಡಿರುವ ನಿದರ್ಶನಗಳಿವೆ. ಆದರೆ ಇಂದು ಮುಗ್ಗರಿಸಿದರೂ ಸಿದ್ದರಾಮಯ್ಯ ಕೋಪಗೊಳ್ಳಲಿಲ್ಲ.



ಭಾನುವಾರ ನಡೆಯಲಿರುವ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಸ್ವೀಕರಿಸಲಿರುವ ದೇಶದ ಹಿರಿಯ ರಾಜಕೀಯ ಮುತ್ಸದ್ಧಿ ಎಸ್.ಎಂ.ಕೃಷ್ಣ ಅವರನ್ನು ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ಅವರ ಪುತ್ರ ಬಸವೇಗೌಡ, ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಎಸ್‌ಎಂ ಕೃಷ್ಣ ಅಭಿಮಾನಿ ಬಳಗದ ವಿಕ್ರಾಂತ್ ಪಿ.ದೇವೇಗೌಡ ಇತರರು ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಆತ್ಮೀಯವಾಗಿ ಸ್ವಾಗತಿಸಿದರು.

ಮೈಸೂರು ಮಿತ್ರ

ಕಂಗೊಳಿಸುತ್ತಿದೆ ಮೈಸೂರಿನ ಅಶೋಕಪುರಂ ರೈಲು ನಿಲ್ದಾಣ

ನಾಳೆ ಸಂಸದ ಪ್ರತಾಪ್ ಸಿಂಹರಿಂದ ಲೋಕಾರ್ಪಣೆ



ಮೈಸೂರು, ಮಾ.2(ಬಿಎಲ್‌ಯು)– 32 ಕೋಟಿ ರೂಪಾಯಿ ವೆಚ್ಚದಲ್ಲಿ ಉನ್ನತೀಕರಿಸಿರುವ ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದ ಸೌಲಭ್ಯಗಳನ್ನು ಸಂಸದ ಪ್ರತಾಪ್ ಸಿಂಹ ಮಾರ್ಚ್ 4ರಂದು ಲೋಕಾರ್ಪಣೆಗೊಳಿಸಲಿದ್ದಾರೆ.

ಮೈಸೂರು ರೈಲ್ವೆ ಜಂಕ್ಷನ್‌ನಲ್ಲಿರುವ ಪ್ರಯಾಣಿಕರ ದಟ್ಟಣೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಅಶೋಕಪುರಂ ರೈಲ್ವೆ ನಿಲ್ದಾಣದ ಮೂಲ ಸೌಕರ್ಯಗಳನ್ನು ನವೀಕರಿಸಲಾಗಿದೆ.

ಹೆಚ್ಚುವರಿ ಪ್ಲಾಟ್ ಫಾರಂಗಳು, ಹೊಸ ಎರಡನೇ ಪ್ರವೇಶ ಹಾಗೂ ವಿಸ್ತರಿತ ವಾಹನ ನಿಲ್ದಾಣಗಳ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇದರ ಜೊತೆಗೆ ಮುಂಗಡ ಟಿಕೆಟಿಂಗ್ ವ್ಯವಸ್ಥೆ ಹಾಗೂ ಪ್ರಯಾಣಿಕರ ಮಾಹಿತಿ ವ್ಯವಸ್ಥೆ ಪರಿಚಯಿಸಲಾಗಿದೆ. ಇದರಿಂದ ಮೈಸೂರು ಪ್ರಧಾನ ರೈಲು ನಿಲ್ದಾಣದಲ್ಲಿರುವ ಪ್ರಯಾಣಿಕರ ಹೊರೆಯನ್ನು ಕಡಿಮೆ ಮಾಡುತ್ತದೆ. ಇದರಿಂದ ಸುಧಾರಿತ ಸೇವಾ ಗುಣಮಟ್ಟ, ಕಾರ್ಯಾಚರಣೆಯ ದಕ್ಷತೆ ಮತ್ತು ಪ್ರಯಾಣಿಕರ ಅನುಭವವನ್ನು ಹೆಚ್ಚಿಸುತ್ತದೆ.

ಒಟ್ಟು 32.5 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಅಶೋಕಪುರಂನ ಉನ್ನತೀಕರಣದಲ್ಲಿ 22 ಕೋಟಿಯನ್ನು ಸಂಚಾರ ಸೌಲಭ್ಯಗಳ ಉನ್ನತೀಕರಣಕ್ಕೆ ಹಾಗೂ 10.5 ಕೋಟಿ ಪ್ರಯಾಣಿಕರ ಸೌಕರ್ಯ ವೃದ್ಧಿಗೆ ವೆಚ್ಚ ಮಾಡಲಾಗಿದೆ.

ಮೈಸೂರು ನಗರಕ್ಕೆ 5.2 ಕಿಲೋಮೀಟರ್ ದೂರದಲ್ಲಿರುವ ಅಶೋಕಪುರಂ ರೈಲ್ವೆ ನಿಲ್ದಾಣ ಮೈಸೂರಿಗೆ ನಿರ್ಣಾಯಕವಾದ ಎರಡನೇ ನಿಲ್ದಾಣವಾಗಿ ಅಭಿವೃದ್ಧಿಗೊಂಡಿದೆ.

ಈಗ ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ ಐದು ಪ್ಲಾಟ್ ಫಾರ್ಮ್‌ಗಳು ಹಾಗೂ ಎರಡು ಸ್ಟೇಬ್ಲಿಂಗ್ ಲೈನ್ ಇದೆ. ಮೈಸೂರು ರೈಲ್ವೆ ಜಂಕ್ಷನ್‌ನಲ್ಲಿರುವ ಪ್ರಯಾಣಿಕರ ದಟ್ಟಣೆ ನಿವಾರಿಸುವ ನಿಟ್ಟಿನಲ್ಲಿ ಉನ್ನತೀಕರಣಗೊಳಿಸಿರುವ ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ ಮೈಸೂರಿನ ಎರಡನೇ ಟರ್ಮಿನಲ್ ಆಗಿ ಕಾರ್ಯ ನಿರ್ವಹಿಸಲಿದೆ. ಎರಡು ನಿಲ್ದಾಣಗಳಿಂದ 11 ಪ್ಲಾಟ್‌ಫಾರ್ಮ್‌ಗಳ ಸೌಲಭ್ಯ ದೊರೆಯಲಿದೆ. ಇದರಿಂದ ಬೆಂಗಳೂರಿನಿಂದ ಮೈಸೂರಿಗೆ ಬರುವ ರೈಲುಗಳನ್ನು ವಿಸ್ತರಿಸಲು ಅನುಕೂಲವಾಗುತ್ತದೆ. ಪ್ರಮುಖವಾಗಿ ಮೈಸೂರು ಹಾಗೂ ಚಾಮರಾಜನಗರ ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಉತ್ತಮ ಸೌಲಭ್ಯ ದೊರೆಯಲಿದೆ ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ ತಿಳಿಸಿದ್ದಾರೆ.

ಅಶೋಕಪುರಂ ರೈಲ್ವೆ ನಿಲ್ದಾಣದ ಪ್ರಮುಖ ಸೌಲಭ್ಯಗಳಿವು

ಉನ್ನತೀಕರಣಗೊಂಡಿರುವ ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದಿಂದ ಪ್ರಮುಖವಾಗಿ 7 ಸೌಲಭ್ಯಗಳು ಲಭ್ಯವಿದೆ.

- ಚಾ.ನಗರದ ಕಡೆಗೆ ಈಗ ಅಸ್ತಿತ್ವದಲ್ಲಿರುವ 4 ಮತ್ತು 5ನೇ ಮಾರ್ಗಗಳಿಗೆ ಸಂಪರ್ಕ
- ಸಂಪೂರ್ಣ ಉದ್ದದ ಸ್ಟೇಬ್ಲಿಂಗ್ ಲೈನ್(ಮಾರ್ಗ 7)ರ ಸೇರ್ಪಡೆ
- 2 ಹೊಸ ಪ್ಲಾಟ್‌ಫಾರ್ಮ್‌ಗಳ ಸೇರ್ಪಡೆ (ಪಿಎಫ್ ನಂಬರ್ 4 ಮತ್ತು 5)
- ಪಂಪಾಪತಿ ರಸ್ತೆ ಕಡೆಗೆ 2ನೇ ಪ್ರವೇಶ ಕಟ್ಟಡದ ಸ್ಥಾಪನೆ
- ಪ್ರವೇಶ 1 ಮತ್ತು 2 ಅನ್ನು ಸುಲಭವಾಗಿ ಸಂಪರ್ಕಿಸಲು ಪಾದಚಾರಿ ಸೇತುವೆ(ಎಫ್‌ಒಬಿ) ವಿಸ್ತರಣೆ
- ಆರ್‌ಡಿ 4 ಮತ್ತು 5 ಹಾಗೂ ಆರ್‌ಡಿ 6 ಮತ್ತು 7 ಪ್ಲಾಟ್‌ಫಾರ್ಮ್‌ಗಳಿಗೆ ಕೋಚ್‌ಗೆ ನೀರು ತುಂಬುವ ಸೌಲಭ್ಯಗಳ ಸ್ಥಾಪನೆ
- 2ನೇ ಪ್ರವೇಶ ದ್ವಾರದ ಬಳಿ ದ್ವಿಚಕ್ರ, ನಾಲ್ಕು ಚಕ್ರದ ವಾಹನ ನಿಲ್ದಾಣ ಸೌಲಭ್ಯ





ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆಯಲಿರುವ ಮಾಜಿ ಮುಖ್ಯಮಂತ್ರಿ ಹಾಗೂ ದೇಶದ ಹಿರಿಯ ರಾಜಕೀಯ ಮುತ್ಸದ್ದಿ ಎಸ್.ಎಂ.ಕೃಷ್ಣ ಅವರನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಶನಿವಾರ ಮೈಸೂರಿನ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಭೇಟಿಯಾಗಿ, ಅಭಿನಂದಿಸಿ, ಆಶೀರ್ವಾದ ಪಡೆದರು. ಕೃಷ್ಣ ಅವರು ಪ್ರತಾಪ್ ಸಿಂಹ ಅವರ ಅಚ್ಚುಮೆಚ್ಚಿನ ನಾಯಕ.

ಪ್ರಧಾನಿ ನರೇಂದ್ರ ಮೋದಿಯವರಂತೆ ಬದ್ಧತೆಯಿಂದ ಕೆಲಸ ಮಾಡೋಣ

ಬಿಜೆಪಿ ರಾಜ್ಯ ವಕ್ತಾರ ಎನ್.ವಿ.ಫಣೀಶ್ ಪಕ್ಷದ ವಿವಿಧ ಹಂತದ ಪದಾಧಿಕಾರಿಗಳಿಗೆ ಕಿವಿಮಾತು



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ವಿವಿಧ ಹಂತದ ಪದಾಧಿಕಾರಿಗಳ ಸಭೆ

ಮೈಸೂರು,ಮಾ.2(ಪಿಎಂ)– ಪಕ್ಷದ ಬಗ್ಗೆ ಬದ್ಧತೆ ಹೊಂದಿರುವ ಪ್ರಧಾನಿ ನರೇಂದ್ರ ಮೋದಿಯವರ ಪ್ರತಿ ಹೆಜ್ಜೆಯೂ ನಮ್ಮೆಲ್ಲರಿಗೂ ಮಾದರಿಯಾಗಬೇಕು. ಮುಂಬರುವ ಲೋಕಸಭಾ ಚುನಾವಣೆಗಾಗಿ ಮೋದಿಯವರಂತೆಯೇ ಕೆಲಸ ಮಾಡಬೇಕೆಂದು ಬಿಜೆಪಿಯ ವಿವಿಧ ಹಂತ ಪದಾಧಿಕಾರಿಗಳಿಗೆ ಪಕ್ಷದ ರಾಜ್ಯ ವಕ್ತಾರರೂ ಆದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಪ್ರಭಾರಿ ಎನ್.ವಿ. ಫಣೀಶ್ ಕಿವಿಮಾತು ಹೇಳಿದರು.

> ರಾಜ್ಯದಲ್ಲಿ ಯುವ ನಾಯಕ ಬಿ.ವೈ.ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾದ ಬಳಿಕ ಪ್ರತಿ ಜಿಲ್ಲೆಯಲ್ಲೂ ಪಕ್ಷದ ಬಲವರ್ಧನೆಯಾಗುತ್ತಿದೆ. ಜೊತೆಗೆ ಯುವಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲ ಸೂಚಿಸುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲಿಯೂ ಪಕ್ಷ ಜಯಭೇರಿ ಭಾರಿಸಲಿದೆ.
> -ಎಲ್.ಆರ್.ಮಹದೇವಸ್ವಾಮಿ

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಗ್ರಾಮಾಂತರ ಬಿಜೆಪಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ನೂತನವಾಗಿ ಆಯ್ಕೆಯಾಗಿರುವ 'ಮಂಡಲ ಅಧ್ಯಕ್ಷರು', 'ಜಿಲ್ಲಾ ಪದಾಧಿಕಾರಿಗಳು' ಹಾಗೂ ವಿವಿಧ ಪ್ರಕೋಷ್ಠದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಪದಾಧಿಕಾರಿಗಳು ಮೊದಲಿಗೆ ಶಿಸ್ತು, ಸಂಯಮದೊಂದಿಗೆ ಸಂಘಟನೆಗೆ ಸಮಯ ಕೊಡಬೇಕು. ತಮ್ಮ ಕುಟುಂಬದ ಸದಸ್ಯರು ತಮಗೆಲ್ಲಾ ಹೇಗೋ ಹಾಗೆಯೇ ಪಕ್ಷವೂ ಆಗಿದ್ದು, ತಮ್ಮೆಲ್ಲರನ್ನೂ ಗುರುತಿಸಿ ಜವಾಬ್ದಾರಿ ಕೊಟ್ಟ ಪಕ್ಷಕ್ಕೆ ಗೌರವ ನೀಡಿ, ಸಂಘಟಿಸಬೇಕು ಎಂದು ಸಲಹೆ ನೀಡಿದರು.

ವಿಭಾಗೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಕುಮಾರಸ್ವಾಮಿ ಮಾತನಾಡಿ, ಇಂದಿನಿಂದ ತಮ್ಮೆಲ್ಲರಿಗೂ ಪಕ್ಷ ಒಂದೊಂದು ಜವಾಬ್ದಾರಿ ನೀಡುವುದರ ಮೂಲಕ ತಮ್ಮನ್ನು ಗುರುತಿಸಿದೆ. ಹಾಗೆಯೇ ನೀವೆಲ್ಲರೂ ಸಂಘಟಿತರಾಗಿ ದೇಶದ ವೀರ ಯೋಧರಂತೆ ಕೆಲಸ ಮಾಡಬೇಕು. ಆ ನಿಟ್ಟಿನಲ್ಲಿ ಮುಂಬರುವ ಚುನಾವಣೆಯಲ್ಲಿ ಹೆಚ್ಚಿನ ಸಮಯವನ್ನು ಪಕ್ಷ ಸಂಘಟನೆಗೆ ಕೊಟ್ಟು ಪ್ರಾಮಾಣಿಕತೆ ಮೆರೆಯಬೇಕು ಎಂದು ಹೇಳಿದರು.

ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ನಾವೆಲ್ಲರೂ ರಾಷ್ಟ್ರೀಯ ಪಕ್ಷವಾದ ಬಿಜೆಪಿ ಪದಾಧಿಕಾರಿ ಆಗಿರುವುದಕ್ಕೆ ಹೆಮ್ಮೆಪಡಬೇಕು. ಹಾಗೆಯೇ ಕೇಂದ್ರದಲ್ಲಿ ನರೇಂದ್ರ ಮೋದಿಯವರ ಆಡಳಿತವು ಅಭಿವೃದ್ಧಿಪರವಾಗಿರುವ ಹಿನ್ನೆಲೆಯಲ್ಲಿ ಇತರ ದೇಶಗಳು ನಮ್ಮ ಪ್ರಧಾನಮಂತ್ರಿಯವರನ್ನು ಗೌರವಿಸುತ್ತಿವೆ. ಮೋದಿಯವರ ಆಡಳಿತದಲ್ಲಿ ಭಾರತವು ವಿಶ್ವಗುರು ಸ್ಥಾನದತ್ತ ದಾಪುಗಾಲು ಇಡುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಮತ್ತೊಮ್ಮೆ ಮೋದಿಯವರು ದೇಶದ ಪ್ರಧಾನಿಯಾಗಲು ನಾವು ಕಟಿಬದ್ಧರಾಗಿ ದುಡಿಯಬೇಕು ಎಂದು ತಿಳಿಸಿದರು.

ಲೋಕಸಭಾ ಚುನಾವಣಾ ಸಮೀಪಿಸುತ್ತಿರುವ ಹಿನ್ನೆಲೆ ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಹಗಲಿರುಳು ಶ್ರಮಿಸಿ ಪಕ್ಷ ಗೆಲ್ಲಿಸಬೇಕಿದೆ. ಆ ಮೂಲಕ ನಮ್ಮೆಲ್ಲರಿಗೂ ಜವಾಬ್ದಾರಿ ಕೊಟ್ಟ ಪಕ್ಷಕ್ಕೆ ಹಾಗೂ ನಮ್ಮ ನಾಯಕ ಬಿ.ವೈ.ವಿಜಯೇಂದ್ರ ಅವರಿಗೆ ಕೃತಜ್ಞತೆ ಸಲ್ಲಿಸಬೇಕಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಮಡವಾಡಿ, ಮುಖಂಡರಾದ ಬಾಲಣ್ಣ, ಕಿರಣ್ ಜಯರಾಮೇಗೌಡ, ಜಿಲ್ಲಾ ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮಂಡಲ ಅಧ್ಯಕ್ಷರು ಸೇರಿದಂತೆ ವಿವಿಧ ಮೋರ್ಚಾದ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಎಂಟು ವರ್ಷಗಳ ನಂತರ ಆರ್‌ಎಸ್‌ಎಸ್ ಕಾರ್ಯಕರ್ತ ರುದ್ರೇಶ್ ಹತ್ಯೆ ಆರೋಪಿ ಬಂಧನ

ನವದೆಹಲಿ, ಮಾ.2– ರಾಷ್ಟ್ರೀಯ ಸ್ವಯಂ ಸೇವಕ ಸಂಘದ(ಆರ್‌ಎಸ್‌ಎಸ್) ಕಾರ್ಯಕರ್ತ ರುದ್ರೇಶ್ ಹತ್ಯೆಯ ಪ್ರಮುಖ ಸಂಚುಕೋರ ಎನ್ನಲಾದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್‌ಐ) ಕಾರ್ಯಕರ್ತ ಮೊಹಮದ್ ಗೌಸ್ ನಯಾಜಿ ಎನ್ನುವವನನ್ನು ಘಟನೆ ನಡೆದು 8 ವರ್ಷಗಳ ಬಳಿಕ ರಾಷ್ಟ್ರೀಯ ತನಿಖಾ ದಳದ(ಎನ್‌ಐಎ) ಅಧಿಕಾರಿಗಳು ಮುಂಬೈ ವಿಮಾನ ನಿಲ್ದಾಣದಲ್ಲಿ ಶನಿವಾರ ಬಂಧಿಸಿದ್ದಾರೆ.

ತಾಂಜಾನಿಯಾದಲ್ಲಿ ತಲೆಮರೆಸಿಕೊಂಡಿದ್ದ ನಯಾಜಿ ಮುಂಬೈಗೆ ಬಂದಿಳಿದ ಕೂಡಲೇ ಆತನನ್ನು ಬಂಧಿಸಲಾಯಿತು. ಗುಪ್ತಚರ ಮಾಹಿತಿ ಆಧರಿಸಿ ನಯಾಜಿ ತಾಂಜಾನಿಯಾದಲ್ಲಿ ಇರುವುದನ್ನು ಪತ್ತೆ ಮಾಡಲಾಗಿತ್ತು. ಬೆಂಗಳೂರಿನ ಶಿವಾಜಿನಗರದ ಆರ್‌ಎಸ್‌ಎಸ್ ಕಾರ್ಯಕರ್ತ ರುದ್ರೇಶ್ ಅವರನ್ನು 2016ರ ಅಕ್ಟೋಬರ್ 16ರಂದು ನಾಲ್ವರ ಗುಂಪು ಹತ್ಯೆ ಮಾಡಿತ್ತು. ಹತ್ಯೆಯ ಪ್ರಮುಖ ಸಂಚುಕೋರ ಎಂಬ ಆರೋಪ ನಯಾಜಿ ಮೇಲಿದೆ. ನಯಾಜಿ ಬಂಧನದೊಂದಿಗೆ ರುದ್ರೇಶ್ ಹತ್ಯೆ ಪ್ರಕರಣದ ಎಲ್ಲ ಆರೋಪಿಗಳನ್ನು ಬಂಧಿಸಿದಂತಾಗಿದೆ.

ಆರ್.ರಾಕೇಶ್ ಗೌಡ ನೇಮಕ



ಮೈಸೂರು, ಮಾ.2– ಮೈಸೂರು ನಗರ (ಜಿಲ್ಲಾ) ಬಿಜೆಪಿ ಯುವಮೋರ್ಚಾ ಅಧ್ಯಕ್ಷರನ್ನಾಗಿ ಆರ್.ರಾಕೇಶ್ ಗೌಡ ಅವರನ್ನು ನೇಮಕ ಮಾಡಿ, ಮಾಜಿ ಶಾಸಕರೂ ಆದ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಆದೇಶ ನೀಡಿದ್ದಾರೆ.

ರಸ್ತೆ ಸುರಕ್ಷತೆಗೆ ಆದ್ಯತೆ ನೀಡಿ ಅಪಘಾತ ತಡೆಗಟ್ಟಿ

ಪೊಲೀಸ್, ಲೋಕೋಪಯೋಗಿ, ಹೆದ್ದಾರಿ, ಕೆಎಸ್‌ಆರ್‌ಟಿಸಿ, ಆರ್‌ಟಿಓ, ಪಾಲಿಕೆ, ಮುಡಾ, ಚೆಸ್ಕಾಂ ಅಧಿಕಾರಿಗಳಿಗೆ ಎಡಿಜಿಪಿ ಅಲೋಕ್‌ಕುಮಾರ್ ಸೂಚನೆ



ಎಡಿಜಿಪಿ (ರಸ್ತೆ ಸುರಕ್ಷತೆ) ಅಲೋಕ್‌ಕುಮಾರ್ ಅವರು ಶನಿವಾರ ಮೈಸೂರು ನಗರ ಪೊಲೀಸ್ ಆಯುಕ್ತ ಕಚೇರಿ ಸಭಾಂಗಣದಲ್ಲಿ ರೋಡ್ ಸೇಫ್ಟಿ ಕುರಿತು ಪೊಲೀಸ್ ಹಾಗೂ ಇತರ ಇಲಾಖಾ ಅಧಿಕಾರಿಗಳ ಸಭೆ ನಡೆಸಿದರು. ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.2(ಆರ್‌ಕೆ)–ರಸ್ತೆಗಳನ್ನು ಸುಸ್ಥಿತಿಯಲ್ಲಿಟ್ಟು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುವ ಮೂಲಕ ಅಪಘಾತ ತಡೆಗಟ್ಟುವಂತೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (Road Safety) ಅಲೋಕ್‌ಕುಮಾರ್ ಅವರು ಇಂದಿಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಮೈಸೂರು ನಗರ, ಜಿಲ್ಲಾ ಘಟಕದ ಪೊಲೀಸ್ ಅಧಿಕಾರಿಗಳು, ಪಾಲಿಕೆ, ಮುಡಾ, ಪಿಡಬ್ಲ್ಯೂಡಿ, ರಾಜ್ಯ–ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಕೆಎಸ್‌ಆರ್‌ಟಿಸಿ, ಆರ್‌ಟಿಓ, ಚೆಸ್ಕಾಂ ಹಾಗೂ ಇನ್ನಿತರ ಇಲಾಖೆ ಅಧಿಕಾರಿಗಳೊಂದಿಗೆ ಮಧ್ಯಾಹ್ನ 12.30ರಿಂದ 2.30 ಗಂಟೆವರೆಗೆ ಸಭೆ ನಡೆಸಿದರು.

ಬೀದಿದೀಪಗಳಿಲ್ಲದೆ, ಗುಂಡಿಗಳಿರುವ, ಸರಿಯಾದ ಸೂಚನಾ ಫಲಕಗಳಿಲ್ಲದ, ಅವೈಜ್ಞಾನಿಕ ಡುಬ್ಬಗಳು, ಇಂಜಿನಿಯರಿಂಗ್ ದೋಷಗಳಿರುವ ರಸ್ತೆಗಳು ಹಾಗೂ ಸಂಚಾರ ನಿಯಮಗಳನ್ನು ಸರಿಯಾಗಿ ಜಾರಿಗೊಳಿಸದಿರುವುದು ಅಪಘಾತಗಳಿಗೆ ಪ್ರಮುಖ ಕಾರಣವಾಗಿವೆ ಎಂದರು.

ಸಂಬಂಧಪಟ್ಟ ಪಾಲಿಕೆ, ಮುಡಾ, ಲೋಕೋಪಯೋಗಿ ಚೆಸ್ಕಾಂ, ಹೆದ್ದಾರಿ ಪ್ರಾಧಿಕಾರ, ಆರ್‌ಟಿಓ, ಕೆಎಸ್‌ಆರ್‌ಟಿಸಿಯಂತಹ ಇಲಾಖೆ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು ಸಮನ್ವಯ ಸಾಧಿಸಿ ಲೋಪ–ದೋಷಗಳನ್ನು ಸರಿಪಡಿಸಬೇಕು. ರಸ್ತೆ ತೆರಿಗೆ ಪಾವತಿಸಿದ ಸಾರ್ವಜನಿಕರಿಗೆ ವಾಹನ ಸಂಚರಿಸಲು ಸುರಕ್ಷಿತ ಹಾಗೂ ಯೋಗ್ಯವಾದ ರಸ್ತೆಗಳನ್ನು ನಿರ್ವಹಣೆ ಮಾಡುವುದು ಅಧಿಕಾರಿಗಳ ಆದ್ಯ ಕರ್ತವ್ಯವಾಗಿದೆ ಎಂಬುದನ್ನು ಗಮನದಲ್ಲಿರಿಸಿಕೊಂಡು ಕಾರ್ಯಗತ ಮಾಡಿ ಎಂದು ಅಲೋಕ್‌ಕುಮಾರ್ ಸಲಹೆ ನೀಡಿದರು.

ಎನ್‌ಫೋರ್ಸ್‌ಮೆಂಟ್, ಇಂಜಿನಿಯರಿಂಗ್ ಮತ್ತು ಎಜುಕೇಷನ್ ಮೂಲಕ ಅಪಘಾತ ತಡೆಗಟ್ಟಿ ಅಮೂಲ್ಯ ಪ್ರಾಣ ಉಳಿಸುವುದು ಆದ್ಯತೆಯಾಗಲಿ. ಶಾಲಾ–ಕಾಲೇಜು, ಸಾರ್ವಜನಿಕರಿಗೆ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಮ ಪಾಲನೆ ಬಗ್ಗೆ ಆಗಿಂದಾಗ್ಗೆ ಅರಿವು ಮೂಡಿಸುವ ಮೂಲಕ ರಸ್ತೆ ಅಪಘಾತಗಳನ್ನು ತಡೆಗಟ್ಟುವಂತೆಯೂ ಸೂಚನೆ ನೀಡಿದರು.

ಸಂಚಾರ ನಿಯಮ ಉಲ್ಲಂಘಿಸಿದವರ ಡಿಎಲ್ ಮತ್ತು ವಾಹನದ ಆರ್‌ಸಿ ಅಮಾನತುಗೊಳಿಸಬೇಕು. ಪರಿಣಾಮಕಾರಿಯಾಗಿ ನಿಯಮ ಜಾರಿ ಮಾಡಿದರೆ ಜನರು ಎಚ್ಚರಿಕೆಯಿಂದ ವಾಹನ ಚಾಲನೆ ಮಾಡುತ್ತಾರೆ. ಅಪಘಾತ ವಲಯ (ಬ್ಲಾಕ್ ಸ್ಪಾಟ್)ಗಳಲ್ಲಿ ಅಗತ್ಯ ಸೂಚನಾ ಫಲಕ ಅಳವಡಿಸುವುದೂ ಅತ್ಯಗತ್ಯ ಎಂದು ಎಡಿಜಿಪಿ ಅಭಿಪ್ರಾಯಪಟ್ಟರು.

ರಸ್ತೆ, ಚರಂಡಿ ನಿರ್ಮಾಣ, ಮರ ಕಡಿಯುವುದು, ಪೈಪ್‌ಲೈನ್ ಕಾಮಗಾರಿ, ಸೇತುವೆ ಕೆಲಸಗಳನ್ನು ಕೈಗೆತ್ತಿಕೊಂಡಾಗ ಮುಂಚಿತವಾಗಿ ಸಾರ್ವಜನಿಕರಿಗೆ ಮಾಹಿತಿ ನೀಡುವುದಲ್ಲದೆ, ಸ್ಥಳದಲ್ಲಿ ಅಗತ್ಯ ಸುರಕ್ಷಾ ಕ್ರಮ ಕೈಗೊಂಡು ಅವಘಡ ಸಂಭವಿಸದಂತೆ ಎಚ್ಚರ ವಹಿಸಿ ಎಂದು ಸಲಹೆ ನೀಡಿದರು. ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ.ಬಿ.ಎನ್.ನಂದಿನಿ, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಸಂಚಾರ ಎಸಿಪಿ ಪರಶುರಾಮಪ್ಪ, ಉಪ ವಿಭಾಗಗಳ ಎಸಿಪಿ, ಠಾಣಾ ಇನ್ಸ್‌ಪೆಕ್ಟರ್‌ಗಳು, ಜಿಲ್ಲಾ ಘಟಕದ ಡಿವೈಎಸ್ಪಿಗಳು ಸಭೆಯಲ್ಲಿದ್ದರು.




ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಅವರ ಮನೆಯಲ್ಲೇ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಸನ್ಮಾನಿಸಿದರು. ಈ ವೇಳೆ ಸುರೇಶ್ ಇನ್ನಿತರರಿದ್ದರು.

ಆರೋಗ್ಯ ಸುಧಾರಣೆ

ಮಾವಿನಕೆರೆ ರಂಗನಾಥಸ್ವಾಮಿಗೆ ಹರಕೆ ತೀರಿಸಿದ ದೊಡ್ಡಗೌಡ್ರು

ಹಾಸನ, ಮಾ.2– ಮಾಜಿ ಪ್ರಧಾನಿ ದೇವೇಗೌಡರು ಮಾವಿನಕೆರೆ ರಂಗನಾಥಸ್ವಾಮಿ ದೇವಸ್ಥಾನದಲ್ಲಿ 1001 ಕಳಸ ಪೂಜೆ ಮಾಡುವ ಮೂಲಕ ಹರಕೆ ತೀರಿಸಿದ್ದಾರೆ.



ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಆರೋಗ್ಯ ಸಮಸ್ಯೆ ಪರಿಹಾರವಾದರೆ ಪೂಜಾ ಕೈಂಕರ್ಯ ಮಾಡುವುದಾಗಿ ಮಾವಿನಕೆರೆ ರಂಗನಾಥಸ್ವಾಮಿಗೆ ಹರಕೆ ಕಟ್ಟಿಕೊಂಡಿದ್ದೆ. ಅದನ್ನು ಇಂದು ತೀರಿಸಿದ್ದೇನೆ. ಇದರಲ್ಲಿ ರಾಜಕೀಯ ಬೆರೆಸಬೇಡಿ ಎಂದರು.

ನನ್ನ ಆರೋಗ್ಯ ಸರಿ ಇರಲಿಲ್ಲ. ಎರಡು ವರ್ಷ ಭಗವಂತನ ಅನುಗ್ರಹದಿಂದ ಬದುಕಿದ್ದೇನೆ. ನನ್ನ ಅಳಿಯ ಡಾ.ಮಂಜುನಾಥ್ ಹಾಗೂ ಮಣಿಪಾಲ್ ಆಸ್ಪತ್ರೆ ಮುಖ್ಯಸ್ಥರಾದ ಡಾ.ಸುದರ್ಶನ್ ಬಲ್ಲಾಳ್ ಮತ್ತು ಅವರ ತಂಡ ಎರಡು ವರ್ಷದಿಂದ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ಶುಕ್ರವಾರ ಸಂಜೆ 6 ಗಂಟೆಯಿಂದ ರಂಗನಾಥಸ್ವಾಮಿ ದೇವಾಲಯದಲ್ಲಿ ಶಾಸ್ತ್ರೋಕ್ತವಾಗಿ, ನಮ್ಮ ಸಂಪ್ರದಾಯದಂತೆ ಪೂಜಾ ಕಾರ್ಯ ಮಾಡುತ್ತಿದ್ದೇವೆ. ತುಂಬಾ ಜನ ಪುರೋಹಿತರಿದ್ದಾರೆ, ಹೊರಗಡೆಯಿಂದಲೂ ಬಂದಿದ್ದಾರೆ. ಭಾನುವಾರ 4 ಗಂಟೆಗೆ ಪೂಜೆ ಮುಗಿಯಬಹುದು. ಇದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದು ಅವರು ಹೇಳಿದ್ದಾರೆ.

ನಾನು ರಾಜಕಾರಣ ಆರಂಭಿಸುವಾಗಲೂ ರಂಗನಾಥನ ಆಶೀರ್ವಾದ ಪಡೆದಿದ್ದೇನೆ. ನನಗೆ ಮೂರು ವರ್ಷ ಇದ್ದಾಗಿನಿಂದಲೂ ಈ ದೇವರ ಆಶೀರ್ವಾದ ಪಡೆದಿದ್ದೇನೆ. ಆ ಭಗವಂತನ ಅನುಗ್ರಹದಿಂದ ಬದುಕಿದ್ದೇನೆ ಎಂದಿದ್ದಾರೆ.

ಡಾ.ಅಂಬೇಡ್ಕರ್ ರಚಿತ ಸಂವಿಧಾನದ ಮೂಲತತ್ವಗಳ ಸಮರ್ಪಕ ಅನುಷ್ಠಾನವಾಗುತ್ತಿಲ್ಲ

● ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಬೇಸರ ● ವಿಶ್ವವಿದ್ಯಾನಿಲಯಗಳಲ್ಲಿ ಸಂವಿಧಾನ ಸಮಗ್ರ ಅಧ್ಯಯನವಾಗಬೇಕು



ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಶನಿವಾರ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅಭಿವೃದ್ಧಿ ದೃಷ್ಟಿಕೋನ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ,2(ಆರ್‌ಕೆ) ಡಾ. ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಅಂಶಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಬೇಸರ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಡಾ.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಮುಕ್ತ ಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ 'ಡಾ.ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಸಮಕಾಲೀನ ಜಗತ್ತು' ವಿಷಯ ಕುರಿತ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡುತ್ತಿದ್ದರು. ನಾಗರಿಕರು ಗೌರವಯುತವಾಗಿ ಜೀವನ ನಡೆಸಲು ಬೇಕಾದ ಅಂಶಗಳನ್ನು ಸಂವಿಧಾನದಲ್ಲಿ ತಿಳಿಸಲಾಗಿದೆ. ಅವುಗಳನ್ನು ಪಾಲಿಸಲು ಮುಂದಾಗದಿರುವುದು ಬೇಸರದ ಸಂಗತಿ. ಶಿಕ್ಷಣವು ಸಾಮಾಜಿಕ ಬದಲಾವಣೆಗೆ ಪ್ರಬಲ ಅಸ್ತ್ರ. ಈಗ ದೇಶದಲ್ಲಾಗುತ್ತಿರುವ ಕ್ರಾಂತಿಕಾರಿ ಬದಲಾವಣೆಗೆ ಡಾ.ಅಂಬೇಡ್ಕರ್ ಅವರ ಶ್ರಮವೇ ಕಾರಣ ಎಂದು ಅವರು ತಿಳಿಸಿದರು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂವಿಧಾನ ಓದುವುದು ಮಾನವೀಯತೆ ಅಧ್ಯಯನ ಮಾಡಿದಂತೆ, ದೇಶ ನಿರ್ಮಾಣ, ಸಾಂಸ್ಕೃತಿಕ ಬದುಕಿಗೆ ಡಾ.ಅಂಬೇಡ್ಕರ್ ಅವರ ಕೊಡುಗೆ ಅಪಾರವಾದುದು ಎಂದರು.

ಆರೋಗ್ಯ ಕ್ಷೇತ್ರದ ಸುಧಾರಣೆ, ಬಡತನ ನಿರ್ಮೂಲನೆ ಸೇರಿದಂತೆ ಸುಖೀ ರಾಜ್ಯ ಕಟ್ಟಲು ಭಾರತದ ಸರ್ವಶ್ರೇಷ್ಠ ಸಂವಿಧಾನ ಅವಕಾಶ ಕಲ್ಪಿಸಿದೆ. ಅದರೆ ಬಲಪಂಥೀಯ ಚಿಂತನೆಗಳು ಜನರನ್ನು ಭಾವನಾತ್ಮಕ ಚಿಂತನೆಗೊಳಪಡಿಸಿ ಅಧಿಕಾರಕ್ಕೇರಿ ಅಭಿವೃದ್ಧಿಗೋಲನ್ನು ಹಿಂದೆ ತಳ್ಳುತ್ತಿದೆ. ಇಂದು ನಮ್ಮ ಬಹುತ್ವ ಅಪಾಯದಲ್ಲಿದ್ದು, ಅಲ್ಪಸಂಖ್ಯಾತರು ಭಯಗ್ರಸ್ತರಾಗಿ ಬದುಕುವ ವಾತಾವರಣ ಸೃಷ್ಟಿಯಾಗುತ್ತಿದೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು. ವಿಶ್ವವಿದ್ಯಾನಿಲಯಗಳು ಸಂವಿಧಾನ ಕುರಿತು ಸಮಗ್ರ ಅಧ್ಯಯನ ನಡೆಸಬೇಕು. ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗೆ ಅವರ ಅಶಯಗಳನ್ನು ಹೇಳಿಕೊಂಡು ಸಮೃದ್ಧ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕು. ಮಾಧ್ಯಮಗಳು ವೈಚಾರಿಕತೆ ವೈಜ್ಞಾನಿಕ ನಿಲುವುಗಳನ್ನು ಬಲಪಡಿಸುವಂತಾಗಬೇಕಿದೆ ಎಂದ ಡಾ.ಹೆಚ್‌ಸಿ.ಮಹದೇವಪ್ಪ ಅವರು, ಸಾಮಾಜಿಕ ಅರ್ಥಿಕ ಸಮಾನತೆಯಲ್ಲದ ಸ್ವಾತಂತ್ರ್ಯದಿಂದ ಮಕ್ಕಳಿಗೆ, ಮಹಿಳೆಯರಿಗೆ ರೈತರಿಗೆ ನೆಮ್ಮದಿಯ ಬದುಕು ಸಿಗುವುದಿಲ್ಲ ಎಂದರು. ಜಾತಿ, ಧರ್ಮ, ಸಾಂಸ್ಕೃತಿಕ ಭಾವನೆ ಹೆಚ್ಚಿಸುವ ಸಂಘಟನೆಗಳಿಂದ ಪ್ರಜಾಪ್ರಭುತ್ವದ ಬೇರು ಅಲುಗಾಡುವ ಅಪಾಯವಿದೆ. ಸಂವಿಧಾನದ ಅವಕಾಶಗಳನ್ನು ಅನುಭವಿಸಬೇಕಾದರೆ ಜಾಗೃತಿ ಅತೀ ಮುಖ್ಯವಾಗಿದ್ದು, ಆದಕ್ಕಾಗಿಯೇ ಸರ್ಕಾರ ಎಲ್ಲಾ ಶಾಲಾ–ಕಾಲೇಜು, ವಿವಿಗಳಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಓದಬೇಕೆಂದು ಸಂಪುಟ ನಿರ್ಧರಿಸಿದೆ ಎಂದೂ ಅವರು ನುಡಿದರು. ಅದಕ್ಕೂ ಮೊದಲು ಚಾಮರಾಜನಗರದ ಪುಟ್ಟ ಬಾಲಕ ತೇಜಸ್ ಚಕ್ರವರ್ತಿ ಸಂವಿಧಾನದ ವಿಧಿಗಳನ್ನು ಹೇಳುವುದಲ್ಲದೆ ನಿರ್ದೇಶನಾತ್ಮಕ ತತ್ವಗಳು, ಹಕ್ಕು ಬಾಧ್ಯತೆ ಮತ್ತು ಕರ್ತವ್ಯಗಳ ಕುರಿತು ಭಾಷಣ ಮಾಡಿ ಗಮನ ಸೆಳೆದಿದ್ದು ವಿಶೇಷವಾಗಿತ್ತು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಪ್ರವೀಣ್, ಪ್ರೊ.ಎನ್.ಲಕ್ಷ್ಮಿ, ಡಾ.ಶಿವಕುಮಾರಸ್ವಾಮಿ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯ ನೀಡುವಂತೆ ಆಗ್ರಹ




ಮರಿತಿಬ್ಬೇಗೌಡ

ಮೈಸೂರು, ಮಾ.2(ಬಿಎಲ್‌ಯು)– ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರಿಗೆ ಅರ್ಹತಾ ದಿನಾಂಕದಿಂದಲೇ ಆರ್ಥಿಕ ಸೌಲಭ್ಯ ನೀಡುವಂತೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರಲ್ಲಿ ಮನವಿ ಮಾಡಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ಸಹಾಯಕ ಪ್ರಾಧ್ಯಾಪಕರಿಗೆ ಹಾಗೂ ಸಹ ಪ್ರಾಧ್ಯಾಪಕರಿಗೆ ಸೇವಾ ಪದೋನ್ನತಿ ನೀಡಿ, ಆರ್ಥಿಕ ಸೌಲಭ್ಯವನ್ನು ಅವರ ಅರ್ಹತೆ ದಿನಾಂಕದಿಂದಲೇ ನೀಡುವಂತೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ತೀರ್ಪು ನೀಡಿದೆ ಎಂದು ಹೇಳಿದ್ದಾರೆ.

ಈ ತೀರ್ಪನ್ನು ಸರ್ಕಾರ ಕೂಡಲೇ ಜಾರಿಗೊಳಿಸಬೇಕು. ಯುಜಿಸಿಯ ಸಿಎಎಸ್ ನಿಯಮಾವಳಿಯಂತೆ ಅರ್ಹ ಸರ್ಕಾರಿ, ಅನುದಾನಿತ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ನಿರ್ದೇಶಕರು, ಗ್ರಂಥಪಾಲಕರಿಗೆ ಹಾಗೂ ಎಐಸಿಟಿಇ ನಿಯಮಾವಳಿಯಂತೆ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳ ಅರ್ಹ ಅಧ್ಯಾಪಕರಿಗೆ ಅನ್ವಯವಾಗುವಂತೆ ಅರ್ಹತೆ ಹೊಂದಿದ ದಿನಾಂಕದಿಂದಲೇ ಆರ್ಥಿಕ ಸೌಲಭ್ಯ ನೀಡಬೇಕು. ಈ ಸಂಬಂಧ ಸರ್ಕಾರ ಕೂಡಲೇ ಆದೇಶ ಹೊರಡಿಸುವಂತೆ ಮರಿತಿಬ್ಬೇಗೌಡರು, ಡಾ. ಸುಧಾಕರ್ ಅವರನ್ನು ಆಗ್ರಹಿಸಿದ್ದಾರೆ.

ಮುಡಾ ಅಧ್ಯಕ್ಷ ಕೆ.ಮರಿಗೌಡರಿಗೆ ಅಭಿನಂದನೆ



ಮುಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕೆ.ಮರಿಗೌಡ ಅವರನ್ನು ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಿನಕಲ್ ಮಂಜು, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧನಗಳ್ಳಿ ಪ್ರವೀಣ್, ಪೈಲ್ವಾನ್ ನವೀನ್, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕಮ್ಮರಳ್ಳಿ ಸಂತೋಷ್, ನಾಗವಾಲ ಪಂಚಾಯತಿ ಮಾಜಿ ಅಧ್ಯಕ್ಷ ಹಾಗೂ ಸದಸ್ಯರಾದ ಸೀಗಳ್ಳಿ ಕುಮಾರ್, ಬಸವನಾಯ್ಕ, ಬಿ.ಕೆ.ಈಶ್ವರ್, ನಾಗವಾಲ ಮಹೇಶ್, ಕಾಂಗ್ರೆಸ್ ಮುಖಂಡರಾದ ಬೊಮ್ಮನಹಳ್ಳಿ ಶಿವರಾಜ್, ನಾಗರಾಜ್, ಮಹೇಶ್, ಪ್ರಕಾಶ್, ದೊಡ್ಡಕಾನ್ಯ ವಿಜಯ್‌ಕುಮಾರ್ ಇನ್ನಿತರರಿದ್ದರು.

ಬಿಜೆಪಿ ರಾಜ್ಯ ವಕ್ತಾರರಾಗಿ ಎನ್.ವಿ.ಫಣೀಶ್ ನೇಮಕ



ಮೈಸೂರು, ಮಾ.2(ಬಿಎಲ್‌ಯು)– ಬಿಜೆಪಿ ರಾಜ್ಯ ವಕ್ತಾರರನ್ನಾಗಿ ಮೈಸೂರಿನ ಎನ್.ವಿ.ಫಣೀಶ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇಮಕ ಮಾಡಿದ್ದಾರೆ. ರಾಜ್ಯ ವಕ್ತಾರರ ಜೊತೆಗೆ ಫಣೀಶ್ ಅವರಿಗೆ ಪ್ರಕೋಷ್ಠಗಳ ರಾಜ್ಯ ಸಹ ಸಂಯೋಜಕರನ್ನಾಗಿ ಕೂಡ ನಿಯುಕ್ತಿಗೊಳಿಸಲಾಗಿದೆ. ಫಣೀಶ್ ಜೊತೆಗೆ ಪ್ರಕಾಶ್ ಶೇಷರಾಘವಚಾರ್, ಮೋಹನ್ ವಿಶ್ವ ಅವರನ್ನು ಕೂಡ ರಾಜ್ಯ ವಕ್ತಾರರನ್ನಾಗಿ ನೇಮಕ ಮಾಡಿದ್ದು, ಭೋಜರಾಜ ಕರೂದಿ ಅವರನ್ನು ಪ್ರಕೋಷ್ಠಗಳ ರಾಜ್ಯ ಸಹ ಸಂಯೋಜಕರಾಗಿ ಬಿ.ವೈ.ವಿಜಯೇಂದ್ರ ನೇಮಿಸಿದ್ದಾರೆ.

ಜೆಡಿಎಸ್‌ಗೆ ಸಿದ್ದೇಶ್ ನೇಮಕ



ಮೈಸೂರು: ಮೈಸೂರು ನಗರ (ಜಿಲ್ಲೆ) ಜಾತ್ಯಾತೀತ ಜನತಾದಳದ ಕಾರ್ಮಿಕ ವಿಭಾಗದ ಅಧ್ಯಕ್ಷರನ್ನಾಗಿ ಎಸ್.ಸಿದ್ದೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ನಗರಾಧ್ಯಕ್ಷ ಕೆಟಿ.ಚೆಲುವೇಗೌಡ ತಿಳಿಸಿದ್ದಾರೆ.

ಇಎಂಎಂಆರ್‌ಸಿಯಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ



ಮೈಸೂರು,ಮಾ.2(ಎಂಕೆ)–ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಸಂಸ್ಥೆ (ಇಎಂಎಂಆರ್‌ಸಿ)ಯಲ್ಲಿ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಕಣ್ಣಿನ ಉಚಿತ ತಪಸಾಣಾ ಶಿಬಿರ ನಡೆಯಿತು.

ಶಿಬಿರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿ ಸುಮಾರು 80ಕ್ಕೂ ಹೆಚ್ಚು ಮಂದಿ ಕಣ್ಣಿನ ತಪಾಸಣೆ ಮಾಡಿಸಿಕೊಂಡರು. ಈ ವೇಳೆ ಕಣ್ಣಿನ ತಜ್ಞ ಡಾ. ಪವನ್ ಜೋಶಿ, ಶೈಕ್ಷಣಿಕ ಬಹು ಮಾಧ್ಯಮ ಸಂಶೋಧನಾ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಭಾರತದಲ್ಲಿ 2001ರಿಂದ ಇಲ್ಲಿತನಕ 4.6 ಲಕ್ಷ ಹೆಣ್ಣು ಭ್ರೂಣ ಹತ್ಯೆಯಾಗಿದೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉಪ ನಿರ್ದೇಶಕ ಡಾ.ವಿವೇಕ್ ದೊರೈ ಆತಂಕಕಾರಿ ಮಾಹಿತಿ

ಮೈಸೂರು, ಮಾ.2(ಬಿಎಲ್‌ಯು)– ಹೆಣ್ಣು ಭ್ರೂಣ ಹತ್ಯೆ ತಡೆ ಕಾಯ್ದೆ ಜಾರಿಯಾಗಿದ್ದರೂ 2001 ರಿಂದ ಇಲ್ಲಿತನಕ 4.6 ಲಕ್ಷ ಹೆಣ್ಣು ಭ್ರೂಣ ಹತ್ಯೆ ಮಾಡಲಾಗಿದೆ ಎಂದು ಬೆಂಗಳೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉಪ ನಿರ್ದೇಶಕ ಡಾ.ವಿವೇಕ್ ದೊರೈ ತಿಳಿಸಿದ್ದಾರೆ.



ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರ ವಿಧಾನಗಳ(ಲಿಂಗ ಆಯ್ಕೆ ನಿಷೇಧ) ಕುರಿತು ಆಯೋಜಿಸಿದ್ದ ಮೈಸೂರು ವಿಭಾಗೀಯ ಮಟ್ಟದ ಕಾರ್ಯಾಗಾರದಲ್ಲಿ ಬೆಂಗಳೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉಪನಿರ್ದೇಶಕ ಡಾ.ವಿವೇಕ್ ದೊರೈ ಮಾತನಾಡಿದರು.

ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಇಂದು ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರ ವಿಧಾನಗಳ(ಲಿಂಗ ಆಯ್ಕೆ ನಿಷೇಧ) ಕುರಿತು ಆಯೋಜಿಸಿದ್ದ ಮೈಸೂರು ವಿಭಾಗೀಯ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕಾಯ್ದೆ ಜಾರಿಯಾದರೂ ವರ್ಷಕ್ಕೆ ಸರಾಸರಿ 45 ಸಾವಿರ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು.

ಭಾರತ ಸರ್ಕಾರವೇ ಈ ಅಂಕಿ ಅಂಶಗಳನ್ನು ನೀಡಿದೆ. ಇದರ ಪ್ರಕಾರ ಕಟ್ಟುನಿಟ್ಟಿನ ಕಾನೂನು ಜಾರಿಯಾದರೂ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಇನ್ನು ನಡೆಯುತ್ತಲೇ ಇದೆ ಎಂದು ಹೇಳಿದರು.

ದೇಶದಲ್ಲಿ ಮೊದಲ ಬಾರಿಗೆ 1988 ರಲ್ಲಿ ಮಹಾರಾಷ್ಟ್ರದಲ್ಲಿ ಪಿಎನ್‌ಡಿಟಿ ಕಾಯ್ದೆ ಜಾರಿಗೆ ಬಂದಿತು. ಇದನ್ನೆ ಕೆಲವು ಮಾರ್ಪಾಡು ಮಾಡಿದ ಭಾರತ ಸರ್ಕಾರ ದೇಶಕ್ಕೆ ಅನ್ವಯ ಆಗುವಂತೆ 1994ರಲ್ಲಿ ಈ ಕಾಯ್ದೆ ಜಾರಿಗೊಳಿಸಿತು. ಆದರೆ ಈ ಕಾಯ್ದೆ ಪರಿಣಾಮಕಾರಿ ಅನುಷ್ಠಾನ ಆಗಿರಲಿಲ್ಲ. ತರುವಾಯ 2001ರಲ್ಲಿ ಈ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಕಾಯ್ದೆ ಅನುಷ್ಠಾನಕ್ಕೆ ಕ್ರಮ ವಹಿಸಲಾಯಿತು ಎಂದು ಡಾ.ವಿವೇಕ ದೊರೈ ವಿವರಿಸಿದರು.

ಈ ಕಾಯ್ದೆ ಜಾರಿಯಾದರೂ ಇಂದಿಗೂ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದ್ದು,

> ಹೆಣ್ಣು ಭ್ರೂಣ ಹತ್ಯೆ ಪರಿಣಾಮ ಈಗ ಮದುವೆಯಾಗಲು ಗಂಡಿಗೆ ಹೆಣ್ಣು ಸಿಗದ ಪರಿಸ್ಥಿತಿ ಎದುರಾಗಿದೆ. ಸೃಷ್ಟಿಯಲ್ಲಿ ಹೆಣ್ಣು ಇಲ್ಲದಿದ್ದರೆ ಸಮಾಜದಲ್ಲಿ ಏರುಪೇರಾಗುತ್ತದೆ ಎಂಬುದಕ್ಕೆ ಇದೇ ಸ್ಪಷ್ಟ ನಿದರ್ಶನ. ಭ್ರೂಣ ಹತ್ಯೆ ಮಾಡುವುದು ಕೊಲೆ ಮಾಡುವುದಕ್ಕೆ ಸಮವಾದ ಅಪರಾಧ.
>
> –ಡಾ.ವಿವೇಕ್ ದೊರೈ

ಒಟ್ಟಾರೆ ದೇಶದ ಜನಸಂಖ್ಯೆಯಲ್ಲಿ ಇದು ಶೇಕಡ 5ಕ್ಕೂ ಹೆಚ್ಚಿದೆ. ಇದೇ ರೀತಿಯ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದ್ದರೆ ಮುಂದಿನ ದಿನಗಳಲ್ಲಿ ಗಂಡು ಮಕ್ಕಳ ಸಂತತಿ ಹೆಚ್ಚಾಗಿ, ಹೆಣ್ಣು ಮಕ್ಕಳೇ ಇಲ್ಲದಂತಾಗುತ್ತದೆ ಎಂದು ಎಚ್ಚರಿಸಿದರಲ್ಲದೆ, ಲಿಂಗಪಾತ ಹಾಗೂ ಅದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು.

ಮಂಡ್ಯದಲ್ಲಿ ನಡೆದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಸ್ಕ್ಯಾನಿಂಗ್ ಮಾಡುತ್ತಿದ್ದ ಮೆಷಿನ್ ಎಲ್ಲಿಂದ ಬಂದಿದೆ ಎಂಬ ಬಗ್ಗೆ ಈ ತನಕ ಮಾಹಿತಿ ಲಭ್ಯವಾಗಿಲ್ಲ. ಆದ ಕಾರಣ ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಆಸ್ಪತ್ರೆ ಹಾಗೂ ಲ್ಯಾಬ್‌ಗಳಿಗೆ ಆರೋಗ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸುವ ವೇಳೆ ಸ್ಕ್ಯಾನಿಂಗ್ ಮೆಷಿನ್‌ಗಳು ನೋಂದಣಿಯಾಗಿದೆಯೆ ಎಂದು ಮೊದಲು ತಿಳಿದುಕೊಳ್ಳಬೇಕು ಎಂದು ಡಾ.ವಿವೇಕ ದೊರೈ ಸಲಹೆ ನೀಡಿದರು.

ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ಮೈಸೂರು ವಿಭಾಗದ ಎಂಟು ಜಿಲ್ಲೆಯ ಆರೋಗ್ಯಾಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳೂ ಸಹ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತವಾಗಿ ಈ ಕಾರ್ಯಾಗಾರ ಆಯೋಜಿಸಿತ್ತು.

ಚಾಮುಂಡೇಶ್ವರಿ, ಸಮೂಹ ದೇವಾಲಯಗಳ ನೌಕರರ ಸಂಘದ ಅಧ್ಯಕ್ಷ ಶ್ರೀಧರ್ ದೀಕ್ಷಿತ್



ಮೈಸೂರು,ಮಾ.2(ಎಂಟಿವೈ)– ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳ ನೌಕರರ ಸಂಘದ ವಿಶೇಷ ಸರ್ವ ಸದಸ್ಯರ ಸಭೆ ನಡೆದು, ಎನ್.ಶ್ರೀಧರ ದೀಕ್ಷಿತ್ ಅವರನ್ನು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಶ್ರೀಧರ್ ದೀಕ್ಷಿತ್ ಅವರು ಸತತ 17ನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಗಮಿಕ ಶಶಿಶೇಖರ ದೀಕ್ಷಿತ್ ಗೌರವಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಸಿ.ಎಸ್.ಸೋಮಶೇಖರ್, ಕೆ.ಶ್ರೀಹರಿ, ಸಂಜೀವಿ (ಉಪಾಧ್ಯಕ್ಷ), ಸಿ.ಎಸ್.ವಿಶ್ವನಾಥ್ (ಪ್ರಧಾನ ಕಾರ್ಯದರ್ಶಿ) ಎಸ್. ರಾಧಾಕೃಷ್ಣ (ಜಂಟಿ ಕಾರ್ಯದರ್ಶಿ), ವಿ. ಗೋಪಾಲಯ್ಯರ್ (ಖಜಾಂಚಿ), ಮಣೆಗಾರ್, ಆನಂದ ಎಂ, ಶಶಿನಾಯಕ್, ಜಯಮ್ಮ, ಆನಂದ್ ಕೆ, ಪುರುಷೋತ್ತಮ, ಧನಂಜಯ (ನಿರ್ದೇಶಕರು), ಎಂ.ಪರಶಿವಮೂರ್ತಿ, ಶಿವಮಲ್ಲು ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ.



ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 10ನೇ ವರ್ಷದ ಅಂಗವಾಗಿ ನಡೆದ ಕುಂಬಾಭಿಷೇಕ ಸಮಾರಂಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಪದಾಧಿಕಾರಿಗಳಾದ ಮೊಗಣ್ಣ, ರಂಗಣ್ಣ, ತಿಮ್ಮಣ್ಣ, ಬೋರಲಿಂಗ, ಟಿ.ರವಿಗೌಡ, ಕಾಳಪ್ಪ, ರಾಜ್‌ಕುಮಾರ್ (ದತ್ತು), ರಾಘವೇಂದ್ರ, ಸತೀಶ್, ಸುರೇಶ್, ಮಂಜು, ನಿಂಗಣ್ಣ, ರಾಜಣ್ಣ, ಮಹದೇವ ಮುಂತಾದವರು ಉಪಸ್ಥಿತರಿದ್ದರು.

ಸಾಹಿತ್ಯ ಕ್ಷೇತ್ರದಲ್ಲಿ ಚಿತ್ರ ಸಾಹಿತಿಗಳ ಕಡೆಗಣನೆ

- ಹಿರಿಯ ರಂಗಕರ್ಮಿ ನಾ.ನಾಗಚಂದ್ರ ವಿಷಾದ
- ಸೋರಟ್ ಅಶ್ವತ್ಥ್, ಜ್ಯೋತಿ ಸಂಸ್ಮರಣೆ



ನಮನ ಕಲಾಮಂಟಪದಲ್ಲಿ ನಡೆದ ಕಲಾನಮನ–ಸೋರಟ್ ಅಶ್ವತ್ಥ್, ಜ್ಯೋತಿ ಸಂಸ್ಮರಣಾ ಕಾರ್ಯಕ್ರಮವನ್ನು ಕೆ.ರಘುರಾಂ ವಾಜಪೇಯಿ ಉದ್ಘಾಟಿಸಿದರು.


ಮೈಸೂರು,ಮಾ.2–ಸಾಹಿತ್ಯ ಕ್ಷೇತ್ರದಲ್ಲಿ ಚಿತ್ರ ಸಾಹಿತಿಗಳನ್ನು ಕಡೆಗಣಿಸಲಾಗುತ್ತಿದೆ ಎಂದು ಹಿರಿಯ ರಂಗಕರ್ಮಿ ನಾ. ನಾಗಚಂದ್ರ ವಿಷಾದಿಸಿದರು.

ಅಭಿರುಚಿ ಬಳಗವು, ಗಾನಸಿರಿ ವೃಂದ ಸಹಯೋಗದಲ್ಲಿ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಶನಿವಾರ ಏರ್ಪಡಿಸಿದ್ದ ಕಲಾನಮನ– ಸೋರಟ್ ಅಶ್ವತ್ಥ್, ಜ್ಯೋತಿ ಅವರ ಸಂಸ್ಮರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಸೋರಟ್ ಅಶ್ವತ್ಥ್, ಹುಣಸೂರು ಕೃಷ್ಣಮೂರ್ತಿ, ಯೋಗಾನರಸಿಂಹ, ಲಕ್ಷ್ಮೀನಾರಾಯಣ ಭಟ್ಟ, ದೊಡ್ಡರಂಗೇಗೌಡ ಮೊದಲಾದವರನ್ನು ಗಮನಿಸಿದಾಗ ಇದು ವೇದ್ಯವಾಗುತ್ತದೆ ಎಂದರು.

ಮೊದಲೆಲ್ಲಾ ಸಾಹಿತ್ಯ ರಚಿಸಿದ ನಂತರ ರಾಗ ಸಂಯೋಜಿಸಲಾಗುತ್ತಿತ್ತು. ಈಗ ರಾಗ ಸಂಯೋಜಿಸಿದ ನಂತರ ಸಾಹಿತ್ಯ ರಚಿಸಬೇಕಾಗಿ ಬಂದಿದೆ. ಪಾಶ್ಚಾತ್ಯ ಸಂಗೀತದ ಅಬ್ಬರದಲ್ಲಿ ಚಿತ್ರ ಸಾಹಿತ್ಯ ಏನು? ಎಂಬುದೇ ಗೊತ್ತಾಗುವುದಿಲ್ಲ ಎಂದು ಅವರು ವಿಷಾದಿಸಿದರು.

ಮತ್ತೊರ್ವ ಹಿರಿಯ ರಂಗಕರ್ಮಿ ಸಿ.ವಿ.ಶ್ರೀಧರಮೂರ್ತಿ ಮಾತನಾಡಿ, ಒಂದು ಕಾಲಕ್ಕೆ ಮೈಸೂರಿನ ರಾಮಾನುಜ ರಸ್ತೆಯಲ್ಲಿ ಸೋರಟ್ ಅಶ್ವತ್ಥ್, ರತ್ನಾಕರ್, ಚೇತನ್ ರಾಮರಾವ್, ಪಕ್ಕದ ಚಾಮುಂಡಿಪುರಂನಲ್ಲಿ ವಿಷ್ಣುವರ್ಧನ್ ಅವರ ತಂದೆ, ಸರಸ್ವತಿಪುರಂನಲ್ಲಿ ಕೆ.ಎಸ್.ಅಶ್ವತ್ಥ್, ಪಂಚವಟಿಯಲ್ಲಿ ಎಂ.ಪಿ.ಶಂಕರ್– ಹೀಗೆ ಚಿತ್ರರಂಗದ ಹಲವಾರು ಗಣ್ಯರು ನೆಲೆಸಿದ್ದರು ಎಂದು ಸ್ಮರಿಸಿದರು. ಕುಣಿಗಲ್ ಪ್ರಭಾಕರ ಶಾಸ್ತ್ರಿ, ಕು.ರಾ.ಸೀತಾರಾಮ ಶಾಸ್ತ್ರಿ, ಆರ್.ಎನ್.ಜಯಗೋಪಾಲ್ ಮೊದಲಾದವರ ಬಗ್ಗೆ ಸರಿಯಾಗಿ ವಿಮರ್ಶೆಯೇ ನಡೆಯಲಿಲ್ಲ. ಕೆಲ ಸಮಯದ ನಂತರ ಪುಟ್ಟಣ್ಣ ಕಣಗಾಲ್ ಅವರ ಬಗ್ಗೆ ಸ್ವಲ್ಪ ವಿಮರ್ಶೆಯಾಯಿತು ಎಂದರು.

ಸೋರಟ್ ಅಶ್ವತ್ಥ್ ಹಾಗೂ ಜ್ಯೋತಿ ಅವರ ಬಗ್ಗೆ ಆಕಾಶವಾಣಿ ನಿವೃತ್ತ ಕಾರ್ಯಕ್ರಮಾಧಿಕಾರಿ ಎನ್.ವಿ.ರಮೇಶ್ ಉಪನ್ಯಾಸ ನೀಡಿದರು. ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸಿದರು. ಸ್ನೇಹ ಸಿಂಚನ ಸಂಸ್ಥೆ ಅಧ್ಯಕ್ಷೆ ಮ.ನ.ಲತಾ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ.ನಿ.ಗಿರಿಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿದ್ದರು. ಉಮಾ ರಮೇಶ್, ರಾಘವೇಂದ್ರ ರತ್ನಾಕರ ಇದ್ದರು. ಪರಮೇಶ ಕೆ.ಉತ್ತನಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಛಾಯಾ ಯಶವಂತ್, ಪ್ರಮೋದ್ ಶರ್ಮ ನೆನಪುಗಳನ್ನು ಹಂಚಿಕೊಂಡರು. ಯಶವಂತ್ ಹಾಗೂ ತಂಡ, ಸಾಯಿಮೂರ್ತಿ, ರಾಜೇಂದ್ರಪ್ರಸಾದ್ ಗೀತಗಾಯನ ನಡೆಸಿಕೊಟ್ಟರು.



ಮೈಸೂರಿನ ಬಿಜೆಪಿ ಕಚೇರಿಗೆ ಆಗಮಿಸಿದ ಮಾಜಿ ಸಚಿವ ಈಶ್ವರಪ್ಪ ಅವರನ್ನು ನಗರ ಅಧ್ಯಕ್ಷರು ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಡಿ.ಮಹೇಶ್‌ನಾಯಕ ಆತ್ಮೀಯವಾಗಿ ಬರಮಾಡಿಕೊಂಡರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಮಾ.2–ಕನ್ನೇಗೌಡ ಟೈಗರ್ಸ್ ಹಾಗೂ ರಾಕೇಶ್ ಗೆಳೆಯರ ಬಳಗದ ಸಂಯುಕ್ತ ಆಶ್ರಯದಲ್ಲಿ ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಇಸಿಜಿ, ಕಣ್ಣಿನ ತಪಾಸಣೆ, ರಕ್ತದಾನ ಶಿಬಿರ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಮಾ.4ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಕೆ.ಜಿ. ಕೊಪ್ಪಲಿನ ಅಂಡರ್‌ಬ್ರಿಡ್ಜ್ ಸರ್ಕಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.8, ಮಹಾಶಿವರಾತ್ರಿ ಪೂಜಾ ಮಹೋತ್ಸವ


ಮೈಸೂರು,ಮಾ.2–ಮೈಸೂರಿನ ವಿ.ವಿ. ಮೊಹಲ್ಲಾ ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ (ಈಶ್ವರ ದೇವಸ್ಥಾನ)ದಲ್ಲಿ ಮಾ.8ರಂದು ಶ್ರದ್ಧಾ ಭಕ್ತಿಗಳಿಂದ ಮಹಾ ಶಿವರಾತ್ರಿ ಉತ್ಸವ, ಅಭಿಷೇಕಗಳು, ಅರ್ಚನೆ, ಪೂಜೆ, ಬೆಳಗ್ಗೆ 6ರಿಂದ ಮ. 1.30ರವರೆಗೆ ಮತ್ತೆ ಸಂಜೆ 4ರಿಂದ ಮಾರನೇ ದಿನ ಬೆಳಗ್ಗೆ 7ರವರೆಗೆ ನಡೆಯಲಿದೆ.



ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರಾದ ಮಾಜಿ ಸಚಿವ ಹಾಗೂ ವಿಧಾನಪರಿಷತ್ ಸದಸ್ಯ ಎಂ.ಆರ್.ಸೀತಾರಾಮ್ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅಭಿನಂದಿಸಿದರು. ಈ ವೇಳೆ ಅಖಿಲ ಭಾರತ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ, ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಹಿರಿಯ ಪತ್ರಕರ್ತ ಬಿ.ಎಸ್.ಸತ್ಯನಾರಾಯಣ, ಪ್ರೊ.ಎಂ.ಪಿ.ರಾಘವೇಂದ್ರ, ಡಾ.ಟಿ.ರಮೇಶ್, ಎಸ್.ಉದಯಶಂಕರ್, ದರ್ಶನ್, ಪುಟ್ಟಸ್ವಾಮಿ, ಸುಶಾಂತ್ ಇತರರಿದ್ದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಯೂಬ್ ಖಾನ್ ಅಧಿಕಾರ ಸ್ವೀಕಾರ

ದಸರಾ ವಸ್ತುಪ್ರದರ್ಶನದಲ್ಲಿ ಖಾಸಗಿ ವಸ್ತುಪ್ರದರ್ಶನಕ್ಕೆ ಅವಕಾಶ ಸಾಧ್ಯತೆ



ಮೈಸೂರು, ಮಾ.2(ಬಿಎಲ್‌ಯು)– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಯೂಬ್ ಖಾನ್ ಇಂದು ಅಧಿಕಾರ ಸ್ವೀಕರಿಸಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಶನಿವಾರ ಸರ್ಕಾರದ ನಿಯಮಗಳಂತೆ ದಾಖಲಾತಿಗಳಿಗೆ ಸಹಿ ಮಾಡುವ ಮೂಲಕ ಅಯೂಬ್ ಖಾನ್ ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಸಿ.ಎನ್. ಮಂಜೇಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಅನಂತ, ನಾರಾಯಣ ಸೇರಿದಂತೆ ಹಲವು ಗಣ್ಯರು ಅಯೂಬ್ ಖಾನ್ ಅವರನ್ನು ಅಭಿನಂದಿಸಿದರು.

ಈ ವೇಳೆ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ಪುಷ್ಪಗುಚ್ಛ ನೀಡಿ, ಹಾರ ಹಾಕಿ ಅಯೂಬ್ ಖಾನ್‌ಗೆ ಅಭಿನಂದನೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅಯೂಬ್ ಖಾನ್, ಪ್ರಾಧಿಕಾರದ ಅಧ್ಯಕ್ಷನಾಗಿ ಆಯ್ಕೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೆವಾಲ, ಶಾಸಕರಾದ ತನ್ವೀರ್ ಸೇಠ್, ಹರೀಶ್ ಗೌಡ ಸೇರಿದಂತೆ ಇತರರಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಮೈಸೂರು ನಗರದ ಸುತ್ತಮುತ್ತ ಹಲವು ಖಾಸಗಿ ವಸ್ತುಪ್ರದರ್ಶನಗಳು ನಡೆಯುತ್ತಿದೆ. ವರ್ಷ ಪೂರ್ತಿ ದಸರಾ ವಸ್ತುಪ್ರದರ್ಶನ ನಡೆಸುವ ಸಲುವಾಗಿ ನಗರದಲ್ಲಿ ನಡೆಯುವ ಖಾಸಗಿ ವಸ್ತು ಪ್ರದರ್ಶನವನ್ನು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ನಡೆಸಲು ಪ್ರಯತ್ನ ಮಾಡುತ್ತೇನೆ ಎಂದರು.

ಮುಖ್ಯಮಂತ್ರಿಗಳಿಂದ ಜಲಪುರಿಯಲ್ಲಿ ಪೊಲೀಸ್ ಆರೋಗ್ಯ ಕೇಂದ್ರ ಉದ್ಘಾಟನೆ

ಮೈಸೂರು,ಮಾ.2(ಆರ್‌ಕೆ)–ಮೈಸೂರಿನ ಜಲಪುರಿ ಪೊಲೀಸ್ ಕ್ವಾಟ್ರರ್ಸ್‌ನಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಪೊಲೀಸ್ ಆರೋಗ್ಯ ಕೇಂದ್ರ (ಪಿಹೆಚ್‌ಸಿ)ದ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು.

ಪೊಲೀಸ್ ಭವನದ ವೆಲ್‌ಫೇರ್ ನಿಧಿಯಿಂದ ನಿರ್ಮಿಸಿರುವ ಪೊಲೀಸ್ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ 2023ರ ಏಪ್ರಿಲ್ 6ರಂದು ಅಂದಿನ ನಗರ ಪೊಲೀಸ್ ಆಯುಕ್ತರಾಗಿದ್ದ ಚಂದ್ರಗುಪ್ತ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು. ನಿರ್ಮಿತಿ ಕೇಂದ್ರದಿಂದ ಕಾಮಗಾರಿ ಪೂರ್ಣಗೊಂಡಿದ್ದು, ಸುಸಜ್ಜಿತ ಕಟ್ಟಡವನ್ನು ಟೇಪು ಕತ್ತರಿಸುವ ಮೂಲಕ ಮುಖ್ಯಮಂತ್ರಿಗಳು ಸೇವೆಗೆ ಸಮರ್ಪಿಸಿದರು.

46 ಚದರಡಿ ವಿಸ್ತಾರದಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ಸ್ವಾಗತಸ್ಥಳ (ರಿಸೆಪ್ಷನ್), ಹೊರ ರೋಗಿ ವಿಭಾಗ, ಒಳ ರೋಗಿಗಳ ಸೇವೆ, ಪ್ರಯೋಗಾಲಯ, ಔಷಧ ವಿತರಣೆ, ಆಂಬುಲೆನ್ಸ್ ಸೇವೆ, ಉಗ್ರಾಣ, ಆಪ್ತ ಸಮಾಲೋಚನೆ, ವೈದ್ಯರ ತಪಾಸಣಾ ಕೊಠಡಿ, ತುರ್ತು ಚಿಕಿತ್ಸಾ ವಿಭಾಗ ಸೇರಿದಂತೆ ಹಲವು ಸೌಲಭ್ಯಗಳನ್ನು ಸಿದ್ಧಪಡಿಸಲಾಗಿದೆ ಉದ್ಘಾಟಿಸಿದ ಬಳಿಕ ಸಿದ್ದರಾಮಯ್ಯ ಕೇಂದ್ರದಲ್ಲಿ ಒದಗಿಸಿರುವ ವೈದ್ಯಕೀಯ ಸೌಲಭ್ಯಗಳನ್ನು ಪರಿಶೀಲಿಸಿದರು.



ಮೈಸೂರಿನ ಜಲಪುರಿಯಲ್ಲಿ ನಿರ್ಮಿಸಿರುವ ಪೊಲೀಸ್ ಆರೋಗ್ಯ ಕೇಂದ್ರದ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಕೇಂದ್ರದ ಡೆಪ್ಯುಟಿ ಚೀಫ್ ಮೆಡಿಕಲ್ ಆಫೀಸರ್ ಡಾ.ವೆಂಕಟೇಶ್‌ಬಾಬು ವಿವರಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ದಕ್ಷಿಣ ವಲಯ ಡಿಐಜಿ ಅಮರ್‌ಸಿಂಗ್, ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎ.ಮಾರುತಿ, ಮೌಂಟೆಡ್ ಕಂಪನಿ ಕಮಾಂಡೆಂಟ್ ಸುರೇಶ್, ಶೈಲೇಂದ್ರ, ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಕಾರನ್ನು ತಡೆದು 62 ಲಕ್ಷ ರೂ. ದೋಚಿದ್ದ ಪ್ರಕರಣ

ಮತ್ತಿಬ್ಬರ ಬಂಧನ: ಹಣ, ವಾಹನಗಳ ವಶ

ಈ ಹಿಂದೆ ಐವರ ಬಂಧನವಾಗಿತ್ತು



ದರೋಡೆಕೋರರಿಂದ ವಶಪಡಿಸಿಕೊಳ್ಳಲಾದ ವಾಹನವನ್ನು ಪರಿಶೀಲಿಸುತ್ತಿರುವುದು.

ಮಡಿಕೇರಿ,ಮಾ.2– ಪೊನ್ನಂಪೇಟೆ ತಾಲೂಕಿನ ದೇವರಪುರದಲ್ಲಿ 2023ರ ಡಿಸೆಂಬರ್ 9ರ ಮಧ್ಯ ರಾತ್ರಿ ನಡೆದಿದ್ದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಮಾಹಿತಿ ನೀಡಿದ್ದಾರೆ.

ಗೋಣಿಕೊಪ್ಪದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ದೇವರಪುರದ ಗೋಣಿಕೊಪ್ಪ-ಮೈಸೂರು ರಸ್ತೆಯಲ್ಲಿ ಕೇರಳ ಮೂಲದ ವ್ಯಕ್ತಿಯ ಕಾರನ್ನು ಅಡ್ಡಗಟ್ಟಿ 62 ಲಕ್ಷ ರೂ.ಗಳನ್ನು ದರೋಡೆ ಮಾಡಲಾಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸ್ ಇಲಾಖೆ ವಿರಾಜಪೇಟೆ ಮೂಲದ 5 ಮಂದಿಯನ್ನು ಈ ಮೊದಲು ಬಂಧಿಸಿತ್ತು. ಅಂದು ನಡೆಸಿದ ವಿಚಾರಣೆ ವೇಳೆ ಮತ್ತಷ್ಟು ಆರೋಪಿಗಳ ಶಾಮೀಲಾಗಿರುವ ಮಾಹಿತಿ ಲಭಿಸಿತ್ತು ಎಂದರು.

ಅದರ ಆಧಾರದಲ್ಲಿ ತನಿಖೆ ಮುಂದುವರೆಸಿ ದರೋಡೆ ಕೃತ್ಯದಲ್ಲಿ ಪಾಲ್ಗೊಂಡು ತಲೆ ಮರೆಸಿಕೊಂಡಿದ್ದ ಕೇರಳ ಮೂಲದ ಇಬ್ಬರು ಪ್ರಮುಖ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಹೇಳಿದರು. ದರೋಡೆ ಪ್ರಕರಣದಲ್ಲಿ ಬಳಕೆ ಮಾಡಲಾದ 30 ಲಕ್ಷ ರೂ. ಮೌಲ್ಯದ ಒಟ್ಟು 5 ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ. 7ರಿಂದ 8 ಲಕ್ಷ ರೂ. ಹಣವನ್ನೂ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶ್ಲಾಘನೀಯ ಸೇವೆ: ದೇವರಪುರ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡಗಳನ್ನು ರಚನೆ ಮಾಡಲಾಗಿತ್ತು ಗೋಣಿಕೊಪ್ಪ ಪೊನ್ನಂಪೇಟೆಯ ಪೊಲೀಸ್ ಅಧಿಕಾರಿಗಳಾದ ಗೋವಿಂದ ರಾಜು, ನವೀನ್ ಕುಮಾರ್, ರೂಪಾದೇವಿ, ಶಿವರಾಜ್ ಮತ್ತು ಸಿಬ್ಬಂದಿಗಳ ತಂಡ ಹೆಚ್ಚಿನ ಶ್ರಮಪಟ್ಟು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಗೋಣಿಕೊಪ್ಪ ಮತ್ತು ಪೊನ್ನಂಪೇಟೆ ಪೊಲೀಸ್ ಠಾಣೆಗಳ ಕ್ರೈಂ ವಿಭಾಗದ ಸಿಬ್ಬಂದಿ ಕೇರಳಕ್ಕೆ ತೆರಳಿ 1 ತಿಂಗಳ ಕಾಲ ಅಲ್ಲಿ ಠಿಕಾಣಿ ಹೂಡಿ ತಲೆ ಮರೆಸಿಕೊಂಡಿದ್ದ ಆರೋಪಿಗಳನ್ನು ಬಂಧಿಸಿದ್ದಾರೆ. ಈ ಪ್ರಕರಣವನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿದ್ದು, ದರೋಡೆ ಕೃತ್ಯದಲ್ಲಿ ಪಾಲ್ಗೊಂಡಿರುವ ಎಲ್ಲಾ ಆರೋಪಿಗಳನ್ನು ಬಂಧಿಸಲಾಗುತ್ತದೆ ಎಂದು ಎಸ್.ಪಿ. ರಾಮರಾಜನ್ ಸ್ಪಷ್ಟಪಡಿಸಿದರು.

ಮತ್ತಷ್ಟು ಆರೋಪಿಗಳು ದರೋಡೆ ಪ್ರಕರಣದಲ್ಲಿ ಭಾಗಿಯಾಗಿರುವ ಶಂಕೆ ಇದೆ. ಎಲ್ಲಾ ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇಂತಹ ಕೃತ್ಯಗಳು ಕೊಡಗು ಜಿಲ್ಲೆಯಲ್ಲಿ ನಡೆಯದಂತೆ ತಡೆಯುವ ಸಂದೇಶವನ್ನೂ ಪೊಲೀಸ್ ಇಲಾಖೆ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇರಳ ರಾಜ್ಯದ ಮಲಪ್ಪುರಂ ಜಿಲ್ಲೆಯ ತಿರುಮಾಂಗದಿ ತಾಲೂಕಿನ ಕೊಡಕಾಡ್ ನಿವಾಸಿ ಗುತ್ತಿಗೆದಾರ ಶಮ್ಜದ್ ಕೆ. ಅವರು ಮೈಸೂರಿನಲ್ಲಿ 1 ಕೆ.ಜಿ ಚಿನ್ನವನ್ನು ಮಾರಾಟ ಮಾಡಿ ಹಣ ಸಹಿತ ಕೇರಳ ಕಡೆಗೆ ತೆರಳುತ್ತಿದ್ದ ಸಂದರ್ಭ ಅವರ ಕಾರನ್ನು ಅಡ್ಡಗಟ್ಟಿ ದರೋಡೆ ಮಾಡಲಾಗಿತ್ತು. ಈ ಘಟನೆಯಿಂದ ಕೊಡಗು ಜಿಲ್ಲೆ ಬೆಚ್ಚಿ ಬಿದ್ದಿತ್ತಲ್ಲದೇ, ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಘಟನಾ ಸ್ಥಳಕ್ಕೆ ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಡಾ.ಬೋರಲಿಂಗಯ್ಯ, ಜಿಲ್ಲಾ ಎಸ್.ಪಿ. ಕೆ.ರಾಮರಾಜನ್, ಅಡಿಷನಲ್ ಎಸ್.ಪಿ. ಸುಂದರ್‌ರಾಜ್ ಮತ್ತು ಅಧಿಕಾರಿ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ಈ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಚಿನ್ನದ ವ್ಯಾಪಾರಿ ಮತ್ತು ದೂರುದಾರ ಶಮ್ಜದ್ ಅವರನ್ನು ಕೂಡ ವಿಚಾರಣೆಗೆ ಒಳಪಡಿಸಲಾಗಿತ್ತು. ಮಾತ್ರವಲ್ಲದೇ ಆದಾಯ ತೆರಿಗೆ, ಜಿಎಸ್‌ಟಿ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳಿಗೆ ಈ ಪ್ರಕರಣದ ಬಗ್ಗೆ ಪೊಲೀಸ್ ಇಲಾಖೆ ಮಾಹಿತಿ ನೀಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಇಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ

ಮಡಿಕೇರಿ, ಮಾ.2– ಜಿಲ್ಲೆಯಲ್ಲಿ ಮಾ.3 ರಿಂದ 6 ರವರೆಗೆ 'ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ 2023–24' ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮದ ಚಾಲನೆಯು ಮಾ.3 ರಂದು ಬೆಳಗ್ಗೆ 8 ಗಂಟೆಗೆ ನಗರದ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಮಕ್ಕಳ ಲಸಿಕಾ ವಿಭಾಗದಲ್ಲಿ(ಜಿಲ್ಲಾಸ್ಪತ್ರೆ) ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಅವರು ತಿಳಿಸಿದ್ದಾರೆ.

ಚೆರಿಯಪರಂಬು ಪೈಸಾರಿಯಲ್ಲಿ ಅನಧಿಕೃತ ಶೆಡ್ಡುಗಳ ತೆರವು



ನಾಪೋಕ್ಲು ಹೋಬಳಿ ಬೇತು ಗ್ರಾಮದ ಸ.ನಂ 3ರ ಚೆರಿಯಪರಂಬು ಹೊಳೆ ಕೆರೆ ಪೈಸಾರಿಯಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್ಡುಗಳನ್ನು ತೆರವುಗೊಳಿಸಲಾಯಿತು.

ನಾಪೋಕ್ಲು: ನಾಪೋಕ್ಲು ಹೋಬಳಿ ಬೇತು ಗ್ರಾಮದ ಸ.ನಂ.3ರ ಚೆರಿಯ ಪರಂಬು ಹೊಳೆ ಕೆರೆ ಪೈಸಾರಿಯಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್ಡುಗಳನ್ನು ಶನಿವಾರ ತೆರವುಗೊಳಿಸಲಾಯಿತು. ಶೆಡ್‌ಗಳನ್ನು ನಿರ್ಮಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಅನಧಿಕೃತ ಶೆಡ್ಡುಗಳನ್ನು ತೆರವುಗೊಳಿಸಲಾಗಿದೆ.

ಕಾವೇರಿ ನದಿ ತೀರದ ಚೆರಿಯಪರಂಬುವಿನಲ್ಲಿ ಈಗಾಗಲೇ 150ಕ್ಕೂ ಅಧಿಕ ಗುಡಿಸಲು, ಮನೆಗಳನ್ನು ನಿರ್ಮಿಸಲಾಗಿದೆ. ಇತ್ತೀಚಿಗೆ ಕೆಲವರು ಹೊಸದಾಗಿ ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಅಂತಹ ಶೆಡ್‌ಗಳನ್ನು ಮಾತ್ರ ಗುರುತಿಸಿ ಶನಿವಾರ ತೆರವುಗೊಳಿಸಲಾಯಿತು. ದಿಢೀರ್ ಆಗಿ ಹೊಸದಾಗಿ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಿಸಿದ್ದರಿಂದ ಕಂದಾಯ ಇಲಾಖೆ ಅಧಿಕಾರಿ ಸಿಬ್ಬಂದಿಗಳು ಸ್ಥಳ ಪರಿಶೀಲನೆ ಮಾಡಿ ಅವುಗಳನ್ನು ತೆರವುಗೊಳಿಸಿದರು. ಈ ಹಿಂದೆ ನಿರ್ಮಿಸಲಾಗಿರುವ ಗುಡಿಸಲುಗಳನ್ನು ಈಗ ತೆರವುಗೊಳಿಸುತ್ತಿಲ್ಲ. ಅದನ್ನು ವಾಸಕ್ಕೆ ಬಳಸಿಕೊಳ್ಳಬಹುದು. ಆದರೆ ನೂತನವಾಗಿ ಶೆಡ್ ನಿರ್ಮಾಣ ಮಾಡುವಂತಿಲ್ಲ ಎಂದು ಅಧಿಕಾರಿಗಳು ಸೂಚಿಸಿದರು.

ಕಳೆದ 15 ವರ್ಷಗಳಿಂದ ಕಂದಾಯ ಇಲಾಖೆ ಹಾಗೂ ಪರಿಸರ ನಿವಾಸಿಗಳ ನಡುವೆ ಹಗ್ಗ ಜಗ್ಗಾಟ ನಡೆಯುತ್ತಿದೆ. ಸ್ಥಳವು ಕಾವೇರಿ ನದಿ ತೀರದಲ್ಲಿದ್ದು ಮಳೆಗಾಲದಲ್ಲಿ ಮುಳುಗಡೆಯಾಗುತ್ತಿದೆ ಇದರಿಂದಾಗಿ ಗುಡಿಸಲು ನಿರ್ಮಾಣಕ್ಕೆ ಅವಕಾಶ ಕಲ್ಪಿಸಿ ಕೊಡಬಾರದು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ. ಇಲ್ಲಿ ಸ್ಥಳೀಯರಲ್ಲದೆ ಹೊರ ಊರಿನವರು ಬಂದು ನೆಲೆಸುತ್ತಿದ್ದಾರೆ ಎಂಬ ದೂರುಗಳು ಸಹ ಕೇಳಿ ಬಂದಿವೆ ಕಳೆದ ಒಂದು ವಾರದಿಂದ ದಿಢೀರ್ ಆಗಿ ನಿರ್ಮಿಸಲಾದ ಶೆಡ್ಡುಗಳನ್ನು ಕಾರ್ಯಾಚರಣೆ ನಡೆಸಿ ತರುಗೊಳಿಸಲಾಯಿತು. ಕಾರ್ಯಾಚರಣೆಯ ಸಂದರ್ಭ ಠಾಣಾಧಿಕಾರಿ ಮಂಜುನಾಥ ಸಿಬ್ಬಂದಿಗಳ ಮುಂಜಾಗ್ರತಾ ರಕ್ಷಣೆಯೊಂದಿಗೆ ಕಂದಾಯ ಪರಿವೀಕ್ಷಕ ರವಿಕುಮಾರ್, ಗ್ರಾಮ ಲೆಕ್ಕಿಗರಾದ ಅಮೃತ ಕಂದಾಯ ಇಲಾಖೆಯ ಸಿಬ್ಬಂದಿಗಳಾದ ಪೂಣಚ್ಚ, ತಿಮ್ಮಣ್ಣ, ಕುಶಾಲಪ್ಪಸೋಮಯ್ಯ, ರಾಜ,ಲಾಲು,ಸಂಜಯ್, ಪಾಲ್ಗೊಂಡಿದ್ದರು.

ನಿರ್ಮಾಣ ಹಂತದ ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ಮಡಿಕೇರಿ,ಮಾ.2– ಮಡಿಕೇರಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಜಿಲ್ಲಾಸ್ಪತ್ರೆಯ ಕಟ್ಟಡದಿಂದ ಬಿದ್ದು ಕಾರ್ಮಿಕನೋರ್ವ ಮೃತಪಟ್ಟ ಘಟನೆ ನಡೆದಿದೆ. ಕೊಲ್ಕತ್ತ ಮೂಲದ ಕಾರ್ಮಿಕ ರಾಕಿಬ್(22) ಮೃತ ದುರ್ದೈವಿ. ಕಾರ್ಮಿಕ ರಾಕಿಬ್ ಮುಂಜಾನೆ ಜಿಲ್ಲಾಸ್ಪತ್ರೆಯ ಕಿಟಕಿ ಕೆಲಸ ಮಾಡಲು ಮುಂದಾಗಿದ್ದು, ಹೊರ ಭಾಗದಲ್ಲಿ ಹಾಕಿದ್ದ ಸಾರ್ವೆಯಿಂದ ಆಯ ತಪ್ಪಿ 30 ಅಡಿ ಎತ್ತರದಿಂದ ಸಿಮೆಂಟ್ ನೆಲಕ್ಕೆ ಬಿದ್ದಿದ್ದಾನೆ. ಪರಿಣಾಮ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಘಟನಾ ಸ್ಥಳಕ್ಕೆ ಮಡಿಕೇರಿ ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೂಕ್ತ ಸುರಕ್ಷತಾ ಕ್ರಮಗಳನ್ನು ಅನುಸರಿಸದಿರುವುದೇ ಈ ಅನಾಹುತಕ್ಕೆ ಕಾರಣ ಎಂಬ ಆರೋಪ ಕೇಳಿ ಬಂದಿದೆ. ಪೊಲೀಸರು ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ. ಈ ಘಟನೆ ಕುರಿತು ಮಡಿಕೇರಿ ನಗರ ಠಾಣೆಯಲ್ಲಿ ಪ್ರಕ



ರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಬೂದನೂರು ಉತ್ಸವಕ್ಕೆ ಅದ್ಧೂರಿ ಚಾಲನೆ

ಇತಿಹಾಸಕ್ಕೆ ತಕ್ಕಂತೆ ಮಂಡ್ಯ ಅಭಿವೃದ್ಧಿ ಆಗಿಲ್ಲ: ಚಲುವರಾಯಸ್ವಾಮಿ ವಿಷಾದ



ಬೂದ ನೂರು ಗ್ರಾಮದಲ್ಲಿ ಬೂದನೂರು ಉತ್ಸವವನ್ನು ಉದ್ಘಾಟಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಮಂಡ್ಯ, ಮಾ.2– ತಾಲೂಕಿನ ಬೂದನೂರು ಗ್ರಾಮದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ಆರಂಭವಾದ ಬೂದನೂರು ಉತ್ಸವಕ್ಕೆ ಅದ್ಧೂರಿ ಚಾಲನೆ ನೀಡಲಾಯಿತು.

ಬೂದನೂರು ಉತ್ಸವಕ್ಕೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ ಅವರು ಮಾತನಾಡಿ, ಮಂಡ್ಯ ಜಿಲ್ಲೆ ಬಹಳ ಇತಿಹಾಸ ಹೊಂದಿರುವ ಜಿಲ್ಲೆಯಾಗಿದೆ ಆದರೆ ಇತಿಹಾಸಕ್ಕೆ ತಕ್ಕಂತೆ ಜಿಲ್ಲೆಯನ್ನು ಅಭಿವೃದ್ಧಿ ಮಾಡುವಲ್ಲಿ ಎಲ್ಲರೂ ವಿಫಲರಾಗಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಬೂದನೂರು ಗ್ರಾಮದಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿರುವ ಕಾಶಿ ವಿಶ್ವನಾಥ ಸ್ವಾಮಿ ಹಾಗೂ ಅನಂತ ಪದ್ಮನಾಭ ಸ್ವಾಮಿ ದೇವಾಲಯಗಳು ಇದ್ದರೂ ಪ್ರಸಿದ್ಧಿ ಆಗಿರಲಿಲ್ಲ. ಇದನ್ನು ಮನಗಂಡು ಶಾಸಕ ರವಿಕುಮಾರ್ ಈ ಉತ್ಸವ ಆಯೋಜಿಸಿದ್ದಾರೆ ಎಂದರು. ಮಂಡ್ಯ ಜಿಲ್ಲೆಯಲ್ಲಿ ಹಲವಾರು ಪ್ರವಾಸಿ ತಾಣಗಳು ಹಾಗೂ ದೇವಾಲಯಗಳು ಇವೆ ಮೈಸೂರು ಮಹಾರಾಜರು ಕೃಷ್ಣರಾಜಸಾಗರ ಜಲಾಶಯವನ್ನು ಕಟ್ಟಿರುವುದು ನಮ್ಮ ಕಣ್ಣ ಮುಂದೆ ಇದೆ. ಆದರೆ ಎಲ್ಲ ಸರ್ಕಾರಗಳು ಪ್ರವಾಸಿ ತಾಣಗಳನ್ನು ಪ್ರಸಿದ್ಧಿಗೊಳಿಸಲು ವಿಫಲವಾಗಿರುವ ಕಾರಣ ಪ್ರಚಾರಕ್ಕೆ ಬಂದಿಲ್ಲ ಎಂದರು.

ಪ್ರಮುಖವಾದ ಸ್ಥಳಗಳನ್ನು ಗುರುತಿಸಬೇಕಾದರೆ ಅದಕ್ಕೆ ತಕ್ಕ ಸನ್ನಿವೇಶ ಬರಬೇಕು. ಅಂತಹ ಸನ್ನಿವೇಶ ಎಂದು ಬಂದಿದ್ದು ಬೂದನೂರು ಉತ್ಸವ ಆರಂಭವಾಗಲು ಕಾರಣವಾಗಿದೆ. ಶಾಸಕ ರವಿಯವರು ಒಂದು ಸಣ್ಣ ಗ್ರಾಮದಿಂದ ಬಂದು ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿ ರಾಜಕೀಯದಲ್ಲೂ ಗುರುತಿಸಿಕೊಂಡು ಇಂದು ನಿಮ್ಮೆಲ್ಲರ ಸಹಕಾರ ಹಾಗೂ ಬೆಂಬಲದಿಂದ ಶಾಸಕರಾಗಿದ್ದಾರೆ. ಜನರ ಜೊತೆ ಬೆರೆತು ಬಹಳ ಆಸಕ್ತಿಯಿಂದ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ಈ ಉತ್ಸವ ನಿದರ್ಶನವಾಗಿದೆ ಎಂದು ಶ್ಲಾಘಿಸಿದರು.

ಹೊಯ್ಸಳರ ಕಾಲದ ಮೂರನೇ ಬಲ್ಲಾಳರ ಅವಧಿಯಲ್ಲಿ 13ನೇ ಶತಮಾನದಲ್ಲಿ ನಿರ್ಮಾಣವಾದ ಕಾಶಿ ವಿಶ್ವನಾಥ ಸ್ವಾಮಿ ಹಾಗೂ ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಾಲಯಗಳು ಈ ಬೂದನೂರು ಉತ್ಸವದ ಮೂಲಕ ಇತಿಹಾಸದ ಪುಟ ಸೇರಲಿವೆ ಎಂದರು. ಬರಗಾಲ ಎನ್ನದೆ ನಮ್ಮ ಸರ್ಕಾರವು ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿ ಹಾಗೂ ವಿದ್ಯಾನಿಧಿ ಯೋಜನೆ ಅಡಿ ಪ್ರತಿ ಕುಟುಂಬಕ್ಕೆ 5,000 ರೂ.ಗಳನ್ನು ನೀಡುತ್ತಿದೆ. ಮಾರ್ಚ್ ತಿಂಗಳ ಅಂತ್ಯದೊಳಗೆ 25 ಲಕ್ಷ ರೈತರಿಗೆ ಬರ ಪರಿಹಾರದ ಹಣ ಅವರ ಖಾತೆಗೆ ನೇರವಾಗಿ ಜಮ ಆಗಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಪಿ.ರವಿಕುಮಾರ್ ಗಣಿಗ ಮಾತನಾಡಿ, ಇತಿಹಾಸ ಇದ್ದಾಗ ಮಾತ್ರ ಇತಿಹಾಸ ಬರೆಯಲು ಸಾಧ್ಯ. ಒಂದು ಸಾವಿರ ವರ್ಷಗಳ ಇತಿಹಾಸ ಇರುವ ಬೂದನೂರು ಗ್ರಾಮದ ಕಾಶಿ ವಿಶ್ವನಾಥ ಸ್ವಾಮಿ ಹಾಗೂ ಶ್ರೀ ಅನಂತ ಪದ್ಮನಾಭಸ್ವಾಮಿ ದೇವಾಲಯಗಳು ಪ್ರಚಾರಕ್ಕೆ ಬಂದಿರಲಿಲ್ಲ ಇದನ್ನು ಮನಗಂಡು ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಬೂದನೂರು ಉತ್ಸವ ಎಂದು ಏರ್ಪಡಿಸಿ ಪ್ರಚಾರಪಡಿಸಲಾಗುತ್ತಿದೆ ಎಂದರು.

ಕೇರಳದ ತ್ರಿವೇಂಡ್ರಮ್ ಹೊರತುಪಡಿಸಿದರೆ ದಕ್ಷಿಣದ ಹೊಸ ಬೂದನೂರು ಗ್ರಾಮದಲ್ಲಿ ಶ್ರೀ ಅನಂತ ಪದ್ಮನಾಭಸ್ವಾಮಿ ದೇವಾಲಯವಿದೆ. ಈ ಉತ್ಸವದ ಮೂಲಕ ಬೂದನೂರು ಎಂಬ ಹೆಸರು ಇತಿಹಾಸ ಪುಟ ಸೇರಿದೆ ಎಂದು ಹೇಳಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೇವಲ ಒಂಬತ್ತು ತಿಂಗಳಲ್ಲಿ ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ 1,200 ಕೋಟಿ ರೂಗಳನ್ನು ನೀಡುವ ಮೂಲಕ ಅಭಿವೃದ್ಧಿಗೆ ಸಹಕಾರ ನೀಡಿದೆ. ಆದರೆ ಹಿಂದಿನವರು ಜಿಲ್ಲೆಗೆ 8,000 ಕೋಟಿ ನೀಡಿದ್ದೇನೆ ಎಂದು ಹೇಳಿದ್ದರು. ಆದರೆ ಅದು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಪರೋಕ್ಷವಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಟೀಕಿಸಿದರು. ವೇದಿಕೆಯಲ್ಲಿ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್.ಯತೀಶ್, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಎಸಿ ಗಂಗಾಧರ್, ತಹಸಿಲ್ದಾರ್ ಶಿವಕುಮಾರ ಬಿರಾದಾರ್, ಮನ್ಮುಲ್ ನಿರ್ದೇಶಕ ಯು.ಸಿ. ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಿದ್ದಲಿಂಗೇಶ್, ಗ್ರಾಪಂ ಅಧ್ಯಕ್ಷೆ ಮಾನಸ, ಉಪಾಧ್ಯಕ್ಷೆ ಜಯಲಕ್ಷ್ಮಿ, ಇತರರು ಭಾಗವಹಿಸಿದ್ದರು.

ಕಾರ್ಯಕ್ರಮದ ನಂತರ ಕಾಶಿ, ದೇವಾಲಯ ದಿಂದ ಬಂದಿದ್ದ ಅರ್ಚಕರಿಂದ ಗಂಗಾರತಿ ಕಾರ್ಯಕ್ರಮ ನಡೆಯಿತು. ಬಳಿಕ ಚಿತ್ರನಟ ಹಾಗೂ ಸಂಗೀತ ನಿರ್ದೇಶಕ ಸಾಧುಕೋಕಿಲ ತಂಡದಿಂದ ರಸಮಂಜರಿ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮಕ್ಕೆ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಶಾಸಕ ರವಿಕುಮಾರ್ ಗಣಿಗ ಹಾಗೂ ಗಣ್ಯರನ್ನು ಗ್ರಾಮದ ಹೆಬ್ಬಾಗಿಲಿನಿಂದ ಪೂರ್ಣ ಕುಂಭ ಹಾಗೂ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.




ಬೂದನೂರು ಉತ್ಸವದಲ್ಲಿ ಆಕರ್ಷಿಸಿದ ಸಾಂಸ್ಕೃತಿಕ ಕಾರ್ಯಕ್ರಮ.

ಇಂದು ಮಂಡ್ಯಕ್ಕೆ 10 ಹೊಸ ವಾಹನಗಳ ಉದ್ಘಾಟನೆ

ಮಂಡ್ಯ, ಮಾ.2– ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್. ಚೆಲುವರಾಯಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮಾ.3 ರಂದು ಮಂಡ್ಯ ಬಸ್ ನಿಲ್ದಾಣದಲ್ಲಿ 5 ಅಶ್ವಮೇಧ ಮತ್ತು 5 ಕರ್ನಾಟಕ ಸಾರಿಗೆ ಒಟ್ಟು 10 ಹೊಸ ವಾಹನಗಳ ಉದ್ಘಾಟನೆ ಮಾಡಲಿದ್ದಾರೆ ಎಂದು ಮಂಡ್ಯ ವಿಭಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ 8 ಬಾರಿ ಪಲ್ಟಿ ಹೊಡೆದ ಕಾರು, ತಪ್ಪಿದ ಅನಾಹುತ



ಮಂಡ್ಯ: ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ಬೆಳಿಗ್ಗೆ ಭೀಕರ ಅಪಘಾತ ಸಂಭವಿಸಿ ಕಾರು 8 ಬಾರಿ ಪಲ್ಟಿ ಹೊಡೆದರೂ ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳು ಸಂಭವಿಸದೇ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದಾರೆ.

ಬೆಂಗಳೂರಿನ ಆರ್.ಟಿ.ನಗರ ನಿವಾಸಿ ವಿನೋದ್ (46) ಹಾಗೂ ಕಾರಿನ ಚಾಲಕ ಪ್ರಾಣಾಪಾಯದಿಂದ ಪಾರಾದವರು ಎನ್ನಲಾಗಿದೆ.

ಆರ್.ಟಿ.ನಗರ ನಿವಾಸಿ ವಿನೋದ್ ಜ್ಯುವೆಲ್ಲರಿ ಶಾಪ್ ಮಾಲೀಕರಾಗಿದ್ದು, ಚಾಮರಾಜನಗರದ ಕನಕಗಿರಿ ಮಠಕ್ಕೆ ತೆರಳಿ ಪೀಠಾಧಿಪತಿಗಳ ಆಶೀರ್ವಾದ ಪಡೆದು ನಂತರ ಬೆಂಗಳೂರಿನ ಕಡೆಗೆ ಮಹೇಂದ್ರ ಎಕ್ಸ್‌ಯು.ವಿ ಕಾರಿನಲ್ಲಿ ಪ್ರಯಾಣ ಬೆಳೆಸಿದ್ದಾರೆ. ಕಾರು ಮದ್ದೂರಿನ ಫ್ಲೈ ಓವರ್ ಇಳಿಯುತ್ತಿದ್ದಂತೆ ಕಾರಿನ ಮುಂದಿನ ಎಡಭಾಗದ ಟೈರ್ ಸ್ಫೋಟಗೊಂಡು ಸುಮಾರು 8 ರಿಂದ 9 ಭಾರಿ ಪಲ್ಟಿ ಹೊಡೆದು ಡಿವೈಡರ್‌ಗೆ ಗುದ್ದಿ ಸಂಪೂರ್ಣವಾಗಿ ಜಖಂಗೊಂಡಿದೆ. ಅಪಘಾತದ ತೀವ್ರತೆಗೆ ಕಾರಿನ ವಿವಿಧ ಭಾಗಗಳ ಹೆದ್ದಾರಿಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ತಕ್ಷಣವೇ ಹೆದ್ದಾರಿಯ ವಾಹನ ಸವಾರರು ಹಾಗೂ ಸ್ಥಳೀಯರು ಧಾವಿಸಿ ಕಾರಿನಲ್ಲಿದ್ದವರನ್ನು ಹೊರ ತೆಗೆದು ರಕ್ಷಿಸಿದ್ದು, ಯಾವುದೇ ಸಣ್ಣ ಪುಟ್ಟ ಗಾಯಗಳಾಗದೆ ಬದುಕುಳಿದಿದ್ದಾರೆ. ಸ್ಥಳಕ್ಕೆ ಮದ್ದೂರು ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜೆ.ಇ.ಮಹೇಶ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮದ್ದೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೆದ್ದಾರಿಯಲ್ಲಿ ಸಂಚರಿಸುವ ವಾಹನ ಸವಾರರು ತಪ್ಪದೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಂದು ನಡೆದಿರುವ ಭೀಕರ ಅಪಘಾತದಲ್ಲಿ ಸೀಟ್ ಬೆಲ್ಟ್ ಹಾಕಿರುವ ಪರಿಣಾಮ ಪ್ರಯಾಣಿಕರಿಗೆ ಯಾವುದೇ ರೀತಿಯ ಸಣ್ಣ ಪುಟ್ಟ ಗಾಯಗಳಾಗಿಲ್ಲ ಹಾಗಾಗಿ ಪ್ರಯಾಣಿಕರು ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಸುರಕ್ಷಿತವಾಗಿ ಪ್ರಯಾಣಿಸಿ ಎಂದು ಸಂಚಾರ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಜೆ.ಇ.ಮಹೇಶ್ ಮನವಿ ಮಾಡಿದ್ದಾರೆ.

ಚಾಮರಾಜನಗರ ನಗರಸಭೆಗೆ 1.15 ಕೋಟಿ ಉಳಿತಾಯ ಬಜೆಟ್



ಶಿಲ್ಪನಾಗ್

ಚಾಮರಾಜನಗರ: ಇಲ್ಲಿನ ನಗರಸಭೆಯ 2024–25ನೇ ಸಾಲಿನ 1.15 ಕೋಟಿ ಉಳಿತಾಯ ಬಜೆಟ್ ಅನ್ನು ನಗರ ಸಭೆ ಆಡಳಿತಾಧಿಕಾರಿಯೂ ಆದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಮಂಡಿಸಿದರು.


ನಗರದ ನಗರಸಭೆಯ ಸಭಾಂಗಣದಲ್ಲಿ ಶನಿವಾರ ನಡೆದ ಸಭೆಯಲ್ಲಿ ಅಂದಾಜು ಆಯ–ವ್ಯಯದ 22.45 ಕೋಟಿ, ಪ್ರಾರಂಭಿಕ ಶಿಲ್ಕು 36.81 ಕೋಟಿ ಜಮೆಗಳು ಸೇರಿ ಒಟ್ಟು 59.26 ಕೋಟಿ ರೂ.ಗಳು ಹಾಗೂ 58.11 ಕೋಟಿ ಖರ್ಚುಗಳೊಂದಿಗೆ ಒಟ್ಟು 1.15 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ಅಂತಿಮ ಶಿಲ್ಕು, ಉಳಿದಂತೆ 2024–25ನೇ ಸಾಲಿಗೆ 12.86 ಕೋಟಿ ರೂ.ಗಳನ್ನು ನಗರಸಭೆಯ ಸ್ವಂತ ಮೂಲಗಳಿಂದ ಕ್ರೋಢೀಕರಿಸಲು ಉದ್ದೇಶಿಸಲಾಗಿದೆ. 23.95 ಕೋಟಿ ರೂ.ಗಳ ಅನುದಾನವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನಿರೀಕ್ಷಿಸಲಾಗಿದೆ ಎಂದರು. 58.11 ಕೋಟಿ ರೂಗಳು ಬಂಡವಾಳ ಕಾಮಗಾರಿಗಳು, ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಾಗೂ ನೌಕರರ ವೇತನ, ನಿರ್ವಹಣೆ ಹಾಗೂ ಇತರೆ ವೆಚ್ಚಗಳಾಗಿದೆ. ಐಡಿಎಸ್ ಎಂಟಿ ಯೋಜನೆಯ ಮಳಿಗೆ ಬಾಡಿಗೆಯಿಂದ ಲಭ್ಯವಿರುವ 1.4ಕೋಟಿ ಮತ್ತು ನಗರಸಭಾ ಮಳಿಗೆ ಬಾಡಿಗೆಯಿಂದ ಲಭ್ಯವಿರುವ 35 ಲಕ್ಷ ಸೇರಿ ಒಟ್ಟು 1.75 ಕೋಟಿ ವೆಚ್ಚದಲ್ಲಿ ನಗರಸಭೆಯ ಕಚೇರಿ ಪಕ್ಕದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದರು.

ಚಾಮರಾಜನಗರದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ತಮ್ಮ ಬಜೆಟ್‌ನಲ್ಲಿ ಜಿಲ್ಲಾಧಿಕಾರಿಗಳು ಘೋಷಿಸಿದ್ದಾರೆ.

ಈ ಸಂದರ್ಭದಲ್ಲಿ ಪೌರಾಯುಕ್ತ ರಾಮದಾಸ್ ಸೇರಿದಂತೆ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

ರಂಗಸ್ವಾಮಿಶೆಟ್ಟಿ ನಿಧನ



ಬೇಗೂರು, ಮಾ.2– ಗ್ರಾಮದ ನಿವಾಸಿ ದಾಸ ಬಣಜಿಗ ಶೆಟ್ಟಿ ಸಮುದಾಯದ ಹಿರಿಯ ಮುಖಂಡ ರಂಗಸ್ವಾಮಿ ಶೆಟ್ಟಿ(87) ಶನಿವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೇಗೂರಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಬಸಮ್ಮ



ಬೇಗೂರು, ಮಾ.2– ಇಲ್ಲಿಗೆ ಸಮೀಪದ ನಿಟ್ರೆ ಗ್ರಾಮದ ನಿವಾಸಿ ಬಸಮ್ಮ (109) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಆರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಳ್ಳೇಗಾಲದಲ್ಲಿ ರೈತರಿಂದ ಬೃಹತ್ ಪ್ರತಿಭಟನೆ, ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ

ಸುಳ್ಳು ದೂರು ನೀಡಿದ ಸಿಬ್ಬಂದಿಗಳ ವರ್ಗಾಯಿಸುವಂತೆ ಪ್ರತಿಭಟನಾಕಾರರ ಪಟ್ಟು

ಕೊಳ್ಳೇಗಾಲ, ಮಾ.2– ಹನೂರು ಕ್ಷೇತ್ರದ ಹೂಗ್ಯಂನಲ್ಲಿ ರೈತರ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ, ಅಲ್ಲದೆ ರೈತರ ಜೊತೆ ಅಲ್ಲಿನ ಅರಣ್ಯ ಇಲಾಖೆ ಸಿಬ್ಬಂದಿ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ, ಸಿಬ್ಬಂದಿಯನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಶನಿವಾರ ಡಿಸಿಎಫ್ ಕಚೇರಿ ಮುಂಭಾಗ ರೈತರು ಪ್ರತಿಭಟನೆ ನಡೆಸಿದರು. ಹೂಗ್ಯಂ ರೈತರ ಮೇಲೆ ಸುಳ್ಳು ಜಾತಿ ನಿಂದನೆ ಪ್ರಕರಣ ದಾಖಲಿಸಿದ ಕ್ರಮದ ವಿರುದ್ಧ ರೈತರು ಆಕ್ರೋಶ ಹೊರಹಾಕಿದರು.

ರೈತ ಮುಖಂಡ ಗೌಡೇಗೌಡ ಮಾತನಾಡಿ, ಫೆ.21 ರಂದು ಹೂಗ್ಯಂ ಗ್ರಾಮದ ಜಮೀನಿಗೆ ಆನೆ ದಾಳಿ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ಸಂತ್ರಸ್ತರು ಫೋನ್ ಮೂಲಕ ಅರಣ್ಯ ಸಿಬ್ಬಂದಿಯನ್ನು ಕರೆದು ಪ್ರಶ್ನಿಸಿದ್ದಕ್ಕೆ ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರ ಮೇಲೆ ಹಲ್ಲೆ ನಡೆಸಲಾಗಿದೆ. ಇದನ್ನು ಖಂಡಿಸಿ 3 ದಿನ ಹೋರಾಟ ನಡೆಸಿದ್ದೇವೆ. ಅರಣ್ಯ ಸಿಬ್ಬಂದಿ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇವೆ.

ಆನಂತರ, ಅರಣ್ಯ ಸಿಬ್ಬಂದಿಯು ಹಲ್ಲೆ ಮತ್ತು ಜಾತಿ ನಿಂದನೆ ಆರೋಪದಡಿ ರೈತರ ಮೇಲೆ ಪೊಲೀಸರಿಗೆ ಸುಳ್ಳು ಪ್ರತಿದೂರು ನೀಡಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ರೈತರ ಪ್ರತಿಭಟನೆ ತಾರಕ್ಕೇರುತ್ತಿದ್ದಂತೆ ಎಚ್ಚೆತ್ತ ಡಿಸಿಎಫ್ ಸಂತೋಷ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ, ಮಾಜಿ ಶಾಸಕ ಆರ್.ನರೇಂದ್ರ, ರಾಜ್ಯ ಸಂಘದ ಜಿಲ್ಲಾಧ್ಯಕ್ಷ ಬಡಗಲಪುರ ನಾಗೇಂದ್ರ, ಉಪಾಧ್ಯಕ್ಷ ಮಹೇಶ್ ಪ್ರಭು ಹಾಗೂ ಇತರೆ ರೈತ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಪ್ರತ್ಯೇಕವಾಗಿ ಸಭೆ ನಡೆಸಿದರು.

ನಂತರ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸಭೆ ನಡೆಸಿದ್ದೇವೆ. ಇಂತಹ ಪ್ರಕರಣಗಳು ಮತ್ತೆ ನಡೆಯದಂತೆ ಡಿಸಿಎಫ್ ಅವರಿಗೆ ಮನವಿ ಮಾಡಿದ್ದು ಗಲಾಟೆ ಮಾಡಿದ ಅರಣ್ಯಾಧಿಕಾರಿಗಳನ್ನು ಈ ಸ್ಥಳದಿಂದ ವರ್ಗಾವಣೆ ಮಾಡಬೇಕಾಗಿ ಕೇಳಿದ್ದೇವೆ.

1 ವಾರ ಕಾಲಾವಕಾಶ ಕೇಳಿದ್ದಾರೆ. ಈ ಪ್ರಕರಣದಲ್ಲಿನ ದೂರು–ಪ್ರತಿದೂರನ್ನು ವಾಪಸ್ಸು ಪಡೆಯಲು ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಮಾಜಿ ಶಾಸಕ ನರೇಂದ್ರ ಮಾತನಾಡಿ, ಮುಂದಿನ ದಿನಗಳಲ್ಲಿ ಈ ರೀತಿ ಘಟನೆ ಮರುಕಳಿಸದಂತೆ ಮೇಲಾಧಿಕಾರಿಗಳು ಗಮನ ಹರಿಸಬೇಕು, ಸಾರ್ವಜನಿಕರ ಜೊತೆ ಸೌಜನ್ಯವಾಗಿ ನಡೆದು ಕೊಳ್ಳಬೇಕೆಂದು ಕಿರಿಯ ಅಧಿಕಾರಿಗಳಿಗೆ ಹೇಳಿ ಕೊಡಬೇಕು. ಮಹಿಳೆಯರ ಮೇಲೆ ಹಲ್ಲೆ ಮಾಡಿದ ಸಿಬ್ಬಂದಿಯನ್ನು ಈ ಸ್ಥಳದಿಂದ ವರ್ಗಾವಣೆ ಮಾಡುತ್ತೇವೆ ಎಂದು ಡಿಸಿಎಫ್ ಹೇಳಿದ್ದಾರೆ.



ಕೊಳ್ಳೇಗಾಲದ ಡಿಸಿಎಫ್ ಕಚೇರಿ ಮುಂಭಾಗ ಶನಿವಾರ ರೈತರು ಪ್ರತಿಭಟನೆ ನಡೆಸಿದರು.

ರೈತರಲ್ಲಿ ಕ್ಷಮೆ ಯಾಚಿಸಿದ ಡಿಸಿಎಫ್

ಪ್ರಾಣಿ ಮತ್ತು ವನ್ಯ ಜೀವಿ ಸಂಘರ್ಷ ತಡೆಗಟ್ಟಲು ಹೂಗ್ಯಂ ಸೇರಿದಂತೆ ಕಾಡಂಚಿನ ಗ್ರಾಮಗಳಲ್ಲಿ ರೈತರೊಂದಿಗೆ ಸಭೆ ನಡೆಸಲಾಗುತ್ತದೆ. ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಕ್ರಮ ವಹಿಸುತ್ತೇನೆ. ವಾಟ್ಸ್ ಆಪ್ ಗ್ರೂಪ್ ತೆರೆದು ಜನರು ಸಮಸ್ಯೆಗಳನ್ನು ಇಲಾಖೆಗೆ ರವಾನಿಸುವಂತೆ ಅವಕಾಶ ಮಾಡಿ ಕೊಡಲಾಗುತ್ತದೆ. ಈ ಪ್ರಕರಣದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ನೀಡಿರುವ ದೂರನ್ನು ಹಿಂಪಡೆಯುತ್ತೇವೆ. ಅವರ ಪರವಾಗಿ ನಾನು ಕ್ಷಮೆಯಾಚಿಸುತ್ತೇನೆ. ಎಲ್ಲರೂ ಸೇರಿ ಉತ್ತಮ ಕೆಲಸ ಮಾಡೋಣ, ಅರಣ್ಯ ಉಳಿವಿಗಾಗಿ ರೈತರು ಸಹಕಾರ ನೀಡಿ.

– ಸಂತೋಷ್‌ಕುಮಾರ್, ಡಿಸಿಎಫ್

ಲೋಕಾಯುಕ್ತರ ಬಲೆಗೆ ವಾಲ್ಮೀಕಿ ನಿಗಮದ ಅಧಿಕಾರಿ



ಚಾಮರಾಜನಗರ, ಮಾ.2– ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಸಲು ಅರ್ಜಿದಾರರಿಂದ ಲಂಚ ಪಡೆಯುತ್ತಿದ್ದ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ತಾಲೂಕು ಅಭಿವೃದ್ಧಿ ಅಧಿಕಾರಿ ನಾಗರಾಜು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ತಾಲೂಕಿನ ಫಲಾನುಭವಿಯೊಬ್ಬರು ಗಂಗಾ ಕಲ್ಯಾಣ ಯೋಜನೆಗೆ ಅರ್ಜಿ ಸಲ್ಲಿಸಿದ್ದರು. ಅವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಲು ಅಗತ್ಯ ದಾಖಲೆ ನೀಡಲು ನಾಗರಾಜು 10 ಸಾವಿರ ಲಂಚ ಕೇಳಿದ್ದರು. ಹೀಗಾಗಿ, ಈ ಬಗ್ಗೆ ಅರ್ಜಿದಾರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಶನಿವಾರ ನಗರದಲ್ಲಿ ನಾಗರಾಜು, ದೂರುದಾರರಿಂದ 10 ಸಾವಿರ ಹಣ ಪಡೆಯುತ್ತಿದ್ದ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ.

ನಾಗರಾಜುರನ್ನು ಬಂಧಿಸಿರುವ ಪೊಲೀಸರು 10 ಸಾವಿರ ನಗದನ್ನು ವಶಪಡಿಸಿಕೊಂಡಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಮ್ಯಾಥ್ಯೂ ಥಾಮಸ್ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಶಶಿಕುಮಾರ್ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಮೈಸೂರು ಮಿತ್ರ

ಭಾರತ ಜನತಂತ್ರದ ಸಮಕಾಲೀನ ತಲ್ಲಣಗಳು ಕುರಿತ ವಿಚಾರ ಸಂಕಿರಣ ಸಮಾರೋಪ

ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಇಂಗ್ಲೀಷ್-ಕನ್ನಡ ಸಮಾನವಾಗಿ ಕಲಿಯಲು ವ್ಯವಸ್ಥೆ ಕಲ್ಪಿಸಿ

ರಾಜ್ಯ ಸರ್ಕಾರಕ್ಕೆ ರಾಜಕೀಯ ಚಿಂತಕ ಕಾಂಚ ಐಲಯ್ಯ ಮನವಿ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಮಾ.2(ಪಿಎಂ)- ಕರ್ನಾಟಕ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಮಾಧ್ಯಮ ಪ್ರಾರಂಭಿಸಬೇಕು. ಜೊತೆಗೆ ಮಕ್ಕಳು ಇಂಗ್ಲೀಷ್ ಮತ್ತು ಕನ್ನಡ ಎರಡನ್ನೂ ಸಮಾನವಾಗಿ ಕಲಿಯಲು ವ್ಯವಸ್ಥೆ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಹೈದರಾಬಾದ್‌ನ ಬರಹಗಾರರೂ ಆದ ರಾಜಕೀಯ ಚಿಂತಕ ಕಾಂಚ ಐಲಯ್ಯ ಮನವಿ ಮಾಡಿದರು.

ಮೈಸೂರಿನ ಕಲಾಮಂದಿರದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿದ್ದ 'ಪಮಲ್ಲೇಶ್-90 ; ಭಾರತ ಜನತಂತ್ರದ ಸಮಕಾಲೀನ ತಲ್ಲಣಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಶನಿವಾರ ಅವರು ಸಮಾರೋಪ ಭಾಷಣ ಮಾಡಿದರು.

ಹಿಂದುಳಿದವರು, ದಲಿತರು ಈ ದೇಶ ಕಟ್ಟಿದವರು. ಸರ್ಕಾರಿ ಶಾಲೆಯಲ್ಲಿ ಓದುವ ಅವರ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇಂಗ್ಲೀಷ್ ಮತ್ತು ಕನ್ನಡವನ್ನು ಸಮಾನವಾಗಿ ಕಲಿಯಲು ಅವಕಾಶ ಕಲ್ಪಿಸಬೇಕು. ಮಕ್ಕಳು ಬಾಲ್ಯದಲ್ಲೇ ಕನಿಷ್ಠ ಎರಡು ಭಾಷೆ ಕಲಿಯಬೇಕು. ಇಂಗ್ಲಿಷ್ ಕಡ್ಡಾಯ ಕಲಿಕೆಯೊಂದಿಗೆ ಮಕ್ಕಳಲ್ಲಿ ವಿಜ್ಞಾನ, ವೈಚಾರಿಕತೆಯ ಬಗ್ಗೆ ಆಸಕ್ತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ ಇಂದು ಕೋಮುವಾದಿಗಳು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ದೇವಾಲಯ ಪ್ರತಿನಿಧಿಸುತ್ತದೆ ಎಂದು ಬಿಂಬಿಸುತ್ತಿದ್ದಾರೆ. ಆದರೆ ಪ್ರಜಾಪ್ರಭುತ್ವವು ದೇವಾಲಯ ಪ್ರತಿನಿಧಿಸಿದರೆ ಅದು ಆತಂಕಕಾರಿಯಾಗಲಿದೆ. ಯುರೋಪ್‌ನಲ್ಲಿ ಪ್ರಜಾಪ್ರಭುತ್ವ ಉದಯವಾದಾಗ ಅಲ್ಲಿ ಚರ್ಚ್ ಪ್ರತಿಬಿಂಬಿತವಾಗಲಿಲ್ಲ. ದಕ್ಷಿಣ ಭಾರತದ ಕರ್ನಾಟಕದಲ್ಲಿ ಮಾತ್ರ ಬಿಜೆಪಿ ಅರಳಲಿಕ್ಕೆ ಅವಕಾಶ ಕೊಟ್ಟಿದ್ದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕದ ಸಾಮಾಜಿಕ ಚಳುವಳಿಗಳು ತೆಲಂಗಾಣದ ಮೇಲೆ ವಿಶೇಷ ಪ್ರಭಾವ ಉಂಟು ಮಾಡಿವೆ. ಬಸವಣ್ಣ, ಅಕ್ಕಮಹಾದೇವಿ ಹಾಗೂ ಕನಕದಾಸರು ನಮ್ಮ ಪ್ರದೇಶದ ಮೇಲೆ ವಿಶೇಷ ಪ್ರಭಾವ ಉಂಟು ಮಾಡಿದ್ದಾರೆ. ದೇಶದ ಹಲವು ಜನಪರ ಚಳುವಳಿಗೆ ಕರ್ನಾಟಕವೇ ಸ್ಫೂರ್ತಿ ಎಂದು ನುಡಿದರು. ಡಿಫರೆಂಟ್ ಟೇಲ್ಸ್ ಪುಸ್ತಕಗಳ ಮಾಲಿಕೆಯ 'ಅವ್ವನ ಹೋರಾಟ', 'ಮತ್ತೆ ಗೆದ್ದಳಾ ತಾಟಕಿ ಹಾಗೂ ಶಾಭಾಷ್ ಬಡೆಯ್ಯಾ', 'ಕೇಳಲು ಸಿಗದ ಸ್ಕೂಲು ಕತೆಗಳು', ಮತ್ತು 'ದಿನಾಗ್ಲು ಕಾಗ್ದ ಹಾಕಜ್ಜಿ!' ಎಂಬ ನಾಲ್ಕು ಪುಸ್ತಕಗಳನ್ನು ಬಿಡುಗಡೆ ಮಾಡಿದ ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಸಬೀಹಾ ಭೂಮಿಗೌಡ ಮಾತನಾಡಿ, ಈ ನಾಲ್ಕು ಮಕ್ಕಳ ಕಥಾ ಪುಸ್ತಕಗಳು ವಿಭಿನ್ನ ಹಾಗೂ ಉತ್ತಮವಾದವು. ವಿವಿಧ ಭಾಷೆಯ ಲೇಖಕರು ಎಳೆಯ ತಲೆಮಾರಿಗೆ ಸೂಕ್ತ ವಿಚಾರಗಳನ್ನು ಯೋಚಿಸಿ ಈ ಪುಸ್ತಕಗಳಲ್ಲಿ ಲೇಖನಗಳನ್ನು ಬರೆದಿದ್ದು, ಅವುಗಳನ್ನು ಕನ್ನಡಕ್ಕೆ ಅನುವಾದಿಸಿ ಇಂದು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಪ್ರಪಂಚಕ್ಕೆ ಶಾಂತಿ, ಅಹಿಂಸೆ, ಸಹಿಷ್ಣುತೆ ಬೋಧನೆ ಮಾಡಿದ ರಾಷ್ಟ್ರ ಭಾರತ. ಅಹಿಂಸೆ ಹಾಗೂ ಅಸಹಕಾರದಿಂದ ಸ್ವಾತಂತ್ರ್ಯ ಪಡೆದ ಈ ದೇಶದ ಇಂದಿನ ಆಡಳಿತ ವ್ಯವಸ್ಥೆಯು ಎಲ್ಲರನ್ನೂ ತಲ್ಲಣಗೊಳಿಸಿದೆ. ಭಾರತದ ಮೂಲನಿವಾಸಿಗಳು ಆತಂಕದಲ್ಲಿದ್ದಾರೆ. ಪ್ರಸ್ತುತ ನಮ್ಮೆಲ್ಲರ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದೆ. ವ್ಯಕ್ತಿಪೂಜೆ ಸರ್ವಾಧಿಕಾರಕ್ಕೆ ಪ್ರೇರಣವಾಗಲಿದೆ. ಇದರಿಂದ ದೇಶ ಅವನತಿ ಕಾಣಲಿದೆ. ಅಂತಹ ಕಾಲಘಟ್ಟದಲ್ಲಿ ನಾವು ನಿಂತಿದ್ದೇವೆ. ಈ ದೇಶವು ಅನೇಕ ಹೋರಾಟ ಕಂಡು, ಜೀರ್ಣಿಸಿಕೊಂಡಿದೆ. ಹೀಗಾಗಿ ಸರ್ವಾಧಿಕಾರಕ್ಕೆ ಇಲ್ಲಿ ಉಳಿಗಾಲವಿಲ್ಲ ಎಂದು ಹೇಳಿದರು. ಶಾಸಕರೂ ಆದ ಸಮಾಜವಾದಿ ಚಿಂತಕ ಬಿ.ಆರ್.ಪಾಟೀಲ್, ಡಿಫರೆಂಟ್ ಟೇಲ್ಸ್ ಪುಸ್ತಕಗಳ ಸಂಪಾದಕಿ ಸುಕನ್ಯಾ ಕನಾರಳ್ಳಿ, ವಿಚಾರ ಸಂಕಿರಣದ ಸಂಘಟಕರಾದ ಅಭಿರುಚಿ ಗಣೇಶ್, ಉಗ್ರನರಸಿಂಹಗೌಡ, ಲೇಖಕ ನಾ.ದಿವಾಕರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳಚನ್ನಗೌಡ, ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು, ರಂಗಕರ್ಮಿ ಹೆಚ್.ಜನಾರ್ಧನ್ (ಜನ್ನಿ), ಪ.ಮಲ್ಲೇಶ್ ಪುತ್ರಿ ಸವಿತಾ ಮತ್ತಿತರರು ಹಾಜರಿದ್ದರು.

ಖಂಡನಾ ನಿರ್ಣಯ

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಬೇಕಿದ್ದ ದೆಹಲಿ ರೈತ ಹೋರಾಟ ಕುರಿತ 'ಕಿಸಾನ್ ಸತ್ಯಾಗ್ರಹ' ಸಾಕ್ಷ್ಯಚಿತ್ರಕ್ಕೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ನಿರ್ಬಂಧದ ವಿರುದ್ಧ ಖಂಡನಾ ನಿರ್ಣಯ ಕೈಗೊಳ್ಳಲಾಯಿತು. ರಾಷ್ಟ್ರದ ವಿವಿಧ ಭಾಗಗಳಿಂದ ಮೈಸೂರಿಗೆ ಆಗಮಿಸುವ ವಿಚಾರವಂತರು, ಚಿಂತಕರು, ಹೋರಾಟಗಾರರು ಇಂತಹ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸಲು ಪಣ ತೊಟ್ಟಿದ್ದಾರೆ. ಈ ಹೋರಾಟ ಇಡೀ ರಾಷ್ಟ್ರದ ಉದ್ದಗಲಕ್ಕೂ ಕೊಂಡೊಯ್ಯಬೇಕೆಂದು 'ಮೈಸೂರು ಘೋಷಣೆ' ಅಡಿ ಘೋಷಣೆ ಮಾಡಲಾಯಿತು.

ಮೂರನೇ ಪುಟದಿಂದ

ಸಿಎಂ ಸಿದ್ದರಾಮಯ್ಯ ಸೂಚನೆ

ನಡೆದ ಘಟನೆಯ ತನಿಖಾ ವಿವರವನ್ನೂ ಪೊಲೀಸರು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದಾರೆ. ವಿಧಾನಸೌಧ ಮತ್ತು ಅದರ ಸುತ್ತಮುತ್ತಲ ಸುರಕ್ಷತಾ ಹೊಣೆ ಹೊತ್ತಿರುವ ಪೊಲೀಸ್ ಅಧಿಕಾರಿಯನ್ನು ಮುಖ್ಯಮಂತ್ರಿ ಅವರು ಸಭೆಯಲ್ಲೇ ತರಾಟೆಗೆ ತೆಗೆದುಕೊಂಡಿದ್ದಾರೆ. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ಬಾಂಬ್ ಸ್ಫೋಟಗೊಂಡ ರಾಮೇಶ್ವರ ಕೆಫೆಗೆ ತೆರಳಿ ಪರಿಶೀಲನೆ ನಡೆಸಿದ್ದೇನೆ, ಸ್ಫೋಟಕ ಇಟ್ಟು ಹೋಗಿದ್ದ ಆರೋಪಿಯ ಪತ್ತೆ ಹಚ್ಚುವ ಕಾರ್ಯ ಚುರುಕಾಗಿ ನಡೆದಿದೆ ಎಂದರು. ಆರೋಪಿ ಮಾಸ್ಕ್ ಮತ್ತು ಟೋಪಿ ಧರಿಸಿ ಬಸ್ಸಿನಲ್ಲಿ ಬಂದು, ತಿಂಡಿ ತಿಂದು ನಂತರ ಸ್ಫೋಟಕವುಳ್ಳ ಬ್ಯಾಗ್ ಇಟ್ಟು ತೆರಳಿದ್ದಾನೆ. ಆದಷ್ಟು ಬೇಗ ಕೃತ್ಯ ಎಸಗಿದ ವ್ಯಕ್ತಿಯನ್ನು ಪತ್ತೆಹಚ್ಚಿ ಬಂಧಿಸಲಾಗುವುದು. ಘಟನೆಯಲ್ಲಿ ಗಾಯಗೊಂಡಿದ್ದವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ, ಬಿಜೆಪಿ ನಾಯಕರು ಸಾವು-ನೋವಿನಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಸಂಭವಿಸಿದ್ದು ಬಿಜೆಪಿ ಕಾಲದಲ್ಲಿ ಅಲ್ಲವೇ, ಆಗಲೂ ತುಷ್ಟೀಕರಣದಿಂದಾಗಿ ಸ್ಫೋಟ ನಡೆದಿತ್ತೆ ಎಂದು ತಮ್ಮನ್ನು ಪ್ರಶ್ನಿಸಿದ ಮಾಧ್ಯಮಗಳಿಗೆ ಮರು ಪ್ರಶ್ನೆ ಹಾಕಿದರು.

ಸಿಸಿಬಿ ತನಿಖೆ

ಸೂಕ್ಷ್ಮ ಪ್ರಕರಣವಾಗಿರುವುದರಿಂದ ಎಲ್ಲರೂ ಸಹಕರಿಸಬೇಕೆಂದು ಕೋರಿದ್ದಾರೆ. ವಿವಿಧ ತನಿಖಾ ತಂಡಗಳು ರಾತ್ರಿಯೆಲ್ಲಾ ತನಿಖೆ ನಡೆಸಿ ಮಾಹಿತಿ ಕಲೆ ಹಾಕಿದ್ದು, ಸ್ಥಳದಲ್ಲಿ ಬಾಂಬ್ ಸ್ಯಾಂಪಲ್‌ಗಳನ್ನು ಸಂಗ್ರಹ ಮಾಡಲಾಗಿದೆ. ಸದ್ಯ ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಘಟನೆಯಲ್ಲಿ ಗಾಯಗೊಂಡ 9 ಜನರಿಗೂ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನು ಘಟನೆಗೆ ಸಂಬಂಧಿಸಿದಂತೆ ಶಂಕಿತರನ್ನು ವಶಕ್ಕೆ ಮಾತ್ರ ಪಡೆಯಲಾಗಿದೆ, ಯಾರನ್ನೂ ಇದುವರೆಗೆ ಬಂಧಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಆರೋಪಿಯ ಚಹರೆ, ಚಲನವಲನಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ತಲೆ ಮೇಲೆ ಟೊಪ್ಪಿ, ಗಡ್ಡದಾರಿಯಾಗಿರುವ ಶಂಕಿತ ವ್ಯಕ್ತಿ ಬಾಂಬ್ ಸ್ಫೋಟಿಸಿರುವ ಎಂಬ ಶಂಕೆ ವ್ಯಕ್ತವಾಗಿದೆ. ಶಂಕಿತ ವ್ಯಕ್ತಿ ಬಸ್ಸೊಂದರಲ್ಲಿ ಬಂದು ಕೆಫೆಗೆ ಹತ್ತಿರದ ಬಸ್ ಸ್ಟಾಪ್‌ನಲ್ಲಿ ಇಳಿದು ಹೋಟೆಲ್‌ಗೆ ಹೋಗಿದ್ದಾನೆ. ಕೈಯಲ್ಲಿ ಒಂದು ಬ್ಯಾಗ್ ಹಿಡಿದು ಕೆಫೆಯೊಳಗೆ ಹೋದವನು ಅಲ್ಲಿದ್ದ ಮರವೊಂದರ ಬಳಿ ಕೂತು ಇಡ್ಲಿ ತಿಂದಿದ್ದಾನೆ. ಗಡ್ಡಧಾರಿಯಾಗಿರುವ ಶಂಕಿತ ಮುಖಕ್ಕೆ ಮಾಸ್ಕ್ ಧರಿಸಿದ್ದಾನೆ ಮತ್ತು ತಲೆ ಮೇಲೆ ಟೋಪಿ ಇಟ್ಟುಕೊಂಡಿದ್ದಾನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಪ್ರಮುಖ ಸ್ಥಳಗಳಲ್ಲಿ ಕಟ್ಟೆಚ್ಚರ: ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಬೆನ್ನಲ್ಲೇ ಅಲರ್ಟ್ ಆಗಿರುವ ಪೊಲೀಸರು ರಾಜ್ಯ ವಿವಿಧ ಕಡೆಗಳಲ್ಲಿ ಕಟ್ಟೆಚ್ಚರ ವಹಿಸಿದ್ದಾರೆ. ಬೆಂಗಳೂರು ನಗರದ ಬಸ್ಸು ಮತ್ತು ರೈಲು ನಿಲ್ದಾಣಗಳಲ್ಲಿ ಪೊಲೀಸ್ ಬಿಗಿ ಭದ್ರತೆ ಒದಗಿಸಲಾಗಿದೆ. ಅಷ್ಟೇ ಅಲ್ಲದೆ, ರಾಜ್ಯದ ಎಲ್ಲಾ ಬಸ್ಸು ಮತ್ತು ರೈಲು ನಿಲ್ದಾಣಗಳಲ್ಲೂ ನಿಗಾ ಇಡಲು ಸೂಚನೆ ನೀಡಲಾಗಿದೆ. ರೈಲು ನಿಲ್ದಾಣಗಳಲ್ಲಿ ಭದ್ರತೆಗೆ ಹೆಚ್ಚುವರಿ ಪೊಲೀಸರ ನಿಯೋಜನೆ ಮಾಡಲಾಗಿದೆ.

ರೈಲು ನಿಲ್ದಾಣಗಳಲ್ಲಿ ಅನುಮಾನಾಸ್ಪದ ವಸ್ತುಗಳು ಕಂಡುಬಂದರೆ ಅಗತ್ಯ ಕ್ರಮಕ್ಕೆ ಸೂಚನೆ ನೀಡಲಾಗಿದೆ. ಈ ಮಧ್ಯೆ, ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ರೈಲ್ವೆ ನಿಲ್ದಾಣಗಳಲ್ಲಿ ಎಂದಿನಂತೆ ಪ್ರಯಾಣಿಕರ ಸಂಚಾರ ಮುಂದುವರಿದಿದೆ.

ಕಾಂಗ್ರೆಸ್ ಗ್ಯಾರಂಟಿಗಳಿಂದ ಬೆಲೆ ಏರಿಕೆ ಬಿಸಿ ತಟ್ಟಿಲ್ಲ

ಎಐಸಿಸಿ ರಾಷ್ಟ್ರೀಯ ವಕ್ತಾರ ಡಾ.ಅನ್ಸುಲ್ ಅವಿಜಿತ್ ಅಭಿಪ್ರಾಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಐಸಿಸಿ ರಾಷ್ಟ್ರೀಯ ವಕ್ತಾರ ಡಾ.ಅನ್ಸುಲ್ ಅವಿಜಿತ್ ಮಾತನಾಡಿದರು

ಮೈಸೂರು, ಮಾ.2(ಜಿಎ)-ರಾಜ್ಯದಲ್ಲಿ ನಾವು ಘೋಷಿಸಿರುವ ಐದು ಗ್ಯಾರಂಟಿಗಳಿಂದ ಜನರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿಲ್ಲ. ಪ್ರಧಾನಿ ನರೇಂದ್ರ ಮೋದಿಯೂ ನಮ್ಮ ಗ್ಯಾರಂಟಿ ಪದ ಬಳಸುತ್ತಿದ್ದಾರೆ ಎಂದು ಎಐಸಿಸಿ ರಾಷ್ಟ್ರೀಯ ವಕ್ತಾರ ಡಾ.ಅನ್ಸುಲ್ ಅವಿಜಿತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿದ ಭರವಸೆಯಂತೆ ಎಲ್ಲಾ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಇದರಿಂದಾಗಿ ಬೆಲೆಯೇರಿಕೆ ಬಿಸಿ ಜನತೆಗೆ ತಟ್ಟಿಲ್ಲ. ಯುವನಿಧಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ಯುವ ನಿರುದ್ಯೋಗಿಗಳಿಗೆ ಅನುಕೂಲವಾಗಿದೆ ಎಂದರು.

ಕಳೆದ ವಿಧಾನಸಭಾ ಚುನಾವಣೆ ವೇಳೆ 40 ಪರ್ಸೆಂಟ್ ಸರ್ಕಾರದ ವಿರುದ್ಧ ಕಾಂಗ್ರೆಸ್ ಮತ ಕೇಳಿತ್ತು. ಹೀಗಾಗಿ ಜನತೆ ಆಗಿನ ಬಿಜೆಪಿ ರಾಜ್ಯ ಸರ್ಕಾರವನ್ನು ಕಿತ್ತೊಗೆದರು. ಈಗ ಲೋಕಸಭಾ ಚುನಾವಣೆ ಬಂದಿದ್ದು, ಜನತೆ ಸಾಮಾಜಿಕ ನ್ಯಾಯದ ಪರವಾಗಿ ಇರುವ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂದು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ಲೋಕಸಭಾ ಚುನಾವಣೆ ವೇಳೆ ನಾವು ಸಾಮಾಜಿಕ ನ್ಯಾಯದ ವಿಷಯ ಎತ್ತಿಕೊಂಡು ಬಂದಿದ್ದರೆ, ಬಿಜೆಪಿ ಎಂದಿನಂತೆ ರಾಮಮಂದಿರದಂತಹ ಭಾವನಾತ್ಮಕ ವಿಷಯ ತೆಗೆದುಕೊಳ್ಳುತ್ತದೆ. ನಿರುದ್ಯೋಗ, ಬಡತನ, ಬೆಲೆಯೇರಿಕೆ ಮೊದಲಾದ ನೈಜ ವಿಷಯಗಳಿಂದ ಜನರ ಗಮನ ಬೇರೆಡೆ ಸೆಳೆದು ಮತ ಯಾಚಿಸಲಿದೆ. ನೀತಿ ಆಯೋಗ ಬಡತನ ಶೇ. ಐದಕ್ಕಿಂತ ಕೆಳಗೆ ಇಳಿದಿದೆ ಎಂದು ಹೇಳಿರುವುದು ಸತ್ಯವಲ್ಲ. ವಾಸ್ತವವಾಗಿ ಬಡತನ ಹಾಗೂ ನಿರುದ್ಯೋಗ ಮೊದಲಿಗಿಂತ ಹೆಚ್ಚಾಗಿವೆ ಎಂದು ಆರೋಪಿಸಿದರು.

ಕೇಂದ್ರದ ಖಜಾನೆಯಲ್ಲಿರುವ ಬಡಜನರ ಹಣ ನೈಜ ಫಲಾನುಭವಿಗಳನ್ನು ತಲುಪುತ್ತಿಲ್ಲ. ಅದು ಉದ್ಯಮಿಗಳ ಪಾಲಾಗುತ್ತಿದೆ. ಹೀಗಾಗಿ ಅದು ಅರ್ಹರನ್ನು ತಲುಪಬೇಕೆಂದು ಕಾಂಗ್ರೆಸ್ ಹೋರಾಡುತ್ತಿದೆ. ಈ ಬಾರಿಯ ಭಾರತ್ ಜೋಡೋ ನ್ಯಾಯ ಯಾತ್ರೆ ಸಹ ಇದೇ ಉದ್ದೇಶ ಹೊಂದಿದೆ. ಇದಲ್ಲದೆ, ಸಿಎಂ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಇದೇ ಕಾರಣಕ್ಕಾಗಿ ಹೋರಾಟ ಮಾಡಿದರು ಎಂದರು.

ಡಾ. ಸ್ವಾಮಿನಾಥನ್ ವರದಿ ಜಾರಿಗೊಳಿಸುವುದಾಗಿ ಬಿಜೆಪಿ ನೀಡಿದ್ದ ಭರವಸೆ ಹುಸಿಯಾಗಿದೆ. ಹೀಗಾಗಿ ರೈತರ ಆತ್ಮಹತ್ಯೆ ಹೆಚ್ಚಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ವರದಿ ಜಾರಿಗೊಳಿಸುತ್ತದೆ. ಚುನಾವಣೆಗಳಲ್ಲಿ ಇವಿಎಂ ಬಳಕೆ ಸಂಶಯಾಸ್ಪದವಾಗಿರುವ ಕಾರಣ ಕಾಂಗ್ರೆಸ್ ಅದನ್ನು ವಿರೋಧಿಸುತ್ತದೆ. ಇದೇ ವೇಳೆ ಜಾತಿ ಗಣತಿ ವರದಿ ಬಗ್ಗೆ ಪಕ್ಷದಲ್ಲಿ ಅಸಮಾಧಾನವಿದ್ದರೂ ಸಾಮಾಜಿಕ ನ್ಯಾಯ ಕಾರಣ ಪಕ್ಷದ ವರಿಷ್ಠರು ಸಮಸ್ಯೆ ಬಗೆಹರಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮರಯ್ಯ, ಬಸವಣ್ಣ ಎಂ.ಶಿವಪ್ರಸಾದ್ ಉಪಸ್ಥಿತರಿದ್ದರು.

ಮೈಸೂರು ವಿವಿ ಸಿಂಡಿಕೇಟ್ ನೂತನ ಸದಸ್ಯರಿಗೆ ಅಭಿನಂದನೆ



ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆಯ ವತಿಯಿಂದ ವಿವಿ ನೂತನ ಸಿಂಡಿಕೇಟ್ ಸದಸ್ಯರನ್ನು ಶನಿವಾರ ಅಭಿನಂದಿಸಲಾಯಿತು.

ಮೈಸೂರು, ಮಾ.2(ಜಿಎ)-ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆಯ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿ ನೂತನ ಸಿಂಡಿಕೇಟ್ ಸದಸ್ಯರನ್ನು ಅಭಿನಂದಿಸಲಾಯಿತು.

ಈ ವೇಳೆ ಪ್ರಾಚ್ಯವಸ್ತು ಸಂಗ್ರಹಾಲಯದ ನಿವೃತ್ತ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ ಮಾತನಾಡಿ, ಎಲ್ಲಾ ಸದಸ್ಯರು ಬದ್ಧತೆ, ಕಾಳಜಿಯಿಂದ ಕೆಲಸ ಮಾಡಿದರೆ ಮೈಸೂರು ವಿವಿ ಹೆಸರನ್ನು ಮತ್ತಷ್ಟು ಹೆಚ್ಚಿಸಬಹುದಾಗಿದ್ದು, ಅದರಿಂದ ವಿವಿಯ ಗೌರವ, ಘನತೆ ಹೆಚ್ಚುವಂತೆ ಕೆಲಸ ಮಾಡಿ ಸಲಹೆ ನೀಡಿದರು.

ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್. ಚಂದ್ರಶೇಖರ್ ಮಾತನಾಡಿ, ಎಲ್ಲಾ ಅರ್ಹತೆ ಇರುವ ಮೈಸೂರು ವಿವಿಗೆ ಕೇಂದ್ರೀಯ ವಿವಿ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿ, ನಾವೆಲ್ಲರೂ ಜವಾಬ್ದಾರಿಯಿಂದ ಕೆಲಸ ಮಾಡಿ, ವಿದ್ಯಾರ್ಥಿಗಳ, ಅಧ್ಯಾಪಕರು, ಅಧ್ಯಾಪಕೇತರರ ಹಿತ ಸಂರಕ್ಷಿಸುತ್ತೇವೆ ಎಂದರು.

ಕೆ.ಗೋಕುಲ್ ಗೋವರ್ಧನ್ ಮಾತನಾಡಿ, ನಾವೆಲ್ಲಾ ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದವರು. ಉನ್ನತ ಶಿಕ್ಷಣ ಕ್ಷೇತ್ರದ ಹಿತರಕ್ಷಣೆ ಮಾಡುತ್ತೇವೆ ಎಂದರು.

ಡಾ.ಜೆ. ಶಿಲ್ಪಾ ಮಾತನಾಡಿ, ಪ್ರತಿಯೊಬ್ಬರೂ ಕುವೆಂಪು ಅವರ ಅನಿಕೇತನ ಗೀತೆ ಅರ್ಥ ಮಾಡಿಕೊಂಡು ಅದರಂತೆ ಮುಂದುವರೆದರೆ ಸಾಕು. ವಿದ್ಯಾರ್ಥಿಗಳು ಮೊಬೈಲ್, ರೀಲ್ಸ್, ಸೆಲ್ಫಿ ಬಿಟ್ಟು ಪುಸ್ತಕಗಳನ್ನು ಹಿಡಿದು ಓದುವ ಕಡೆ ಗಮನ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಡಾ.ಟಿ.ಆರ್. ಚಂದ್ರಶೇಖರ್, ಕೆ. ಗೋಕುಲ್ ಗೋವರ್ಧನ್, ಪ್ರೊ.ಟಿ.ಆರ್. ಮಾರುತಿ, ಮಹದೇಶ್, ಸಿ. ನಾಗರಾಜು, ಡಾ.ಜೆ. ಶಿಲ್ಪಾ, ಡಾ.ಬಸವರಾಜು ಸಿ. ಜಟ್ಟಿಹುಂಡಿ, ನಟರಾಜ್ ಶಿವಣ್ಣ ಅವರನ್ನು ಅಭಿನಂದಿಸಲಾಯಿತು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಗ್ರೀನ್ ಡಾಟ್ ಟ್ರಸ್ಟಿನ ಕಾರ್ಯದರ್ಶಿ ಸಿ.ಕೆ. ಕಾಂತರಾಜ್, ಮಾನಸ ಗಂಗೋತ್ರಿ ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಎಚ್.ಪಿ. ಜ್ಯೋತಿ, ವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊಎಸ್. ಮಹದೇವಮೂರ್ತಿ, ಎನ್‌ಎಸ್‌ಎಸ್ ಅಧಿಕಾರಿ ಡಾ.ದಿವಾಕರ್ ಚಾಂಡಿ, ಎನ್‌ಸಿಸಿ ಅಧಿಕಾರಿ ಡಾ.ಗಿರೀಶ್ ಕುಮಾರ್, ವೇದಿಕೆಯ ಅಧ್ಯಕ್ಷ ಆರ್. ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ಎಸ್. ವಿನೋದ್, ಖಜಾಂಚಿ ಕೆ. ಗಣೇಶ್, ನಿರ್ದೇಶಕರಾದ ಯೋಗೇಶ್, ಡಾ.ಎಚ್. ನವೀನಕುಮಾರ್, ಚಿದಾನಂದ, ಮಂಜುನಾಥ್, ಮಂಜುನಾಥ್ ಕೆ. ಗೌಡ, ಆರ್.ಹರೀಶ್, ಎಸ್. ರಿಷಿ ರಾಜ್, ಸುರೇಶ್, ಪ್ರದೀಪ್, ರೋಹಿತ್, ಶ್ರೇಯಸ್, ರವಿ, ಯೋಗೇಶ್, ಜಗದೀಶ್ ಉಪಸ್ಥಿತರಿದ್ದರು.

ಅಜಿಯೋದಿಂದ ಆಲ್ ಸ್ಟಾರ್ಸ್ ಸೇಲ್ ಆರಂಭ

ಮೈಸೂರು, ಮಾ.2-ಭಾರತದ ಪ್ರೀಮಿಯರ್ ಫ್ಯಾಷನ್ ರಿಟೇಲರ್ ಅಜಿಯೋ ತನ್ನ ಫ್ಲಾಗ್‌ಶಿಪ್ ಸೇಲ್ ಆಲ್ ಸ್ಟಾರ್ಸ್ ಸೇಲ್ ಘೋಷಣೆ ಮಾಡಿದ್ದು, ಇದು ಅಡಿಡಾಸ್‌ನ ಪ್ರಾಯೋಜಿತವಾಗಿದೆ ಮತ್ತು ಸೂಪರ್ ಡ್ರೈಯಿಂದ ಸಹ ಪ್ರಾಯೋಜನೆ ಹೊಂದಿದೆ. ಈ ಸೇಲ್ ಮಾರ್ಚ್ 1 ರಿಂದ ಆರಂಭವಾಗಿದೆ ಅಜಿಯೋ ಆಲ್ ಸ್ಟಾರ್ಸ್ ಸೇಲ್ (ಎಎಎಸ್‌ಎಸ್) ಸಮಯದಲ್ಲಿ ಗ್ರಾಹಕರು 6000ಕ್ಕೂ ಹೆಚ್ಚು ಬ್ರ್ಯಾಂಡ್‌ಗಳಿಂದ ಶಾಪಿಂಗ್ ಮಾಡಬಹುದು.

ಈ ಸೇಲ್ ಗ್ರಾಹಕರು ಪ್ರಮುಖ ಬ್ರ್ಯಾಂಡ್‌ಗಳು ಮತ್ತು ವಿಭಾಗಗಳಲ್ಲಿ 50-90%ವರೆಗೆ ರಿಯಾಯಿತಿ ಪಡೆಯಬಹುದು. ಅಲ್ಲದೆ, ಐಸಿಐಸಿಐ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳನ್ನು ಬಳಸಿ 10%ವರೆಗೆ ಹೆಚ್ಚುವರಿ ಇನ್‌ಸ್ಟಂಟ್ ರಿಯಾಯಿತಿಯನ್ನು ಕೂಡ ಪಡೆಯಬಹುದು. ಅಡಿಡಾಸ್, ಸೂಪರ್ ಡ್ರೈ, ನೈಕೀ, ಪುಮಾ, ಗ್ಯಾಪ್, ಅಸಿಕ್ಸ್, ಯುಎಸ್‌ಪಿಎ, ನ್ಯೂ ಬ್ಯಾಲೆನ್ಸ್, ಅಂಡರ್ ಅರ್ಮರ್, ಸ್ಟೀವ್ ಮ್ಯಾಡೆನ್, ಟಾಮಿ ಹಿಲ್ಫಿಗರ್, ಡೀಸೆಲ್, ಕಾಲ್ವಿನ್ ಕ್ಲೇನ್, ಮೈಕೆಲ್ ಕೋರ್ಸ್, ಬಾಸ್, ಲಿವೈಸ್, ಮಾರ್ಕ್ಸ್ ಅಂಡ್ ಸ್ಪೆನ್ಸರ್, ಅರ್ಮಾನಿ ಎಕ್ಸ್‌ಚೇಂಜ್, ರಿತು ಕುಮಾರ್, ಮುಜಿ, ಸ್ಯಾಮ್, ಬುಡಾ ಜೀನ್ಸ್ ಕಂ. ಫೈರ್ ರೋಸ್, ಪೋರ್ಟಿಕೋ, ಕ್ಯಾಸಿಯೋ, ಲ್ಯಾಕ್ಮೆ, ಮೇಬಿಲೈನ್ ಇತ್ಯಾದಿ ಬ್ರ್ಯಾಂಡ್‌ಗಳಲ್ಲಿ ಆಕರ್ಷಕ ಡೀಲ್‌ಗಳಿವೆ.

500 ಹೊಸ ಬ್ರ್ಯಾಂಡ್‌ಗಳನ್ನು ಸೇರಿಸಿರುವುದರಿಂದ ಎಎಎಸ್‌ಎಸ್‌ನಲ್ಲಿ ಭಾರತದ 19 ಸಾವಿರ ಪಿನ್‌ಕೋಡ್‌ಗಳಾದ್ಯಂತ ಗ್ರಾಹಕರು ಶಾಪಿಂಗ್ ಮಾಡಬಹುದು ಮತ್ತು ಅಂತಾರಾಷ್ಟ್ರೀಯ ಬ್ರ್ಯಾಂಡ್‌ಗಳ ಎಕ್ಸ್‌ಕ್ಲೂಸಿವ್ ಸೆಲೆಕ್ಷನ್, ಸ್ವಂತ ಲೇಬಲ್‌ಗಳು ಮತ್ತು ದೇಶೀಯ ಬ್ರ್ಯಾಂಡ್‌ಗಳ ಅಪಾರ ಸೆಲೆಕ್ಷನ್ ಲಭ್ಯವಿದೆ. ಫ್ಯಾಷನ್, ಲೈಫ್ ಸ್ಟೈಲ್, ಮನೆ ಮತ್ತು ಅಲಂಕಾರ, ಆಭರಣ, ಬ್ಯೂಟಿ ಮತ್ತು ವೈಯಕ್ತಿಕ ಪ್ರಸಾದನದಂತಹ ವಿವಿಧ ವಿಭಾಗಗಳಲ್ಲಿ ಉತ್ತಮ ಡೀಲ್‌ಗಳು ಮತ್ತು ಆಫರ್‌ಗಳು ಇವೆ.

ಕ್ರಿಕೆಟ್ ಸೀಸನ್ ಸಮೀಪಿಸಿರುವುದರಿಂದ ಅಭಿಯಾನ ಬಿಡುಗಡೆ ಫಿಲಂನಲ್ಲಿ ಶ್ರದ್ಧಾ ಕಪೂರ್ ಮರಳಿ ಬಂದಿದ್ದು, ಅಜಿಯೋ ಆಲ್ ಸ್ಟಾರ್ಸ್ ಟೀಮ್‌ನಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಪ್ರೇಕ್ಷಕರ ಗಮನ ಸೆಳೆಯುವ ವಿಶಿಷ್ಟ ಸ್ಟೈಲ್‌ನಲ್ಲಿ ಕಾಣಿಸಿಕೊಂಡಿರುವ ಅವರ ಈ ಸೇಲ್ ಫಿಲ್ಮ್, ಕ್ರಿಕೆಟ್ ಸೀಸನ್‌ನ ಹುಚ್ಚನ್ನೂ ಪ್ರತಿಬಿಂಬಿಸುತ್ತದೆ ಮತ್ತು ಅಜಿಯೋ ಅನ್ನು ಆದ್ಯತೆಯ ಶಾಪಿಂಗ್ ಡೆಸ್ಟಿನೇಶನ್ ಆಗಿಸುತ್ತದೆ. ಅಲ್ಲದೆ, ವಿಶ್ವದ ಅತೀ ದೊಡ್ಡ ಬ್ರ್ಯಾಂಡ್‌ಗಳು ಇಲ್ಲಿ ಆಡುತ್ತವೆ ಎಂಬ ಟ್ಯಾಗ್‌ಲೈನ್ ಅನ್ನೂ ಇದು ಹೊಂದಿದೆ. 360 ಡಿಗ್ರಿ ಅಭಿಯಾನವು ಟಿವಿ, ಒಟಿಟಿಗಳು, ಸಾಮಾಜಿಕ, ಡಿಜಿಟಲ್ ಮತ್ತು ಪ್ರಿಂಟ್‌ನಲ್ಲೂ ನಡೆಯುತ್ತಿದೆ.

ಲಲಿತ ಕಲೆಗಳ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

ಮೈಸೂರು, ಮಾ.2(ಜಿಎ)- ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನ ಸಂಗೀತ ವಿಭಾಗದಿಂದ ಕಾಲೇಜಿನ ಆವರಣದಲ್ಲಿ ವಿಶೇಷ ಉಪನ್ಯಾಸ ಮತ್ತು ಪ್ರದರ್ಶನವನ್ನು ಶನಿವಾರ ಏರ್ಪಡಿಸಲಾಗಿತ್ತು.



ಕಾರ್ಯಕ್ರಮದಲ್ಲಿ ಫ್ರಾನ್ಸ್‌ನ ಖ್ಯಾತ ಸಂಗೀತಗಾರ ಲೂಗಿ ಕೋರ್ಡಾ ಮತ್ತು ಕ್ರಿಸ್ ಟಲ್ ಡಾರ್ಕ್ ಅವರು ಭಾರತೀಯ ಸಂಗೀತ ಮತ್ತು ಪಾಶ್ಚಿಮಾತ್ಯ ಫ್ರಾನ್ಸ್‌ನ ಸಂಗೀತಗಳ ಬಗ್ಗೆ ಕೀಬೋರ್ಡ್ ಮತ್ತು ಗಿಟಾರ್ ಬಳಸಿಕೊಂಡು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು.

ಡಬಲ್ ಬೇಸ್ ವಾದಕರಾಗಿರುವ ಲೂಗಿ ಕೋರ್ಡಾ ಅವರು ಡ್ರಮ್ಸ್, ಬೇಸ್ ಗಿಟಾರ್, ಜಾರ್ಝ್ ಪಿಯಾನೋ ಪಕ್ಕವಾದ್ಯದಂತಹ ಇತರ ವಾದ್ಯಗಳಲ್ಲಿ ಪಾಂಡಿತ್ಯ ಹೊಂದಿರುವ ಅವರು ಕೀಬೋರ್ಡ್ ಮೂಲಕ ಪ್ರದರ್ಶನ ನೀಡಿ, ವಿದ್ಯಾರ್ಥಿಗಳು ಅದನ್ನು ನುಡಿಸುವಂತೆ ಮಾಡಿದರು. ಫ್ರೆಂಚ್ ಗಾಯಕ, ಗಿಟಾರ್ ವಾದಕ ಮತ್ತು ಗೀತರಚನೆಕಾರರಾದ ಕ್ರಿಸ್ ಟಲ್‌ಡಾರ್ಕ್ ಅವರು ಗಿಟಾರ್ ಬಳಸಿಕೊಂಡು ಫ್ರೆಂಚ್ ಹಾಡುಗಳನ್ನು ಹಾಡಿ ಫ್ರೆಂಚ್‌ನಲ್ಲಿರುವ ರಾಗಗಳು ಮತ್ತು ಭಾರತದ ಕರ್ನಾಟಿಕ್ ಸಂಗೀತದ ನಡುವಿನ ವ್ಯತ್ಯಾಸಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಗಾಯಕ ಮೈಸೂರು ಮಂಜುನಾಥ್ ಪ್ರಾಂಶುಪಾಲೆ ಅನಿತಾ ವಿಮ್ಲಾ ಬ್ರಾಗ್ಸ್ ಉಪಸ್ಥಿತರಿದ್ದರು.

ಮಹಿಳೆಯರ ಹಕ್ಕು ರಕ್ಷಣೆಗೆ ಆದ್ಯತೆ ನೀಡಿ

ಅಧಿಕಾರಿಗಳಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಸೂಚನೆ

ಮೈಸೂರು,ಮಾ.2(ಎಂಟಿವೈ)- ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕೇಳಿ ಬಂದರೆ ತತ್‌ಕ್ಷಣವೇ ಸ್ಪಂದಿಸಿ, ಇಲಾಖೆ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಸೂಚಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಡಾ.ನಾಗಲಕ್ಷ್ಮೀ, ಬೆಂಬಲಿಗರೊಂದಿಗೆ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆದರು.

ಬಳಿಕ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಅನೌಪಚಾರಿಕ ಸಭೆ ನಡೆಸಿದ ಅವರು, ಈ ವೇಳೆ ಮಹಿಳಾ ಮತ್ತು ಕಲ್ಯಾಣ ಇಲಾಖೆಯ ಕಾರ್ಯವೈಖರಿ, ಮಹಿಳೆಯರಿಗೆ ಸರ್ಕಾರದ ವತಿಯಿಂದ ನೀಡುತ್ತಿರುವ ಸೌಲಭ್ಯ, ಮಕ್ಕಳ ರಕ್ಷಣೆಗೆ ಕೈಗೊಂಡಿರುವ ಕ್ರಮ, ಹಿರಿಯ ನಾಗರೀಕರ ಸಬಲೀಕರಣಕ್ಕಾಗಿ ಕೈಗೊಂಡಿರುವ ಕ್ರಮ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ವೇಳೆ ಡಾ.ನಾಗಲಕ್ಷ್ಮೀ ಚೌಧರಿ ಮಾತನಾಡಿ, ಮಹಿಳೆಯರ ಹಕ್ಕು ಸಂರಕ್ಷಣೆಗೆ ಆದ್ಯತೆ ನೀಡಬೇಕು. ದೌರ್ಜನ್ಯದ ಬಗ್ಗೆ ದೂರು ಕೇಳಿ ಬಂದರೆ ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು. ತಕ್ಷಣವೇ ಸ್ಪಂಧಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು. ಮಕ್ಕಳ ರಕ್ಷಣೆಗೆ ಒತ್ತು ನೀಡಬೇಕು. ಇಲಾಖೆ ವತಿಯಿಂದ ಜಾರಿಗೆ ತಂದಿರುವ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಫಲಾನುಭವಿಗಳಿಗೆ ಸವಲತ್ತು ಸಿಗುವಂತೆ ನೋಡಿಕೊಳ್ಳುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಹೆಚ್.ಆರ್.ಸುರೇಶ್, ನಿರೂಪಣಾಧಿಕಾರಿ ಮಂಜುನಾಥ್, ಮಕ್ಕಳ ರಕ್ಷಣಾಧಿಕಾರಿ ಯೋಗೇಶ್, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಅಧಿಕಾರಿ ಜಿ.ಮೋಹನ್, ಸಿಡಿಪಿಓಗಳಾದ ತಿಬ್ಬಯ್ಯ, ಮಧುಸೂದನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ತಾಕತ್ ಇದ್ದರೆ ಜಾತಿ ಗಣತಿ ವರದಿಗೆ ಸಂಪುಟದಲ್ಲಿ ಅನುಮೋದನೆ ಪಡೆಯಲಿ

ಸಿಎಂ ಸಿದ್ದರಾಮಯ್ಯಗೆ ಈಶ್ವರಪ್ಪ ಸವಾಲು

ಮೈಸೂರು,ಮಾ.2(ಎಂಟಿವೈ)- ಸೌಹಾರ್ದತೆ ಕದಡುವ ಜಾತಿ ಜನಗಣತಿ ವರದಿ ಅವೈಜ್ಞಾನಿಕವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಾಕತ್ ಇದ್ದರೆ ಜಾತಿಗಣತಿ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಇಟ್ಟು ಅನುಮೋದನೆ ಪಡೆಯಲಿ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸವಾಲು ಹಾಕಿದ್ದಾರೆ.



ಮೈಸೂರಿನಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿಯ ವರದಿ ಅವೈಜ್ಞಾನಿಕವಾಗಿದೆ. ಜಾತಿ-ಜಾತಿಗಳ ನಡುವೆ ವಿಷ ಬೀಜ ಬಿತ್ತುವ ಹುನ್ನಾರ ನಡೆಯುತ್ತಿದೆ. ಸ್ವೀಕರಿಸಿರುವ ವರದಿಯನ್ನು ವಿಧಾನಸೌಧದಲ್ಲಿ ಚರ್ಚೆಗೆ ಇಟ್ಟರೆ ಕಾಂಗ್ರೆಸ್‌ನವರೇ ಪರಸ್ಪರ ಹೊಡೆದಾಡಿಕೊಳ್ಳುತ್ತಾರೆ. ಜಾತಿ ಜಾತಿಗಳ ನಡುವೆ ಸೌಹಾರ್ದತೆ ಮೂಡಿಸುವ ಬದಲಿಗೆ ವರದಿಯನ್ನು ಮುಂದಿಟ್ಟುಕೊಂಡು ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.


ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಾಯಿಗೆ ಬಂದಂತೆ ಹೇಳಿಕೆ ಕೊಡುತ್ತಿದ್ದಾರೆ. ಮೊದಲು ಅವರ ಬಾಯಿಗೆ ಬೀಗ ಹಾಕಬೇಕು. ಅವರು ಭಯೋತ್ಪಾದಕರ ಪರವಾಗಿದ್ದಾರೆ ಎನ್ನುವುದು ನಮಗೆ ತಿಳಿದಿದೆ. ಅವರ ಮೇಲೆ ನಮಗೆ ಯಾವ ನಂಬಿಕೆಗಳು ಉಳಿದಿಲ್ಲ ಎಂದರು.

ಬಾಂಬ್ ಸ್ಫೋಟ ಮತ್ತು ಪಾಕಿಸ್ತಾನದ ಪರ ಘೋಷಣೆ ವಿಚಾರದಲ್ಲಿ ಕಾಂಗ್ರೆಸ್ ನಾಯಕರ ವರ್ತನೆ ನೋಡಿದರೆ ನಾಚಿಕೆಯಾಗುತ್ತದೆ. ಇದು ಭಯೋತ್ಪಾದಕರ ಕೃತ್ಯ ಅಲ್ಲದೆ ಮತ್ತೇನು? ಹೋಟೆಲ್‌ನಲ್ಲಿ ಯಾರೋ ಮಕ್ಕಳು ಪಟಾಕಿ ಹೊಡೆದಿದ್ದಾರಾ? ಬಲೂನು ಹೊಡೆದಿದ್ದಾರಾ? ಅಲ್ಲಿ ಆಗಿರುವುದು ಬಾಂಬ್ ಸ್ಫೋಟ. ಇದು ಭಯೋತ್ಪಾಕರ ಕೃತ್ಯವಾಗಿದೆ. ಬೆಂಗಳೂರಿನಲ್ಲಿ ನಡೆದಿರುವ ಬಾಂಬ್ ಸ್ಫೋಟ ಪ್ರಕರಣದಲ್ಲಿ ಗುಪ್ತಚರ ಇಲಾಖೆಯ ವೈಫಲ್ಯ ಎದ್ದು ಕಾಣಿಸುತ್ತದೆ. ಈ ವೈಫಲ್ಯವನ್ನು ಮುಖ್ಯಮಂತ್ರಿ ಮತ್ತು ಗೃಹಸಚಿವರು ಒಪ್ಪಿಕೊಳ್ಳಬೇಕು. ಭಯೋತ್ಪಾದಕರನ್ನು ಪತ್ತೆ ಹಚ್ಚಬೇಕು. ವಿಧಾನಸೌಧದ ಒಳಗೆ ಪಾಕಿಸ್ತಾನ ಪರ ಘೋಷಣೆ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಸತ್ಯಾಂಶ ಮರೆಮಾಚಲು ಮುಂದಾಗಿದ್ದು, ಎಫ್‌ಎಸ್‌ಎಲ್ ವರದಿಯನ್ನು ಬಹಿರಂಗಪಡಿಸಬೇಕು. ವರದಿ ತಿರುಚಲು ತಡ ಮಾಡುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ. ವರದಿ ಬರುವ ಮುನ್ನವೇ ಕೆಲವು ಸಚಿವರು ಅಂತಹ ಘಟನೆ ನಡೆದಿಲ್ಲ ಎನ್ನುತ್ತಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜೈಲಿಗೆ ಕಳುಹಿಸಲಿ: ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ. ಆಫರ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಸಿಎಂ 50 ಕೋಟಿ ರೂ. ಆಫರ್ ಕೊಟ್ಟಿದ್ದು ಯಾರು ಎಂಬುದನ್ನು ಮೊದಲು ಹೇಳಬೇಕು. 50 ಕೋಟಿ ಆಫರ್ ಕೊಟ್ಟವರನ್ನು ಮೊದಲು ಜೈಲಿಗೆ ಕಳುಹಿಸಲಿ. ಸಿಎಂ ಬಾಯಲ್ಲಿ ಇಂತಹ ಮಾತು ಬರಬಾರದು. ಮಾತು ಬಂದ ಮೇಲೆ ಅದಕ್ಕೆ ಸಾಕ್ಷಿ ಕೊಡಬೇಕು. ಗುಪ್ತಚರ ಇಲಾಖೆಯು ಸಿಎಂ ಕೈಯಲ್ಲಿದೆ. ನಿಮ್ಮ ಶಾಸಕರಿಗೆ ಆಫರ್ ಕೊಟ್ಟಿದ್ದು ಯಾರು ಎಂದು ಜನರಿಗೆ ತಿಳಿಸಬೇಕು. ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್‌ರಿಂದ ಓಟು ಹಾಕಿಸಿಕೊಳ್ಳಲು ಎಷ್ಟು ಕೋಟಿ ರೂ ಕೊಟ್ಟಿದ್ದೀರಿ?, ಶಿವರಾಮ್ ಹೆಬ್ಬಾರ್ ಓಟು ಹಾಕದಂತೆ ತಡೆಯಲು ಎಷ್ಟು ಹಣ ನೀಡಿದ್ದೀರಿ ಎಂದು ಸವಾಲು ಹಾಕಿದರು.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆ ಸಂಬಂಧ ಸ್ಥಳೀಯ ನಾಯಕರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ ಅಭ್ಯರ್ಥಿ ಕುರಿತು ನಾಯಕರಿಗೆ ವರದಿ ಸಲ್ಲಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ, ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ಜಾತಿಗಣತಿ ವರದಿ ಸ್ವೀಕರಿಸಿ ಬಡವರ ಬಗ್ಗೆ ತಮ್ಮ ನಿಲುವು ಪ್ರದರ್ಶಿಸಿದ ಸಿಎಂ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ದೇವಗಳ್ಳಿ ಸೋಮಶೇಖರ್ ಮಾತನಾಡಿದರು.

ಮೈಸೂರು, ಮಾ.2(ಜಿಎ)-ಜಾತಿ ಜನಗಣತಿ ವರದಿಯನ್ನು ಸ್ವೀಕರಿಸುವ ಮೂಲಕ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಡವರ ಬಗೆಗಿನ ತನ್ನ ನಿಲುವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಆದರೆ ಸಿಎಂ ಮೂಲಭೂತವಾದಿಗಳ ಕುತಂತ್ರಕ್ಕೆ ಮರುಳಾಗದೇ ವರದಿಯನ್ನು ಜಾರಿಗೊಳಿಸುವ ದಿಟ್ಟ ನಿಲುವನ್ನು ಪ್ರದರ್ಶಿಸಬೇಕೆಂದು ದಲಿತ ಸಂಘರ್ಷ ಸಮಿತಿ ಸಂಯೋಜಕ ರಾಜ್ಯ ಸಮಿತಿ ಮನವಿ ಮಾಡಿದೆ.

ಈ ಕುರಿತು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ಸಂಘಟನಾ ಸಂಯೋಜಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಶೇ.80 ರಷ್ಟು ಮತಗಳು ಈ ಬಡ ವರ್ಗಗಳಿಂದಲೇ ಬಂದಿವೆ. ಹೀಗಾಗಿ ಜಾತಿ ಗಣತಿ ವರದಿಯನ್ನು ಅಂಗೀಕರಿಸಿ, ಯಥಾವತ್ತಾಗಿ ಜಾರಿಗೊಳಿಸಬೇಕು. ಶೇ. 80ಕ್ಕಿಂತ ಹೆಚ್ಚು ಮತ ನೀಡಿರುವ ಈ ವರ್ಗಗಳಿಗೆ ಹೆಚ್ಚಿನ ಸ್ಥಾನಮಾನ ನೀಡುವ ಸಲುವಾಗಿ ಎಸ್‌ಸಿ, ಎಸ್‌ಟಿಗಳಿಗೆ 15 ರಿಂದ 18 ಸಚಿವ ಸ್ಥಾನ, ಅಲ್ಪಸಂಖ್ಯಾತರು, ಹಿಂದುಳಿದವರಿಗೆ ಐದರಿಂದ ಎಂಟು ಸ್ಥಾನ ನೀಡಬೇಕು. ಇದಕ್ಕಾಗಿ ಮಂತ್ರಿಮಂಡಲ ಪುನರ್ ರಚಿಸಬೇಕು. ನಿಗಮ ಮಂಡಳಿಗಳಲ್ಲಿಯೂ ಹೆಚ್ಚಿನ ಆದ್ಯತೆ ನೀಡಬೇಕೆಂದು ಕೋರಿದರು.

ಎಲ್ಲಿ ತಾವು ಅಲಂಕರಿಸಿದ ಅಧಿಕಾರ ಮತ್ತು ಸಾಮ್ರಾಜ್ಯಗಳು ಕೈಬಿಟ್ಟು ಹೋಗಿ ಪ್ರಜಾಪ್ರಭುತ್ವದ ಪಾಲಾಗುತ್ತದೆಯೋ, ಎಲ್ಲಿ ನಮ್ಮ ಸ್ಥಾನಮಾನಗಳು ಪಲ್ಲಟವಾಗುತ್ತದೆಯೋ ಎಂಬ ಭಯದಿಂದ ವರದಿಯನ್ನು ಕೆಲವರು ವಿರೋಧಿಸುತ್ತಿದ್ದಾರೆ. ಆದರೆ ಸಿಎಂ ಇದಕ್ಕೆ ಮರುಳಾಗಬಾರದೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಅರ್ಜುನಹಳ್ಳಿ ಕಾಂತರಾಜು, ಬೆಲವತ್ತ ರಾಮಚಂದ್ರ, ಕಾರ್ಯ ಬಸವಣ್ಣ, ಪ್ರಕಾಶ್ ಹುಣಸೂರು, ಮಂಜುನಾಥ ಮುರಡಗಳ್ಳಿ, ಪ್ರಸನ್ನ ತಳೂರು ಉಪಸ್ಥಿತರಿದ್ದರು.

ವಾರದ ಮಿತ್ರ
ಮೈಸೂರು ಮಿತ್ರ
ಸಾಪ್ತಾಹಿಕ ಪುರವಣಿ
ಭಾನುವಾರ 3-3-2024

ಮನುಜ

ಬೆಂಕಿ ಹಚ್ಚಿಕೊಳ್ಳಬೇಡವೋ...!?

"ಯಾರಿಂದ ಎಂದಿಗೂ, ಏನನ್ನೂ ಬಯಸದ ಪರಿಸರ, ಪ್ರಾಣಿ–ಪಕ್ಷಿಗಳಿಗೆ ಮನುಷ್ಯ ನೀಡುತ್ತಿರುವ ಮಾನವೀಯ ಉಡುಗೊರೆ ಇದೆ ಅಲ್ಲವೇ? ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬ ನಾಣ್ಣುಡಿಯಂತೆ ವರ್ಷಗಳಿಂದ ಅಲ್ಲಿ ಬೆಳೆದಿದ್ದ ಗಿಡ–ಮರಗಳು, ಅಲ್ಲಿ ನೆಲೆಸಿದ್ದ ಪುಟ್ಟ ಪ್ರಾಣಿ–ಪಕ್ಷಿಗಳು ಕ್ಷಣಮಾತ್ರದಲ್ಲಿ ಬೆಂದು ಕರಕಲಾಗಿಬಿಡುತ್ತವೆ. ಬೆಂಕಿ ಹಾಕಿದ ನಂತರ ಅಲ್ಲಿಂದ ಹೊಮ್ಮುವ ಹೊಗೆಯನ್ನು ಉಸಿರಾಡುತ್ತಿರುವವರು ನೀವೇ ಅಲ್ಲವೇ? ಇದರಿಂದ ನಿಮ್ಮ ಆರೋಗ್ಯ ಹಾಳಾಗದೇ ಇರುತ್ತದೆಯೇ? ಅಲ್ಲಿನ ಸ್ಮಶಾನಸದೃಶ್ಯ ಸನ್ನಿವೇಶವನ್ನು ನೋಡುತ್ತಿರುವ ಕಣ್ಣುಗಳು ನಿಮ್ಮದೇ ಅಲ್ಲವೇ? ಈಗ ನಿಮ್ಮ ಕಣ್ಣುಗಳಲ್ಲಿ ಸಂತೋಷ ಕಾಣುತ್ತಿದ್ದೆಯೇ? ಮನಸ್ಸಿಗೆ ನೆಮ್ಮದಿ ಸಿಗುತ್ತಿದ್ದೆಯೇ? ಆತ್ಮಸಾಕ್ಷಿಯಾಗಿ ಹೇಳಿ ನೋಡೋಣ?



ಎ.ಪಿ.ಪ್ರಶಾಂತ್ ಕುಮಾರ್
ಸಹಾಯಕ ಪ್ರಾಧ್ಯಾಪಕರು
ಮೊ: 9844859950

ಕೆಲವು ದಿನಗಳ ಹಿಂದೆ ಹೀಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಮನಕಲಕುವ ದೃಶ್ಯವೊಂದು ಕಣ್ಣಿಗೆ ಬಿತ್ತು. ಐದಾರು ಪುಟ್ಟ ಪಕ್ಷಿಗಳು ರಸ್ತೆಯಲ್ಲಿ ಆತಂಕ–ಸಂಕಟದಿಂದ ಅರುಚುತ್ತಿದ್ದವು. ಯಾವುದಾದರೂ ವಾಹನ ಬಂದ ತಕ್ಷಣ ಹಾರಿ ಹೋಗಿ ರಸ್ತೆಯ ಪಕ್ಕದ ಗಿಡ–ಮರಗಳಲ್ಲಿ ಕೂರುತ್ತಿದ್ದವು. ಮತ್ತೆ ರಸ್ತೆಗೆ ಬರುವುದು, ವಾಹನಗಳು ಬಂದಾಗ ರಸ್ತೆಯ ಪಕ್ಕಕ್ಕೆ ಹಾರಿ ಹೋಗಿ ಕುಳಿತುಕೊಳ್ಳುವುದು ಹೀಗೆಯೇ ನಡೆಯುತ್ತಿತ್ತು.

ಸ್ವಲ್ಪ ಸಮಯದ ಕುತೂಹಲದ ವೀಕ್ಷಣೆಯ ನಂತರ ನಿಜಸ್ಥಿತಿ ಅರ್ಥ ಆಯಿತು. ಏನೆಂದರೆ, ರಸ್ತೆಯ ಬದಿಯ ಒಣ ಹುಲ್ಲಿಗೆ ಯಾರೋ ಕಿಡಿಗೇಡಿ ಬೆಂಕಿ ಹಚ್ಚಿ ಹೋಗಿದ್ದಾರೆ. ಆ ಬೆಂಕಿಯ ಕೆನ್ನಾಲಿಗೆ ತನ್ನ ಸುತ್ತಮುತ್ತಲಿನ ಸಣ್ಣ–ಪುಟ್ಟ ಗಿಡ–ಮರಗಳನ್ನು ಸಹ ಆಹುತಿ ತೆಗೆದುಕೊಳ್ಳುತ್ತಿತ್ತು. ಅಲ್ಲಿಯೇ ಒಂದು ಪುಟ್ಟ ಮರದಲ್ಲಿ ಆ ಪಕ್ಷಿಗಳು ಗೂಡು ಕಟ್ಟಿದ್ದವು. ಆ ಗೂಡಿನಲ್ಲಿದ್ದ ನಾಲ್ಕೈದು ಮರಿಗಳು ಬೆಂಕಿಯ ಶಾಖವನ್ನು ತಡೆಯಲಾಗದೆ ರೋದಿಸುತ್ತಿದ್ದವು.

ಈ ನೋವಿನ ದೃಶ್ಯಕ್ಕೆ, ಹೇಯಕೃತ್ಯಕ್ಕೆ ಕಾರಣವಾಗಿದ್ದು ಅತೀ ಬುದ್ಧಿವಂತ ಪ್ರಾಣಿ ಎಂದೇ ಪರಿಗಣಿತ ಮಾನವ. ತನ್ನ ಆಟಾಟೋಪಕ್ಕೆ, ದುರಾಸೆಗೆ, ಲಾಲಸೆಗೆ ಹಿಂದು–ಮುಂದು ಯೋಚಿಸದೆ ಪ್ರಕೃತಿಯ ಮೇಲೆ ನಿರಂತರವಾಗಿ ನಡೆಸುತ್ತಿರುವ ಕ್ರೌರ್ಯ ಅಷ್ಟಿಷ್ಟಲ್ಲಾ.

ಬೇಸಿಗೆ ಪ್ರಾರಂಭವಾಯಿತೆಂದರೆ ಸಾಕು; ಖಾಲಿ ಇರುವ ನಿವೇಶನ, ಪಾಳು ಜಾಗಗಳಲ್ಲಿ ಬೆಂಕಿ ಹಚ್ಚಿ ವಿಕೃತಿ ಮೆರೆಯುವುದು. ಇದರ ಹಿಂದಿನ ಕಾರಣ ಕೇಳಿದರೆ ವಿಚಿತ್ರ ಅನ್ನಿಸದೇ ಇರದು. ಖಾಲಿ ನಿವೇಶನ, ಜಾಗಗಳಲ್ಲಿ ಒಣಗಿ ನಿಂತಿರುವ ಹುಲ್ಲು, ಎಲೆಗಳನ್ನು ಉದುರಿಸಿ ಬರಡಾಗಿ ನಿಂತಿರುವ ಸಣ್ಣ–ಪುಟ್ಟ ಗಿಡ ಮರಗಳು ಹಾಗೂ ಪೊದೆಗಳನ್ನು ಬೆಂಕಿ ಹಾಕಿ ಸುಟ್ಟು ಹಾಕಿದರೆ ಆ ಜಾಗ ಸ್ವಚ್ಛವಾಗುತ್ತದೆ ಎಂತಲೂ, ಮುಂಬರುವ ಮಳೆಗಾಲದಲ್ಲಿ ಅದೇ ಜಾಗದಲ್ಲಿ ಉತ್ತಮವಾಗಿ ಮೇವು ಅಥವಾ ಹುಲ್ಲು ಚಿಗುರಿ ಬೆಳೆಯುತ್ತದೆ ಎಂಬ ಅತೀ ಬುದ್ಧಿವಂತಿಕೆ ಲೆಕ್ಕಾಚಾರ. ಬೆಂಕಿ ಹಚ್ಚುವ ಮೂಲಕ ತನ್ನ ನಿವೇಶನ ಅಥವಾ ಜಾಗ ಕ್ಲೀನ್ ಆಗಿರಬೇಕೆಂದು ಬಯಸುವ ಮನುಷ್ಯ ಮಾತ್ರ ಮುಂದೆ ಪಶು–ಪಕ್ಷಿ, ಜೀವ ಜಂತುಗಳಿಗೆ ಆಗುವ ಅಪಾಯದ ಬಗ್ಗೆ ಮಾತ್ರ ತಲೆ ಕೆಡಿಸಿಕೊಳ್ಳಲಾರ. ಯಾಕೆ ಅಂದ್ರೆ ನಿವೇಶನ, ಜಾಗ ಮಾತ್ರ ಅವನದ್ದು. ಸುತ್ತಮುತ್ತಲಿನ ಪರಿಸರ, ಆ ಸ್ಥಳದಲ್ಲಿ ತನ್ನ ಮಕ್ಕಳೊಂದಿಗೆ ಆಶ್ರಯ ಪಡೆದಿರುವ ಪ್ರಾಣಿ–ಪಕ್ಷಿಗಳ ಪ್ರಾಣಕ್ಕೆ ಸಂಚಕಾರವಾದರೆ ಇವನಿಗೇಕೆ ಚಿಂತೆ ಅಲ್ಲವೇ?

ಯಾರಿಂದ ಎಂದಿಗೂ, ಏನನ್ನೂ ಬಯಸದ ಪರಿಸರ, ಪ್ರಾಣಿ–ಪಕ್ಷಿಗಳಿಗೆ ಮನುಷ್ಯ ನೀಡುತ್ತಿರುವ ಮಾನವೀಯ ಉಡುಗೊರೆ ಇದೆ ಅಲ್ಲವೇ? ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬ ನಾಣ್ಣುಡಿಯಂತೆ ವರ್ಷಗಳಿಂದ ಅಲ್ಲಿ ಬೆಳೆದಿದ್ದ ಗಿಡ–ಮರಗಳು, ಅಲ್ಲಿ ನೆಲೆಸಿದ್ದ ಪುಟ್ಟ ಪ್ರಾಣಿ–ಪಕ್ಷಿಗಳು ಕ್ಷಣಮಾತ್ರದಲ್ಲಿ ಬೆಂದು ಕರಕಲಾಗಿಬಿಡುತ್ತವೆ.



ಬೆಂಕಿ ಹಾಕಿದ ನಂತರ ಅಲ್ಲಿಂದ ಹೊಮ್ಮುವ ಹೊಗೆಯನ್ನು ಉಸಿರಾಡುತ್ತಿರುವವರು ನೀವೇ ಅಲ್ಲವೇ? ಇದರಿಂದ ನಿಮ್ಮ ಆರೋಗ್ಯ ಹಾಳಾಗದೇ ಇರುತ್ತದೆಯೇ? ಅಲ್ಲಿನ ಸ್ಮಶಾನ ಸದೃಶ್ಯ ಸನ್ನಿವೇಶವನ್ನು ನೋಡುತ್ತಿರುವ ಕಣ್ಣುಗಳು ನಿಮ್ಮದೇ ಅಲ್ಲವೇ? ಈಗ ನಿಮ್ಮ ಕಣ್ಣುಗಳಲ್ಲಿ ಸಂತೋಷ ಕಾಣುತ್ತಿದ್ದೆಯೇ? ಮನಸ್ಸಿಗೆ ನೆಮ್ಮದಿ ಸಿಗುತ್ತಿದ್ದೆಯೇ? ಆತ್ಮಸಾಕ್ಷಿಯಾಗಿ ಹೇಳಿ ನೋಡೋಣ? ಪರಿಸರ ಎಂದರೆ ಗಿಡ–ಮರಗಳು, ಪ್ರಾಣಿ–ಪಕ್ಷಿಗಳು, ಸೂರ್ಯ–ಚಂದ್ರರು, ನದಿ–ಸರೋವರಗಳು, ಕಲ್ಲು–ಮಣ್ಣು, ಬೆಟ್ಟ–ಗುಡ್ಡಗಳು ಮಾತ್ರ. ಮನುಷ್ಯರಲ್ಲ. ಪ್ರತೀ ಮಾನವ ಜೀವಿಯೂ ಪರಿಸರದ ಮೇಲೆ ಪ್ರತೀ ಕ್ಷಣವೂ ಅವಲಂಬಿತನಾಗಿದ್ದಾನೆಯೇ ಹೊರತು, ಪರಿಸರ ಮನುಷ್ಯನ ಮೇಲೆ ಎಂದೂ ಅವಲಂಬಿತವಾಗಿಲ್ಲ, ಆಗುವುದೂ ಇಲ್ಲ. ಅಂತಹುದರಲ್ಲಿ ಪರಿಸರದ ಮೇಲೆ ನಮ್ಮ ಸವಾರಿ ಏಕೆ? ಪ್ರಕೃತಿಯ ಮೇಲೆ ನಿರಂತರ ದೌರ್ಜನ್ಯ ಏಕೆ? ನಿಸರ್ಗ ಮುನಿಸಿಕೊಂಡರೆ ತಡೆಯುವ ತಾಕತ್ತು ಮನುಷ್ಯನಿಗಿದೆಯೇ? ಪ್ರಕೃತಿ ವಿಕೋಪಗಳಿಂದ ಇಲ್ಲಿಯವರೆಗೆ ಅನುಭವಿಸಿದ್ದು ಸಾಕಲ್ಲವೇ? ಆಗಿಹೋಗಿರುವ ದುರ್ಘಟನೆಗಳು, ನಿದರ್ಶನಗಳು ಸಾಕಲ್ಲವೇ? ಈಗ ಅನುಭವಿಸುತ್ತಿರುವುದು ಸಾಕಾಗುತ್ತಿಲ್ಲವೇ?

ಪ್ರಕೃತಿಗೆ ತನ್ನನ್ನು ತಾನು ಹೇಗೆ ರಕ್ಷಿಸಿಕೊಳ್ಳಬೇಕೆಂದು ಚೆನ್ನಾಗಿ ಗೊತ್ತಿದೆ. ತನ್ನ ಒಡಲಲ್ಲಿರುವ ಗಿಡ–ಮರಗಳು, ಪ್ರಾಣಿ–ಪಕ್ಷಿಗಳನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಗೊತ್ತಿದೆ. ಕಾಲಕಾಲಕ್ಕೆ ಅವು ಹುಟ್ಟಿ ಬೆಳೆದು, ಯಾರಿಗೂ ತೊಂದರೆ ಕೊಡದೆ ಜೀವಿಸಿ ಸಾಯುವುದನ್ನು ಪ್ರಕೃತಿದತ್ತವಾಗಿ ಬಂದ ಅವುಗಳಿಗೆ ತಿಳಿದಿದೆ. ಇದರ ಮಧ್ಯೆ ನೀವೇಕೆ ಸುಖಾಸುಮ್ಮನೆ ಮೂಗು ತೂರಿಸುತ್ತಿದ್ದೀರಿ? ತಿಳಿ ಸ್ವಚ್ಛ ನೀರಿನಲ್ಲಿ ಕಡ್ಡಿ ಅಲ್ಲಾಡಿಸಿ ರಾಡಿ ಮಾಡುತ್ತಿದ್ದೀರಿ? ಇದಂತೂ ಖಂಡಿತ ಒಳ್ಳೆಯ ಬೆಳವಣಿಗೆ ಅಲ್ಲವೇ ಅಲ್ಲ.

ಈಗಾಗಲೇ ಭೀಕರ ಅನಾವೃಷ್ಟಿ, ಅತಿವೃಷ್ಟಿ, ಪ್ರವಾಹ, ಸುನಾಮಿ, ಕಾಡ್ಗಿಚ್ಚು, ಭೂಕಂಪ, ಕೊರೊನಾದಂತಹ ಸಾಂಕ್ರಾಮಿಕ, ಮಾರಣಾಂತಿಕ ಕಾಯಿಲೆಗಳ ದುಷ್ಪರಿಣಾಮಗಳನ್ನು ಅನುಭವಿಸಿದ್ದೇವೆ, ಅನುಭವಿಸುತ್ತಿದ್ದೇವೆ. ಇದೆಲ್ಲಾ ನಾವು ಪರಿಸರದ ಮೇಲೆ ನಿರಂತರವಾಗಿ ಮೆರೆಯುತ್ತಿರುವ ಕ್ರೌರ್ಯದಿಂದಾಗಿ ನಮಗೆ ಸಿಗುತ್ತಿರುವ ಫಲ. ಮಾಡಿದುಣ್ಣೋ ಮಹಾರಾಯ ಎನ್ನುವಂತೆ ನಾವು ನಮ್ಮ ಲಾಲಸೆ, ದುರಾಸೆಗಳಿಗಾಗಿ ಮಾಡಿದ ಪಾಪ ನಮ್ಮನ್ನೇ ಸುತ್ತುವರಿದು ಕೊನೆಗೆ ನಮ್ಮನ್ನೇ ಬಲಿ ಪಡೆಯುತ್ತದೆ ಎಂಬುದನ್ನು ಮರೆಯಬಾರದು.

ಶೇಕಡಾ 60 ರಿಂದ 70 ಭಾಗ ಉತ್ತಮ ಪರಿಸರವನ್ನು ಈಗಾಗಲೇ ನಮ್ಮ ಮಿತಿಮೀರಿದ ಆಸೆಗಳಿಂದ ಹಾಳುಮಾಡಿಕೊಂಡಿದ್ದೇವೆ. ಇನ್ನುಳಿದ ಅಲ್ಪಸ್ವಲ್ಪ ಪರಿಸರವನ್ನಾದರೂ ಉತ್ತಮ ಕೆಲಸ ಕಾರ್ಯಗಳ ಮೂಲಕ ಉಳಿಸಿಕೊಂಡು ಏನನ್ನೂ ಅರಿಯದ ನಮ್ಮ ಪುಟ್ಟ ಮಕ್ಕಳಿಗೆ, ಮುಂದಿನ ಪೀಳಿಗೆಗೆ ಸುಂದರ, ಆರೋಗ್ಯಕರ ವಾತಾವರಣವನ್ನು ಉಡುಗೊರೆ ನೀಡೋಣ. ಇದೇ ನಾವು ನಮ್ಮ ಮಕ್ಕಳಿಗೆ ನೀಡುವ ಬಹು ದೊಡ್ಡ ಅತ್ಯಮೂಲ್ಯ ಆಸ್ತಿ. ಹಣ, ನಿವೇಶನ, ಮನೆ, ಕಾರು, ಬಂಗಲೆ ಅಲ್ಲವೇ ಅಲ್ಲ. ನಾವು ಆರೋಗ್ಯಕರವಾಗಿ ಉಸಿರಾಡುತ್ತಿದ್ದರೆ ತಾನೆ ಬದುಕಿ, ಏನನ್ನಾದರೂ ಸಾಧನೆ ಮಾಡಲು ಸಾಧ್ಯ. ಉಸಿರಿಲ್ಲದ ದೇಹದಿಂದ ಏನನ್ನು ಗಳಿಸುವಿರಿ? ಇಷ್ಟೆಲ್ಲಾ ಅನಾಹುತಗಳು ಆದ ನಂತರವೂ ನಾವೆಲ್ಲರೂ ಬದಲಾಗಲಿಲ್ಲ ಎಂದಾದರೆ, ಮುಂಬರುವ ಕೆಲವೇ ಕೆಲವು ವರ್ಷಗಳಲ್ಲಿ ನಮ್ಮ ಖಾಲಿ ನಿವೇಶನ, ಖಾಲಿ ಜಾಗಗಳಲ್ಲಿ ನಮ್ಮ ಕನಸಿನ ಸುಂದರ ಮನೆಗಳನ್ನು ನಿರ್ಮಿಸುವ ಬದಲು, ನಮ್ಮೆಲ್ಲರ ಸುಂದರ ಗೋರಿಗಳನ್ನು ನಿರ್ಮಿಸಬೇಕಾದ ಘೋರ ಪರಿಸ್ಥಿತಿ ಬರುವ ಎಲ್ಲಾ ಲಕ್ಷಣಗಳು ಗೋಚರಿಸದೇ ಇಲ್ಲ.


ನಿವೇಶನ, ಖಾಲಿ ಜಾಗಕ್ಕೆ ಬೆಂಕಿ ಇಡುವ ಈ ಕೆಟ್ಟ ಅಭ್ಯಾಸದ ಮುಂದಿನ ಭಾಗವಾಗಿ ಇಂದು ಅರಣ್ಯ ಪಕ್ಕದ ಜಮೀನುಗಳಿಗೆ ಅಥವಾ ಕಾಡಿನ ಭಾಗಕ್ಕೆ ಬೆಂಕಿ ಹಾಕುತ್ತಿರುವ ಪರಿಣಾಮ ಬೃಹತ್ ಕಾಡ್ಗಿಚ್ಚು ವ್ಯಾಪಿಸಿ ಹಸಿರು ಅರಣ್ಯ, ಪ್ರಾಣಿ ಸಂಕುಲ ಸರ್ವನಾಶವಾಗುತ್ತಿದೆ. ಇದೇ ರೀತಿ ಘನತ್ಯಾಜ್ಯ ಹಾಗೂ ಕಸಕ್ಕೆ ಬೆಂಕಿ ಹಾಕುತ್ತಿರುವುದರಿಂದ, ಅದರಿಂದ ಹೊರಬರುವ ವಿಷಭರಿತ ಹೊಗೆ ನಾವು ಉಸಿರಾಡುವ ಗಾಳಿಯೊಂದಿಗೆ ಬೆರೆಯುತ್ತಿದೆ. ಇದರಿಂದಾಗಿ ಪರಿಸರ ಅಸಮತೋಲನ ಹೆಚ್ಚಾಗಿ, ಇದು ನೇರವಾಗಿ ಮನುಕುಲದ ಮೇಲೆ, ಅವನ ಆರೋಗ್ಯ ಹಾಗೂ ಆಯುಷ್ಯದ ಮೇಲೆ ಕಂಡು ಕೇಳರಿಯದ ದುಷ್ಪರಿಣಾಮವನ್ನು ಬೀರುತ್ತಿದೆ.

ಬೆಂಕಿ ಹಚ್ಚುವುದರಿಂದ ಗಿಡ–ಮರಗಳು, ಮೇವು ಉತ್ತಮವಾಗಿ ಚಿಗುರುತ್ತದೆ ಎಂದಾದರೆ, ತಾವು ತಮ್ಮ ದೇಹದ ಯಾವುದಾದರೂ ಭಾಗಕ್ಕೆ ಬೆಂಕಿ ಹಚ್ಚಿಕೊಳ್ಳಿ ನೋಡೋಣ? ಆ ಭಾಗವು ಹೊಸದಾಗಿ ಚೆಂದವಾಗಿ ಚಿಗುರಬಹುದು ಏನಂತೀರ? ಸದಾ ಕಾಲ ನೆನಪಿಡಿ. ನಮ್ಮ ಸುತ್ತಮುತ್ತಲಿನ ಪರಿಸರದಿಂದ ಮಾತ್ರವೇ ನಾವು. ನಮ್ಮಿಂದ ಪರಿಸರ ಅಲ್ಲ. ಪ್ರಕೃತಿ ನಮ್ಮ ಆಸೆಗಳನ್ನು ಪೂರೈಸಬಲ್ಲದೇ ಹೊರತು ದುರಾಸೆಗಳನಲ್ಲ. ನಮ್ಮ ಭೂಮಿ ಮುಂದೊಂದು ದಿನ ಚಂದ್ರ, ಮಂಗಳ ಗ್ರಹದಂತಾಗಬಾರದು ಎಂದಾದರೆ ಈಗಲೇ ಎಚ್ಚೆತ್ತುಕೊಳ್ಳಿ. ಕಾಲ ಮಿಂಚಿ ಹೋದರೆ ನಮಗ್ಯಾರಿಗೂ ಉಳಿಗಾಲವಿಲ್ಲ.


ಮಕ್ಕಳ ಚಿತ್ರಕಥೆ

ಹೀಗೊಂದು ಅಪರೂಪದ ಘಟನೆ


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




9/11 ಎಂದರೆ ಒಂಭತ್ತನೆಯ ತಿಂಗಳ ಹನ್ನೊಂದನೆಯ ತಾರೀಖು. ಇದೇ ದಿನಾಂಕದಂದು ಎರಡು ಮಹತ್ವದ ಘಟನೆಗಳು ಅಮೇರಿಕಾದಲ್ಲಿ ಸಂಭವಿಸಿವೆ.



ಮೊದಲ ಘಟನೆ 1893ರ ಸೆ. 11ರಂದು ಚಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಚರಿತ್ರಾರ್ಹ ಭಾಷಣ ಮಾಡಿದ್ದು. ಅಂದು ಅವರು "ಅಮೇರಿಕದ ಸಹೋದರ,ಸಹೋದರಿಯರೇ...!" ಎಂದು ಭಾಷಣ ಆರಂಭಿಸಿದ ತಕ್ಷಣ ನೆರೆದಿದ್ದ ಸಭಿಕರಿಗೆ ವಿದ್ಯುತ್ ಸಂಚಾರವಾದಂತೆ ಇಡೀ ಸಭಾಂಗಣ ಚಪ್ಪಾಳೆಗಳಿಂದ ಪ್ರತಿಧ್ವನಿಸಿತ್ತು.



ಅಂದಿನ ಅವರ ಭಾಷಣದ ಕೆಲವು ಮಾತುಗಳು, "ನೀವು ನಮಗೆ ಪ್ರೀತಿಪೂರ್ವಕವಾಗಿ ಕೊಟ್ಟ ಸ್ವಾಗತಕ್ಕೆ ಸಂತೋಷವಾಗುತ್ತಿದೆ. ಜಗತ್ತಿನ ಪ್ರಾಚೀನತಮ ಸಂನ್ಯಾಸಿಗಳ ಸಂಘದ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಹಲವು ಧರ್ಮಗಳ ಮಾತೆಯ ಪರವಾಗಿ ಕೃತಜ್ಞತೆ ಅರ್ಪಿಸುತ್ತೇನೆ."



"ಎಲ್ಲಾ ಪಂಗಡಗಳ, ಎಲ್ಲಾ ಮತಕ್ಕೆ ಸೇರಿದ ಕೋಟ್ಯಾನುಕೋಟಿ ಭಾರತೀಯರ ಪರವಾಗಿ ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ಜಗತ್ತಿಗೆಲ್ಲಾ ಧಾರ್ಮಿಕ ಸಹಾನುಭೂತಿ ಮತ್ತು ಸಾರ್ವತ್ರಿಕ ಅಂಗೀಕಾರವನ್ನು ಬೋಧಿಸಿದ ಧರ್ಮಕ್ಕೆ ನಾನು ಸೇರಿದವನೆಂಬುದು ಒಂದು ಹೆಮ್ಮೆ".



"ನಾವು ವಿಶ್ವ ಸಹಾನುಭೂತಿಯನ್ನು ಮಾತ್ರ ಒಪ್ಪಿಕೊಳ್ಳುವವರಲ್ಲ....ಜತೆಗೆ ಎಲ್ಲಾ ಧರ್ಮಗಳೂ ಸತ್ಯವೆಂಬುದನ್ನು ಒಪ್ಪಿಕೊಳ್ಳುತ್ತೇವೆ". ಅಂದಿನ ಅವರ ಉಪನ್ಯಾಸ ಭಾರತದ ಹಿಂದೂ ಧರ್ಮದ ಬಗ್ಗೆ ಇದ್ದ ತಪ್ಪು ಕಲ್ಪನೆಗಳನ್ನೆಲ್ಲಾ ಧೂಳಿಪಟ ಮಾಡಿತು. ಎಲ್ಲರೂ ಅದನ್ನು ಗೌರವದಿಂದ ನೋಡುವಂತೆ ಮಾಡಿತು.



ಎರಡನೇ ಘಟನೆ, ಅಮೆರಿಕಾದ ನ್ಯೂಯಾರ್ಕ್‌ನಲ್ಲಿದ್ದ "ವರ್ಲ್ಡ್ ಟ್ರೇಡ್ ಸೆಂಟರ್" ನ ಎರಡು ಗಗನಚುಂಬಿ ಕಟ್ಟಡಗಳು ಉಗ್ರವಾದಿಗಳಿಂದ ಧ್ವಂಸವಾಗಿ ಸಾವಿರಾರು ಜನರ ಪ್ರಾಣ ಹರಣವಾಗಿದ್ದು "2001"ರ ಇದೇ ದಿನಾಕದಂದು.

ಸ್ವಾಮಿ ವಿವೇಕಾನಂದರ ಅಂದಿನ ಉಪನ್ಯಾಸವನ್ನು ಕೇಳಬೇಕೆಂಬ ಆಸಕ್ತಿ ಇದ್ದರೆ ಇಂಟರ್‌ನೆಟ್ ಸಂಪರ್ಕದಲ್ಲಿ ಹೋಗಿ, "ಸ್ವಾಮಿ ವಿವೇಕಾನಂದಾಸ್ ಸ್ಪೀಚ್ ಅಟ್ ಚಿಕಾಗೋ" ಎಂದು ಟೈಪ್ ಮಾಡಿ, ನೀವೂ ಕೇಳಿ... ರೋಮಾಂಚನಗೊಳ್ಳಬಹುದು....!



ವಾರಭವಿಷ್ಯ

3.03.2024 ರಿಂದ 9.03.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕುಂಭ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ–ಮಕರ, ಬುಧ–ಕುಂಭ, ಮೀನ, ಗುರು–ಮೇಷ, ಶುಕ್ರ–ಮಕರ, ಕುಂಭ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಪ್ರಾರಂಭದಲ್ಲಿ ಆಕಸ್ಮಿಕ ಘಟನೆಗಳು ನಿಮ್ಮನ್ನು ವಿಚಲಿತರನ್ನಾಗಿಸಬಹುದು. ವ್ಯಾಪಾರ ವ್ಯವಹಾರಗಳಲ್ಲಿ ಸಫಲತೆಯನ್ನು ಹೊಂದಲು ತೀರಾ ಸರ್ಕಸ್ ಮಾಡಬೇಕಾದೀತು. ಶ್ರೀಮತಿಯೊಂದಿಗೆ ವಿರಸದ ಮಾತುಗಳನ್ನು ಆಡದಿರಿ. 'ಸಮರಸವೇ ಜೀವನ'. ವ್ಯಯಸ್ಥಿತ ರಾಹು ಸ್ನಾಯು ಸೆಳೆತ, ನರದೌರ್ಬಲ್ಯ ನೀಡುವನು. ವಾರಾಂತ್ಯಕ್ಕೆ ಸಜ್ಜನರ ಸಂಪರ್ಕದಿಂದ ಸಂತಸದ ತಿಳಿಗಾಳಿ ಬೀಸುವುದು.
ಶ್ರೀ ಕಾರ್ತಿಕೇಯಸ್ವಾಮಿ ಉಪಾಸನೆ. ಶುಭ ಸಂಖ್ಯೆ–6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೂ)

ವಾರದ ಪೂರ್ವಾರ್ಧದಲ್ಲಿ ಅಕಾರಣವಾಗಿ ಉದ್ವೇಗಕ್ಕೆ ಈಡಾಗುವಿರಿ. ಸರ್ಕಾರಿ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗದು. ನಿತ್ಯ ಜೀವನದಲ್ಲಿ ಲವಲವಿಕೆ ಕಾಣದು. ವಾರದ ಉತ್ತರಾರ್ಧಕ್ಕೆ ಸಜ್ಜನರ ಸಂಪರ್ಕದಿಂದ ಮಹತ್ವದ ಬದಲಾವಣೆ ಉಂಟಾಗಿ ಹರುಷ, ದವಸ, ಧಾನ್ಯ, ವ್ಯಾಪಾರ ತೇಜಿಯಾಗಿ ನಡೆದು ಲಾಭ ಗಳಿಕೆ. ರಾಜಕಾರಣಿಗಳಿಗೆ ಶತ್ರುಗಳ ಕಾರಸ್ಥಾನ ಹೆಚ್ಚಾಗುತ್ತದೆ. ನೇತ್ರ ಸಂಬಂಧಿ ತೊಂದರೆ ಉಂಟಾದೀತು. ಶ್ರೀ ಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–2

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಕೈಗೊಂಡ ಮಹತ್ವದ ಕೆಲಸ ಕಾರ್ಯಗಳು ದಡ ಸೇರುತ್ತವೆ. ನಿಮ್ಮ ಜಾಣ್ಮೆಯಿಂದಲೂ ವಾಕ್ಚಾತುರ್ಯದಿಂದಲೂ ಜೀವನದಲ್ಲಿ ಹೊಸ ಎತ್ತರವನ್ನು ಹೊಂದುವಿರಿ. ಮನೆ, ನಿವೇಶನ ಹೊಂದುವ ನಿಮ್ಮ ಪ್ರಯತ್ನಕ್ಕೆ ಗುರುಗ್ರಹದ ಅನುಗ್ರಹವಿದೆ. ಪ್ರಾಮಾಣಿಕವಾಗಿ ಪ್ರಯತ್ನಿಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಆಸಕ್ತಿ ಮೂಡುವುದು. ವಾರದ ಕಡೆಗೆ ಜಾತ್ರೆ–ಉತ್ಸವಾದಿಗಳಲ್ಲಿ ಭಾಗಿಯಾಗುವಿರಿ.
ಶ್ರೀರಾಮ ದರ್ಶನ. ಶುಭ ಸಂಖ್ಯೆ–3.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಕಳೆದು ಹೋದ ಕಹಿ ಘಟನೆಗಳನ್ನು ಮರೆಯುವುದು ಜಾಣತನ. ವಾಮಮಾರ್ಗಗಳಿಂದ ಅಧಿಕಾರ, ಹಣ ಲಭಿಸಬಹುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟಬಹುದು. ನೀತಿಮಾರ್ಗ ಕೋವಿದನಾದ ಶನಿದೇವ ಅಡ್ಡಮಾರ್ಗದಲ್ಲಿ ಹೋಗಲು ಪ್ರೇರೇಪಿಸಬಹುದು. ಇದರಿಂದ ನಿಮ್ಮ ನೆಮ್ಮದಿಗೆ ಭಂಗವಾದೀತು. 'ಸಜ್ಜನರ ಸಂಘ ಹೆಜ್ಜೇನು ಸವಿದಂತೆ'. ಸಂಸಾರ ಸಮೇತ ಮನೆದೇವರ ದರ್ಶನ ಮಾಡಿ. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ಇಷ್ಟ ಸಿದ್ಧಿ, ಕರ್ಮ ಸಿದ್ಧಿ, ಹಿರಿಯ ಅನುಭವಿಗಳ ಸಹಾಯ, ಸಹಕಾರಗಳು ಲಭ್ಯವಾಗಿ ಉನ್ನತಿಯನ್ನು ಸಾಧಿಸುವಿರಿ. ಮದುವೆ ಡೆಕೋರೇಶನ್ ಉದ್ಯಮಿಗಳಿಗೆ ಶುಭ ಸಮಯ. ಖರ್ಚುಗಳು ಕೈ ಮೀರಿದರೂ ಸಮಯಕ್ಕೆ ಸರಿಯಾಗಿ ಹಣ ಒದಗಿ ಬರುವುದು. ಶ್ರೀಮತಿ ಹಾಗೂ ಸುತರ ಸಹಯೋಗದಿಂದ ಮನಸ್ಸು ಹರ್ಷಿತವಾಗಿರುವುದು. ಆರೋಗ್ಯ ಸುಧಾರಿಸುವುದು.
ಶ್ರೀ ಹನುಮಂತ ದರ್ಶನ. ಶುಭ ಸಂಖ್ಯೆ–9.

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)

ವಾರದಾರಂಭ ಚೆನ್ನಾಗಿದೆ. ವಸ್ತ್ರ, ರೇಷ್ಮೆ ವ್ಯಾಪಾರ ಭರದಿಂದ ಸಾಗುವುದು. ಬರಬೇಕಾದ ಬಾಕಿ ಹಣ ಕೈ ಸೇರುವುದು. ಚಂದ್ರಗ್ರಹದ ಪ್ರಭಾವದಿಂದ ಪತಿ–ಪತ್ನಿಯರಲ್ಲಿ ಉಂಟಾಗಿದ್ದ ವೈಮನಸ್ಯ ನಿವಾರಣೆ ಆಗುವುದು. ದೂರ ಸರಿದವರು ಹತ್ತಿರವಾಗುವರು. ಸರ್ಕಾರಿ ಕಚೇರಿ ಕೆಲಸಗಳು ನೀವಂದುಕೊಂಡಂತೆ ಸಾಗದೆ ಮನಸ್ಸಿಗೆ ಬೇಸರ. ಆಹಾರ ವ್ಯತ್ಯಾಸದಿಂದ ಆರೋಗ್ಯಕ್ಕೆ ಹಾನಿ.
ಶ್ರೀ ವೆಂಕಟೇಶ್ವರ ಆರಾಧನೆ. ಶುಭ ಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ನಿಮ್ಮ ಸ್ವಸಾಮರ್ಥ್ಯದಲ್ಲಿ ನಿಮ್ಮ ನಂಬಿಕೆ ವೃದ್ಧಿಯಾಗುವುದು. ನೆರೆಹೊರೆಯಲ್ಲಿ ಸವಿಮಾತುಗಳಿಂದ ತೊಂದರೆಗಳ ನಿವಾರಣೆ. ಸ್ತ್ರೀಯರ ಸಿಹಿ ನೋಟಕ್ಕೆ ಪಾತ್ರರಾಗುವಿರಿ. ಅವರನ್ನು ಗೌರವಾದರಗಳಿಂದ ಕಾಣಿ. ಅಲಂಕಾರಿಕ ವಸ್ತುಗಳಿಗೆ ಹಣ ವ್ಯಯ. ಸುವರ್ಣ, ತಾಮ್ರ ವಸ್ತು ಖರೀದಿಸುವಿರಿ. ಆತ್ಮೀಯರಿಂದ ಬಳುವಳಿ ದೊರೆಯುವುದು. ಸ್ನಾಯು ಸೆಳೆತ ಕಾಡಬಹುದು.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–7

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಸಪ್ತಾಹದ ಆದಿಗೆ ನಿಮ್ಮ ರಾಶಿಯಲ್ಲಿ ಸಂಚರಿಸುವ ಚಂದ್ರನಿಂದ ಪ್ರವಾಸೋದ್ಯಮ, ಕ್ಷೀರ ವ್ಯಾಪಾರ, ಫರ್ನಿಚರ್ ವ್ಯಾಪಾರಿಗಳಿಗೆ ಕೈ ತುಂಬಾ ಲಾಭವಾಗುವುದು. ವಿದ್ಯುತ್ ವಸ್ತುಗಳ ಕ್ರಯ–ವಿಕ್ರಯ ಭರಾಟೆಯಾಗಿ ನಡೆಯುವುದು. ಪಂಚಮ ಶನಿ ಕಾರಣ ವೈರಿಗಳು ಮೇಲುಗೈ ಸಾಧಿಸುವರು. ಶಿಕ್ಷಣದ ಕಡೆ ಅನಾಸಕ್ತಿ ಕಂಡು ಬರುವುದು. ವಾರದ ಕಡೆಗೆ ಕುಟುಂಬ ಸಮೇತ ಮನೆ ದೇವರ ದರ್ಶನ ಮಾಡಿ.
ಶ್ರೀ ಲಕ್ಷ್ಮೀನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಬಯಸಿದ್ದನ್ನು ಗಳಿಸಿಕೊಳ್ಳುವಿರಿ. ಸ್ಥಾನ ಲಾಭವೂ ಆದೀತು. ಅಭಿವೃದ್ಧಿಯ ಮಾತುಗಳು ನಡೆಯುವುದು. ಆದರೆ ನಿಮ್ಮ ಆತ್ಮವಿಶ್ವಾಸದಲ್ಲಿ ಕೊರತೆ ಕಾಣುವುದು. ಸಾಡೇಸಾತಿಯ ಪ್ರಭಾವವೂ ಇದ್ದು ಪ್ರಾರಬ್ಧ ಕರ್ಮ ಕಳೆಯಲು ಕರ್ತವ್ಯದಲ್ಲಿ ಭಗವಂತನನ್ನು ಕಾಣಿ. ಇದರಿಂದ ಮನಃಶಾಂತಿ ದೊರಕುವುದು. ಖಯ್ಯಾಲಿ ಪ್ರಯಾಣಗಳಿಂದ ದೂರವಿರಿ. ಜಲಾಶಯಗಳ ಹತ್ತಿರ 'ಸೆಲ್ಫಿ' ಗೀಳು ಬೇಡ.
ಶ್ರೀಮಂತ್ರಾಲಯ ಪ್ರಭುಗಳ ದರ್ಶನ. ಶುಭ ಸಂಖ್ಯೆ–1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸದ್ಯದ ಸಮಯ ಸ್ವಲ್ಪ ಕಸರತ್ತಿನದಾಗಿದೆ. ನಿಮ್ಮ ಸಾಮರ್ಥ್ಯದ ಹೊರಗಿನ ವಿಚಾರಗಳಿಗೆ ಕೈ ಹಾಕಬೇಡಿ. ರಾಜಕೀಯ ಮಹತ್ವಾಕಾಂಕ್ಷೆಗಳು ವಿರೋಧಿಗಳ ಕಾರಸ್ಥಾನದಿಂದ ಕೈತಪ್ಪಿ ಹೋಗುವುದು. ವಾರದ ಉತ್ತರಾರ್ಧದಲ್ಲಿ ಶುಭ ಚಂದ್ರನ ನಡೆಯಿಂದ ಹೋಟೆಲ್, ಕೇಟರಿಂಗ್ ವೃತ್ತಿಯವರಿಗೆ ಉತ್ತಮ ಧನ ಲಾಭವಾಗುವುದು. ಅಧಿಕ ತಿರುಗಾಟಗಳಿಂದ ಆರೋಗ್ಯ ಕೆಡಬಹುದು.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಇದು ಮಿಶ್ರ ಫಲದ ವಾರ. ಪ್ರವಾಸೋದ್ಯಮ, ಟೂರಿಸ್ಟ್ ಸಂಸ್ಥೆಗಳಿಗೆ ಒಳ್ಳೆಯ ಗ್ರಾಹಕರು ದೊರೆತು ಅಧಿಕ ಲಾಭವಾಗಲಿದೆ. ಸಿಮೆಂಟು, ಕಬ್ಬಿಣ ವ್ಯಾಪಾರಿಗಳಿಗೆ ದೊಡ್ಡ ಆರ್ಡರ್‌ಗಳು ದೊರಕುವುದು. ಸಾಡೇಸಾತಿಯ ಪ್ರಭಾವ ಇದ್ದು ಸಮಾಜಘಾತುಕ ವ್ಯಕ್ತಿಗಳಿಂದ ದೂರವಿರಿ. ಅನ್ಯಥಾ ಕಾನೂನು ಕ್ರಮಕ್ಕೆ ಗುರಿಯಾಗುವ ಸಾಧ್ಯತೆ ಇರುತ್ತದೆ. ವಾಹನದಲ್ಲಿ ಚಲಿಸುವಾಗ ಸಂಚಾರಿ ನಿಯಮ ಪಾಲಿಸಿ.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ–4

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಸಪ್ತಾಹದ ಆದಿಗೆ ಸುಭೋಜನ, ನೂತನ ವಸ್ತ್ರಾಭರಣ ಪ್ರಾಪ್ತಿ. ಮನೆಗೆ ಅತಿಥಿ, ಅಭ್ಯಾಗತರ ಆಗಮನ, ಅವರ ಉಪಚಾರ, ಸತ್ಕಾರಕ್ಕೆ ಹಣ ವ್ಯಯ ಸರ್ಕಾರಿ ನೌಕರರಿಗೆ ಬಡ್ತಿ ಜೊತೆಗೆ ವರ್ಗಾವಣೆ ಆಗುವುದು. ವ್ಯಾಪಾರ ವ್ಯವಹಾರಗಳು ಲಾಭವನ್ನು ತಂದು ಕೊಡುವುದು. ಸತಿ–ಸುತರಲ್ಲಿ ಉಂಟಾಗಿದ್ದ ವಿರಸದ ಮಾತು ನಿವಾರಣೆ ಆಗುವುದು. ಕಷ್ಟಸಾಧ್ಯವಾದ ಕೆಲಸಗಳು ಸುಲಭವಾಗಿ ಆಗುವುದು. ಶಿರೋವೇದನೆ ಕಾಡಬಹುದು.
ಶ್ರೀ ಕೃಷ್ಣನಾಮ ಜಪ. ಶುಭ ಸಂಖ್ಯೆ–7

ಮೈಸೂರು ಮಿತ್ರ

ಭಾನುವಾರ 3 ಮಾರ್ಚ್ 2024

ನೀರಿನ ಸಮಸ್ಯೆ ಬಗೆಹರಿಸಲು ಒಟ್ಟಾಗಿ ಕಾರ್ಯ ನಿರ್ವಹಿಸಿ

ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸೂಚನೆ

ಹುಣಸೂರು, ಮಾ.2– ತಾಲೂಕಿನ 16 ಗ್ರಾಮಗಳಲ್ಲಿ ಈಗಾಗಲೇ ನೀರಿನ ಸಂಕಷ್ಟ ಎದುರಾಗಿದ್ದು, ಅಧಿಕಾರಿಗಳು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸುವ ಮೂಲಕ ನೀರಿನ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಸೂಚಿಸಿದರು.

ನಗರದ ತಹಸೀಲ್ದಾರ್ ಕಚೇರಿಯಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮಾರ್ಚ್ ಆರಂಭದಲ್ಲೇ ತಾಲೂಕಿನ 16 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ವರದಿಗಳ ಪ್ರಕಾರ ಏಪ್ರಿಲ್, ಮೇ ತಿಂಗಳಲ್ಲಿ ಬಿಸಿಲಿನ ಝಳ ಮತ್ತಷ್ಟು ಹೆಚ್ಚಾಗುವುದರಿಂದ ಅಂತರ್ಜಲ ಕುಸಿಯುವ ಸಾಧ್ಯತೆ ಹೆಚ್ಚಾಗಿದೆ. ಹೀಗಾಗಿ ಪಿಡಿಓ, ಗ್ರಾಮ ಲೆಕ್ಕಾಧಿಕಾರಿ, ಸೆಸ್ಕ್ ಮತ್ತು ಪಂಚಾಯತ್ ರಾಜ್ ಕುಡಿಯುವ ನೀರು ವಿಭಾಗದ ಅಧಿಕಾರಿಗಳು ಸೇರಿದಂತೆ ಶಾಸಕರನ್ನು ಒಳಗೊಂಡ ವಾಟ್ಸ್‌ಪ್ ಗುಂಪು ರಚಿಸಿ ನಿತ್ಯ ಮಾಹಿತಿ ಹಂಚಿಕೊಳ್ಳುವುದರಿಂದ ನೀರಿನ ನಿರ್ವಹಣೆಯನ್ನು ಯಶಸ್ವಿಯಾಗಿ ಮಾಡಬಹುದು ಎಂದು ಸಲಹೆ ನೀಡಿದರು.

ಬರ ನಿರ್ವಹಣೆಗೆ 25 ಲಕ್ಷ ಅನುದಾನ: ಬರ ನಿರ್ವಹಣೆಗೆ ಸರ್ಕಾರ 25 ಲಕ್ಷ ರೂ. ನೀಡಿದೆ. ಈ ಅನುದಾನದಲ್ಲಿ ಕೊಳವೆ ಬಾವಿ ನಿರ್ವಹಣೆ,



ಹುಣಸೂರಿನ ತಹಸೀಲ್ದಾರ್ ಕಚೇರಿಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಯಿತು.

ಟ್ಯಾಂಕರ್‌ನಲ್ಲಿ ನೀರು ಸರಬರಾಜು ಮತ್ತು ಹೊಸ ಕೊಳವೆ ಬಾವಿ ಕೊರೆಸಬೇಕಾಗಿದೆ ಎಂದು ತಹಸೀಲ್ದಾರ್ ಮಂಜುನಾಥ್ ಶಾಸಕರ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಹರೀಶ್‌ಗೌಡ, ಅಲ್ಪ ಮೊತ್ತದಲ್ಲಿ ಯಾವ ಕೆಲಸವೂ ಮಾಡಲು ಸಾಧ್ಯವಿಲ್ಲ. ಹೀಗಾಗಿ ಹೆಚ್ಚಿನ ಅನುದಾನ ನೀಡಲು ಸಂಬಂಧಿಸಿದ ಸಚಿವರೊಂದಿಗೆ ಮಾತನಾಡಲಾಗುವುದು ಎಂದರು.

ಕೊಳವೆ ಬಾವಿ ಕೊರೆಯಲು ಅನುಮತಿ: ನೀರಿನ ಬವಣೆ ನೀಗಿಸಲು ಹೊಸ ಕೊಳವೆ ಬಾವಿ ಕೊರೆಯಲು ಅವಕಾಶವಿಲ್ಲ ಎಂದು ಜಿಪಂ ಕುಡಿಯುವ ನೀರು ವಿಭಾಗದ ಅಧಿಕಾರಿ ಮಹಮ್ಮದ್ ಖಲೀಂ ತಿಳಿಸಿದರು. ಇದಕ್ಕೆ ಉತ್ತರಿಸಿದ ಸಚಿವರು ಕೊಳವೆ ಬಾವಿ ಕೊರೆಯಲು ಸರ್ಕಾರ ಅವಕಾಶ ಕಲ್ಪಿಸಿದೆ. ಹೊಸ ಆದೇಶ ಪ್ರತಿ ಶೀಘ್ರ ನಿಮ್ಮ ಕೈ ಸೇರಲಿದೆ. ಆತಂಕ ಬಿಟ್ಟು ನೀರು ಇಲ್ಲದ ಗ್ರಾಮದಲ್ಲಿ ಕ್ರಮವಹಿಸಿ ಎಂದು ಸೂಚಿಸಿದರು.

ಕ್ಷೇತ್ರದ ಐದಾರು ಪಿಡಿಓಗಳು ಸೂಚನೆ ಪಾಲಿಸುತ್ತಿಲ್ಲ. ಹೀಗಾಗಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಾಪಂ ಉಪ ನಿರ್ದೇಶಕ ರಾಜೇಶ್ ಗಮನಕ್ಕೆ ತಂದರು. ಶಾಸಕರು ಸೂಚನೆ ನೀಡಬೇಡಿ ಅಮಾನತುಗೊಳಿಸಿ ಎಂದರು.

ಇಲ್ಲಿನ ನಗರಸಭೆ ಕುಡಿಯುವ ನೀರು ನಿರ್ವಹಣೆ ಮಾಡುವಲ್ಲಿ ಎಡವಿದೆ. ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ಇದುವರೆಗೂ ಪೂರ್ಣಗೊಳಿಸಿಲ್ಲ ಎಂದು ಅಧಿಕಾರಿಗಳನ್ನು ಶಾಸಕ ಜಿ.ಡಿ.ಹರೀಶ್‌ಗೌಡ ತರಾಟೆ ತೆಗೆದುಕೊಂಡರು. ಈ ವೇಳೆ ನಗರಸಭೆ ಅಧಿಕಾರಿ ಲೋಕನಾಥ್ ಮಾತನಾಡಿ, 15ನೇ ಹಣಕಾಸು ಯೋಜನೆಯಲ್ಲಿ ಪೈಪ್‌ಲೈನ್ ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲಿದ್ದೇವೆ ಎಂದರು.

ನಗರಸಭೆ ವ್ಯಾಪ್ತಿಯ 33 ವಾರ್ಡ್‌ಗಳಲ್ಲಿ ನೀರಿನ ಬವಣೆ ನೀಗಿಸಲು ಹೆಚ್ಚುವರಿ ಟ್ಯಾಂಕರ್‌ಗಳ ಅವಶ್ಯವಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ನಗರಸಭೆ ಹಾಲಿ ಎರಡು ಟ್ಯಾಂಕರ್ ಬಳಸಲು ಸಿದ್ಧವಿದೆ ಎಂದರು. ಸಭೆಯಲ್ಲಿ ಉಪತಹಸೀಲ್ದಾರ್ ಅರುಣ್ ಸಾಗರ್, ಅರುಣ್, ಅರಸು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೆಟಿಎಂ (ಕ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆಪರೇಷನ್ ವ್ಯಾಲಂಟೇನ್ (ತೆ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ವಾರಿ–3 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಹದೇವ್ (ಹಿ)	4 ಪ್ರದರ್ಶನಗಳು
ಪ್ರಭಾ	
ಛಾಯಾ (ಕ)	2 ಪ್ರದರ್ಶನಗಳು
ನಮೋಭಾರತ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಚಾರಿ 111 (ತೆ): ಬೆ.10.30ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಮ.1.05ಕ್ಕೆ, ರಾ.10.25ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.15ಕ್ಕೆ, ರಾ.7.25ಕ್ಕೆ.
ಸ್ಕ್ರೀನ್ 2	ಜುಗಲ್‌ಬಂದಿ (ಕ): ಬೆ.10.45ಕ್ಕೆ, ಉಪಾಧ್ಯಕ್ಷ (ಕ): ಮ.1.30ಕ್ಕೆ, ಲಾಪತಾ ಲೇಡಿಸ್ (ಹಿಂ): ಸಂ.4.25ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7ಕ್ಕೆ, ಮಂಜುಮಲೆ (ಮ): ರಾ.10ಕ್ಕೆ.
ಸ್ಕ್ರೀನ್ 3	ಆರ್ಟಿಕಲ್ 370 (ಹಿಂ): ಬೆ.10.40ಕ್ಕೆ, ರಾ.9.45ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 4	

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್ 2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಚ್ಚಿನಿಂದ ಎಳನೀರು ವ್ಯಾಪಾರಿ ಮೇಲೆ ಹಲ್ಲೆ: ಆರೋಪಿಗಳ ಬಂಧನ


ಹುಣಸೂರು, ಮಾ.2– ಕ್ಷುಲ್ಲಕ ಕಾರಣಕ್ಕೆ ಎಳನೀರು ಮಾರಾಟಗಾರರ ನಡುವೆ ಮಾತಿನ ಚಕಮಕಿ ನಡೆದು ವ್ಯಕ್ತಿಯೋರ್ವನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿರುವ ಘಟನೆ ನಗರದ ತಹಸೀಲ್ದಾರ್ ಕಚೇರಿ ಬಳಿ ನಡೆದಿದೆ.

ನಗರದ ರಂಗನಾಥ ಬಡಾವಣೆ ನಿವಾಸಿಯೂ ಆದ ಎಳನೀರು ವ್ಯಾಪಾರಿ ದಿನೇಶ್ ಹಲ್ಲೆಗೊಳಗಾದವರು. ಅದೇ ಬಡಾವಣೆಯ ಸ್ವಾಮಿ ಮತ್ತು ವೆಂಕಟೇಶ್ ಹಲ್ಲೆ ಆರೋಪಿಗಳು.

ತಹಸೀಲ್ದಾರ್ ಕಚೇರಿ ಬಳಿ ಎಳನೀರು ವ್ಯಾಪಾರ ಮಾಡುವ ವೇಳೆ ದಿನೇಶ್, ಸ್ವಾಮಿ ಹಾಗೂ ವೆಂಕಟೇಶ್ ನಡುವೆ ಕ್ಷುಲ್ಲಕ ಕಾರಣಕ್ಕೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಸ್ವಾಮಿ, ವೆಂಕಟೇಶ್ ಅವರುಗಳು ದಿನೇಶ್ ಮೇಲೆ ಮಚ್ಚು ಬೀಸಿದ ಪರಿಣಾಮ ಬೆನ್ನಿಗೆ ಗಾಯವಾಗಿದ್ದು, ಇದೀಗ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಿನೇಶ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಹುಣಸೂರು ನಗರ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕುರುಬೂರು ನೀರು ಬಳಕೆದಾರರ ಸಹಕಾರ ಸಂಘದ ಚುನಾವಣೆ

ನಿಜಲಿಂಗಸ್ವಾಮಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಕೆ.ಜಿ.ರಾಜಪ್ಪ ಆಯ್ಕೆ



ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ಜಿ.ನಿಜಲಿಂಗಸ್ವಾಮಿ, ಉಪಾಧ್ಯಕ್ಷರಾಗಿ ಕೆ.ಜಿ.ರಾಜಪ್ಪ ಆಯ್ಕೆಯಾದರು.

ತಿ.ನರಸೀಪುರ, ಮಾ.2– ತಾಲೂಕಿನ ಕುರುಬೂರು ನೀರು ಬಳಕೆದಾರರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಜಿ.ನಿಜಲಿಂಗಸ್ವಾಮಿ, ಉಪಾಧ್ಯಕ್ಷರಾಗಿ ಕೆ.ಜಿ.ರಾಜಪ್ಪ (ಜಗಪತಿ) ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಚುನಾವಣಾ ವಿಶೇಷ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಜಿ.ನಿಜಲಿಂಗಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಬಿ.ರಾಜಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಕೆಎಲ್.ಕುಮಾರ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ಎಂ.ಶಾಂತ, ಕೆ.ವಿ.ಶಿವಶಂಕರ, ಕೆ.ಎನ್.ಅಶೋಕ್, ಕೆಸಿ.ವೀರೇಶ್, ಕೆಎನ್.ಮಹೇಶ್, ರಾಜೇಂದ್ರ ಕುಮಾರ್, ಆರ್.ನಾಗಮಣಿ, ಎಲ್.ಮಹದೇವಮ್ಮ, ಕೆ.ಎಂ.ಶಾಂತರಾಜು ಹಾಗೂ ಮಹದೇವಸ್ವಾಮಿ ಹಾಜರಿದ್ದು ನೂತನ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಕೆ.ಜಿ.ನಿಜಲಿಂಗಸ್ವಾಮಿ ಮಾತನಾಡಿ, ತಮ್ಮ ಅವಿರೋಧ ಆಯ್ಕೆಗೆ ಸಹಕರಿಸಿದ ನಿದೇಶಕರು ಹಾಗೂ ಗ್ರಾಮದ ಮುಖಂಡರಿಗೆ ಅಭಿನಂದನೆ ಸಲ್ಲಿಸಿದರು.

ಉಪಾಧ್ಯಕ್ಷ ಕೆ.ಬಿ.ರಾಜಪ್ಪ ಮಾತನಾಡಿ, ಸಹಕಾರ ಸಂಘದ ನಿರ್ದೇಶಕರು ಹಾಗೂ ಗ್ರಾಮದ ಮುಖಂಡರ ಸಹಕಾರದೊಂದಿಗೆ ಸಂಘವನ್ನು ಮಾದರಿ ಸಂಘ ಮಾಡಲು ಶ್ರಮಿಸಲಾಗುವುದು. ಗ್ರಾಮದಲ್ಲಿ ನೀರಿನ ಕರ ವಿರಿಸುವ ಮೂಲಕ ಸಂಘವನ್ನು ಆರ್ಥಿಕವಾಗಿ ಸದೃಢಗೊಳಿಸಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಗ್ರಾಮದ ಮುಖಂಡರಾದ ಕು.ಶಿ.ಭೃಂಗೀಶ್, ಕೆ.ಎನ್.ಶಿವಕುಮಾರ್, ಕನ್ನಹಳ್ಳಿ ಶಿವಕುಮಾರ್, ಸಂಘದ ಕಾರ್ಯದರ್ಶಿ ಕೆ.ಎಸ್.ಶಿವಕುಮಾರ್ ಹಾಜರಿದ್ದರು.

ಭುವನಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬೆಟ್ಟದಪುರ, ಮಾ.2– ಇಲ್ಲಿಗೆ ಸಮೀಪದ ಭುವನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಎಸ್.ವೆಂಕಟೇಶ್, ಉಪಾಧ್ಯಕ್ಷೆಯಾಗಿ ಕುಸುಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವೆಂಕಟೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಕುಸುಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆ ಹಿತೇಂದ್ರ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ವೇಳೆ ಸ್ಥಳದಲ್ಲಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು. ಚುನಾವಣೆಯಲ್ಲಿ ನಿರ್ದೇಶಕರಾದ ಮಂಜುನಾಥ್, ಪಾಪಶೆಟ್ಟಿ, ಕೃಷ್ಣಮೂರ್ತಿ, ನಾಗೇಶ್, ಕನ್ಯಾಕುಮಾರಿ, ಚೆನ್ನಯ್ಯ, ಗೋವಿಂದಶೆಟ್ಟಿ, ದೇವರಾಜು, ರವಿ, ಸರ್ಕಾರದ ನಾಮ ನಿರ್ದೇಶಿತ ಅಭ್ಯರ್ಥಿ ಬಿ.ಎಸ್.ಜಯಣ್ಣ, ಕಾರ್ಯದರ್ಶಿ ಪ್ರಕಾಶ್ ಭಾಗವಹಿಸಿದ್ದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷೆಯನ್ನು ಡೈರಿ ನಿರ್ದೇಶಕರು, ಗ್ರಾಮಸ್ಥರು ಅಭಿನಂದಿಸಿದರು. ಇದೇ ವೇಳೆ ಗ್ರಾಪಂ ಅಧ್ಯಕ್ಷ ಪಿ.ದೇವರಾಜು, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಹರೀಶ್, ಲೋಕೇಶ್, ಬಿ.ಟಿ.ರಾಜಣ್ಣ, ನಿವೃತ್ತ ಶಿಕ್ಷಕ ಸ್ವಾಮಿಗೌಡ, ಸುರೇಶ್ ಕುಮಾರ್, ಕೃಷ್ಣಮೂರ್ತಿ ಇನ್ನಿತರರಿದ್ದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಕೆ.ಮರಿಗೌಡರನ್ನು ಹೆಚ್.ಡಿ.ಕೋಟೆ ಮುಖಂಡರು ಮೈಸೂರಿನಲ್ಲಿ ಅಭಿನಂದಿಸಿದರು. ಈ ವೇಳೆ ಮೈಸೂರು ಜಿಲ್ಲಾ ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಆರ್.ಎಂ.ವೀರೇಗೌಡ, ಆರ್.ಎನ್.ಚಂದ್ರೇಗೌಡ, ಆರ್.ಕೆ.ಸ್ವಾಮಿಗೌಡ, ಎಂ.ರವಿ, ಚಿಕ್ಕಣ್ಣ, ರಾಜಪ್ಪ, ಪುಟ್ಟೇಗೌಡ, ಶಿವರಾಜು, ಮಂಜು, ಮುದ್ದರಾಮೇಗೌಡ, ಕುಮಾರ, ಸುರೇಶ, ಅಭಿ ಇತರರಿದ್ದರು.

ಕೆ.ಶಿವರಾಂ ನಿಧನಕ್ಕೆ ಎಸ್.ಮಹದೇವಯ್ಯ ಸಂತಾಪ

ನಂಜನಗೂಡು: ನಿವೃತ್ತ ಐಎಎಸ್ ಅಧಿಕಾರಿ ಹಾಗೂ ನಟ ಕೆ.ಶಿವರಾಂ ನಿಧನ ದಲಿತ ಸಮುದಾಯ ಮತ್ತು ಬಿಜೆಪಿ ಪಕ್ಷಕ್ಕೆ ತುಂಬಲಾರದ ನಷ್ಟ ಎಂದು ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಸಂತಾಪ ಸೂಚಿಸಿದ್ದಾರೆ. ಕೆ.ಶಿವರಾಂ ಐಎಎಸ್ ಅಧಿಕಾರಿಯಾಗಿ ನೊಂದವರು, ಶೋಷಿತರಿಗೆ ಸಾಕಷ್ಟು ನೆರವು ನೀಡುವ ಮೂಲಕ ಜನಪ್ರಿಯತೆ ಗಳಿಸಿದ್ದರು. ಅವರು ನಿವೃತ್ತಿ ನಂತರವೂ ಕೂಡ ಶೋಷಿತರ ಪರ ಧ್ವನಿ ಎತ್ತುತ್ತಿದ್ದಲ್ಲದೆ ಛಲವಾದಿ ಮಹಾಸಭಾ ಸಂಘಟನೆ ಕಟ್ಟುವ ಮೂಲಕ ದಲಿತರ ಸಂಘಟನೆಗೆ ಒತ್ತು ನೀಡಿದ್ದರು. ಜೊತೆಗೆ ಬಿಜೆಪಿ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದವರು. ಅವರ ಮರಣದಿಂದ ದಲಿತ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುವುದಾಗಿ ತಿಳಿಸಿದರು.

ರೈತರು ದೇಶದ ಸಮಸ್ಯೆಗಳ ವಿರುದ್ಧ ಹೋರಾಡಬೇಕಿದೆ


ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್

ನಂಜನಗೂಡು/ಮಲ್ಕುಂಡಿ, ಮಾ.2– ರೈತರು ತಮ್ಮ ಹಕ್ಕು ಪಡೆಯಲು ಮತ್ತು ದೇಶದ ಜ್ವಲಂತ ಸಮಸ್ಯೆಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕಿದೆ ಎಂದು ಕರ್ನಾಟಕ ರಾಜ್ಯ ಸಾಮೂಹಿಕ ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ತಿಳಿಸಿದರು.

ತಾಲೂಕಿನ ಬ್ಯಾಳಾರುಹುಂಡಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಸಾಮೂಹಿಕ ನಾಯಕತ್ವದ ರೈತ ಸಂಘದ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ಮೋದಿ ಸರ್ಕಾರದ ಅವಧಿಯಲ್ಲಿ ಕಳೆದ 9 ವರ್ಷಗಳಲ್ಲಿ 53 ಸಾವಿರ ಕೋಟಿ ಇದ್ದ ಸಾಲದ ಹೊರೆ ಈಗ 205 ಲಕ್ಷ ಕೋಟಿಗೆ ಏರಿಕೆಯಾಗಿದೆ. ಅಲ್ಲದೆ ರೈತರ ಹಣವನ್ನು ಬಂಡವಾಳಶಾಹಿಗಳ 12 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದಾರೆ ಜೊತೆಗೆ ಕರ್ನಾಟಕ್ಕೆ ದೊರಕಬೇಕಾದ ತೆರಿಗೆ ಪಾಲನ್ನು ಕೊಡದೆ ವಂಚಿಸುತ್ತಿದೆ ಎಂದು ಆಪಾದಿಸಿದರು.

ವಿಶ್ವ ವ್ಯಾಪಾರ ಸಂಸ್ಥೆ ಒಪ್ಪಂದ ಭಾರತದಂತಹ ಕೃಷಿ ದೇಶಕ್ಕೆ ಅನ್ವಯಿಸಲ್ಲ. ಹೀಗಾಗಿ ವಿಶ್ವ ವ್ಯಾಪಾರ ಸಂಸ್ಥೆಯಿಂದ ಭಾರತವನ್ನು ಹಿಂದೆ ಸರಿಯುವಂತೆ ಒತ್ತಾಯಿಸಿ ಮತ್ತು ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಗೊಳಿಸುವಂತೆ ಒತ್ತಾಯಿಸಿ ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆ ಹತ್ತಿಕ್ಕುವ ಕೆಲಸವನ್ನು ಮೋದಿ ಸರ್ಕಾರ ಮಾಡುತ್ತಿದೆ ಇಂತಹ ಜ್ವಲಂತ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಬೇಕಾದರೆ ರೈತ ಸಂಘಟನೆಗಳು ಸಂಘಟಿತರಾಗಬೇಕಿದೆ ಎಂದರು.

ರೈತ ಸಂಘದ ಹೋರಾಟದ ಫಲವಾಗಿ ತಾಲೂಕಿನ ಸೂರಹಳ್ಳಿ ಗ್ರಾಮದಲ್ಲಿ 30 ವರ್ಷಗಳಿಂದ ವಿದ್ಯುತ್ ಸಂಪರ್ಕವಿಲ್ಲದೆ ಕತ್ತಲೆಯಲ್ಲಿದ್ದ 30 ಕುಟುಂಬಗಳಿಗೆ



ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಅಲ್ಲದೆ ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗ ಕೊಡಿಸಲಾಗಿದೆ. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ರಾಜಕಾರಣಿಗಳು ದೇಶಕ್ಕೆ ಅನ್ನ ನೀಡುವ ರೈತರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದ್ದಾರೆ. ರಾಜಕಾರಣಿಗಳು ಯಜಮಾನರಲ್ಲ ನಮ್ಮ ಸೇವಕರು ಎಂಬುದನ್ನು ಜನಸಾಮಾನ್ಯರಿಗೆ ಅರಿವು ಮೂಡಿಸುವ ಸಲುವಾಗಿ ರೈತ ಸಂಘಟನೆ ಪ್ರತಿ ಗ್ರಾಮಗಳಲ್ಲಿ ಗ್ರಾಮ ಘಟಕ ತೆರೆದು ರೈತರಿಗೆ ಜಾಗೃತಿ ಮೂಡಿಸುವಂತಹ ಕೆಲಸದಲ್ಲಿ ನಿರತವಾಗಿದೆ ಎಂದರು.

ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್ ಮಾತನಾಡಿದರು. ಸಮಾರಂಭದಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ರಘು, ಕೆಂಪಣ್ಣ, ವೆಂಕಟೇಗೌಡ, ಮಹದೇವನಾಯಕ, ರವಿ, ಶ್ವೇತ, ಬ್ಯಾಳಾರು ಹುಂಡಿ ಗ್ರಾಮ ಘಟಕದ ಮಹದೇವಗೌಡ, ಮಹದೇವಶೆಟ್ಟಿ, ಪುಟ್ಟಯ್ಯ, ಸಿದ್ದಪ್ಪ, ಕೆಂಪಯ್ಯ, ಸಿದ್ದಸ್ವಾಮಿಗೌಡ, ಮರಿಸ್ವಾಮಿಗೌಡ, ಚಿಕ್ಕಸಿದ್ದೇಗೌಡ, ಕುಮಾರ, ಅಣ್ಣೇಗೌಡ, ಸ್ವಾಮಿ, ಮಹೇಶ್, ಚಿನ್ನಸ್ವಾಮಿ, ಮರಿಕಾಳೇಗೌಡ, ಮರಿಸ್ವಾಮಿ ಇತರರಿದ್ದರು.



ನಂಜನಗೂಡು ತಾಲೂಕಿನ ಸೂರಹಳ್ಳಿಯಲ್ಲಿ ನ್ಯಾಷನಲ್ ಆಗ್ರೋ ಫೌಂಡೇಶನ್ ಮತ್ತು ಕ್ಯಾಪ್ರಿ ಗ್ಲೋಬಲ್ ಸಂಸ್ಥೆ ಹಾಗೂ ಜಲಸಂಪನ್ಮೂಲ ಅಭಿವೃದ್ಧಿ ಯೋಜನೆ ಸಹಯೋಗದಲ್ಲಿ ಶಾಲಾ ಮಕ್ಕಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಪರಿಸರ ಹಾಗೂ ಮಿತಿಯಾಗಿ ನೀರು ಬಳಸಿ ಮಣ್ಣಿನ ಸಂರಕ್ಷಣೆ ಮಾಡುವಂತೆ ಅರಿವು ಮೂಡಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ರೇವಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಚನ್ನನಾಯಕ, ನ್ಯಾಷನಲ್ ಆಗ್ರೋ ಫೌಂಡೇಶನ್ ವ್ಯವಸ್ಥಾಪಕ ಬಾಲಸುಬ್ರಹ್ಮಣ್ಯಂ, ಕೃಷಿ ಅಧಿಕಾರಿ ಗಣೇಶ್ ಪ್ರಸಾದ್, ಯೋಜನಾಧಿಕಾರಿ ಶಿವರಾಜು, ಅಂಬರೀಶ್, ಮುಖ್ಯ ಶಿಕ್ಷಕ ಶಂಕರ್ ಸೇರಿದಂತೆ ಇತರರಿದ್ದರು.

ಸರಗೂರಲ್ಲಿ ಕೆ.ಶಿವರಾಂಗೆ ಶ್ರದ್ಧಾಂಜಲಿ



ಸರಗೂರು, ಮಾ.2– ನಿವೃತ್ತ ಐಎಎಸ್ ಅಧಿಕಾರಿ, ನಟ ಕೆ.ಶಿವರಾಂ ಅವರಿಗೆ ಪಟ್ಟಣದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆದಿ ಕರ್ನಾಟಕ ಮಹಾಸಭಾ, ಸಂವಿಧಾನ ಸಂರಕ್ಷಣಾ ಸಮಿತಿ ವತಿಯಿಂದ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದ ಗಣ್ಯರು ಕೆ.ಶಿವರಾಂ ಐಎಎಸ್ ಅಧಿಕಾರಿಯಾಗಿದ್ದಾಗ ಮಾಡಿದ ಸಾಧನೆಗಳು, ಅವರು ನಡೆದು ಬಂದ ದಾರಿ, ದಲಿತರು, ಬಡವರು, ಪೌರ ಕಾರ್ಮಿಕರು ಹಾಗೂ ಹಿಂದುಳಿದವರ ಏಳಿಗೆಗಾಗಿ ಶ್ರಮಿಸಿದ್ದನ್ನು ಸ್ಮರಿಸಿದರು.

ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ ಮಾತನಾಡಿ, ಪ್ರಥಮ ಬಾರಿಗೆ ಕನ್ನಡದಲ್ಲಿ ಐಎಎಸ್ ಪಾಸ್ ಮಾಡಿದ ಶಿವರಾಂ ಅವರು ಸದಾ ಕಾಲ ದಲಿತರ ಮಕ್ಕಳು, ಬಡವರ ಮಕ್ಕಳು ಶಿಕ್ಷಣ ಪಡೆಯಬೇಕು. ಸರ್ಕಾರದ ಸೌಲಭ್ಯಗಳು ಸಮರ್ಪಕವಾಗಿ ಲಭಿಸಬೇಕು. ಹಿಂದುಳಿದವರ ಏಳಿಗೆಗೆ ಶಕ್ತಿ ಮೀರಿ ಶ್ರಮಿಸಿ ತಮ್ಮದೇ ಛಾಪು ಮೂಡಿಸಿ ಬಹಳಷ್ಟು ಕುಟುಂಬಗಳಿಗೆ ಬೆಳಕು ನೀಡಿದ್ದಾರೆ ಎಂದು ಮೆಲುಕು ಹಾಕಿದರು.


ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಬಸವರಾಜು ಮಾತನಾಡಿದರು. ಮುಖಂಡರಾದ ಇದಿಯಪ್ಪ, ಶಂಭುಲಿಂಗ ನಾಯಕ, ಎಂ.ಕೆಂಡಗಣ್ಣಸ್ವಾಮಿ, ಜಿ.ಗೋಪಾಲಸ್ವಾಮಿ, ಮಲ್ಲೇಶ್, ಕೃಷ್ಣ, ಶಿವಶಂಕರ್, ರಮೇಶ್, ಬೆಟ್ಟಸ್ವಾಮಿ, ಪ್ರಭಾಕರ್, ಸೋಮಣ್ಣ, ರಾಜಣ್ಣ ಶಿವಣ್ಣ, ಗೋಪಾಲ್, ಮಹೇಂದ್ರ ಚಿನ್ನಯ್ಯ, ಶಿವಚೆನ್ನ, ಚಿನ್ನಣ್ಣ ಸೇರಿದಂತೆ ಇನ್ನಿತರರಿದ್ದರು.

ಯಾವ ಪುರುಷಾರ್ಥಕ್ಕಾಗಿ ವಿ.ಶ್ರೀನಿವಾಸ ಪ್ರಸಾದ್ ಅಳಿಯನಿಗೆ ಟಿಕೆಟ್

ಬಿಜೆಪಿ ಮುಖಂಡ ವೆಂಕಟರಾಮು ಪ್ರಶ್ನೆ

ತಿ.ನರಸೀಪುರ, ಮಾ.2– ಸಂಸದ ವಿ.ಶ್ರೀನಿವಾಸ ಪ್ರಸಾದ್ ಯಾವ ಪುರುಷಾರ್ಥಕ್ಕಾಗಿ ತಮ್ಮ ಅಳಿಯ ಮೋಹನ್ ಅವರನ್ನು ಕರೆತಂದು ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಕೇಳುತ್ತಿದ್ದಾರೆ. ಅವರಿಗಿರುವ ಮಾನದಂಡವಾದರೂ ಏನು ಎಂದು ಬಿಜೆಪಿ ಮುಖಂಡ ವೆಂಕಟರಾಮು ಪ್ರಶ್ನಿಸಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರದಲ್ಲಿ ನಿಮ್ಮ ಮತ ಇಲ್ಲದಿದ್ದರೂ, ಕ್ಷೇತ್ರದ ಮುಗ್ಧ ಮತದಾರರು ನಿಮಗೆ 44 ವರ್ಷಗಳಿಂದ ಅಧಿಕಾರ ನೀಡುತ್ತಾ ಬಂದಿದ್ದಾರೆ. ಆ ಗೌರವವನ್ನು ನೀವು ಉಳಿಸಿಕೊಳ್ಳಿ. ಕುಟುಂಬದ ವ್ಯಾಮೋಹ ಬಿಟ್ಟು ನಿಮ್ಮ ಸುಖದಲ್ಲಿ ಭಾಗಿಯಾಗದೇ ಬರೀ ಕಷ್ಟದಲ್ಲಿ ಭಾಗಿಯಾದ ನನಗೆ ಟಿಕೆಟ್ ನೀಡಲು ಶಿಫಾರಸ್ಸು ಮಾಡಿ, ನನಗಿಲ್ಲದಿದ್ದರೆ ಕೋಟೆ ಶಿವಣ್ಣ, ಎಸ್.ಬಾಲರಾಜು, ಎಸ್.ಮಹದೇವಯ್ಯ ಅಥವಾ ಕೋಟೆ ಲಕ್ಷ್ಮಣ ಅವರಿಗೆ ಟಿಕೆಟ್ ಕೊಡಿಸಲು ಸಹಕರಿಸಿ ಎಂದು ಮನವಿ ಮಾಡಿದರು.



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿರಿಯ ಮುಖಂಡ ವೆಂಕಟರಮಣ ಮಾತನಾಡಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ನಾನು ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಕಳೆದ 40 ವರ್ಷಗಳಿಂದ ದಲಿತ, ಕನ್ನಡಪರ ಹಾಗೂ ರೈತಪರ ಚಳವಳಿ ಸೇರಿದಂತೆ ಹಲವು ಪ್ರಗತಿಪರ ಚಳವಳಿಯಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ. ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಬೆಂಕಿ ಮಹದೇವು ಅವರ ಮುಂದಾಳತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾಗಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. ಬಿಜೆಪಿ ಪಕ್ಷ ಇದುವರೆಗೂ ಸ್ಥಳೀಯರಿಗೆ ಟಿಕೆಟ್ ನೀಡಿಲ್ಲ. ನನ್ನನ್ನು ಸೇರಿದಂತೆ ಕೋಟೆ ಶಿವಣ್ಣ, ಬಾಲರಾಜು, ಎಸ್.ಮಹದೇವಯ್ಯ ಹಾಗೂ ಕೋಟೆ ಲಕ್ಷ್ಮಣ ಸಕ್ರಿಯವಾಗಿ ಓಡಾಟ ನಡೆಸಿದ್ದೇವೆ. ಈವರೆವಿಗೂ ಪಕ್ಷದಲ್ಲಿ ಸಣ್ಣ ಪುಟ್ಟ ಅವಕಾಶಗಳು ಸಿಕ್ಕಿಲ್ಲ. ಇಲ್ಲಿಂದ ಸ್ಪರ್ಧಿಸಿ ಗೆದ್ದು ಹೋದ ವಿ.ಶ್ರೀನಿವಾಸಪ್ರಸಾದ್ ಜನರ ಕಷ್ಟ ಸುಖಗಳಿಗೆ ಸ್ಪಂದಿಸಿಲ್ಲ. ತಾವಾಯಿತು ತಮ್ಮ ಕುಟುಂಬವಾಯಿತು ಎಂಬಂತೆ ಕಾರ್ಯಕರ್ತರ ಕೈಗೂ ಸಿಗದೇ, ಪಕ್ಷ ಸಂಘಟಿಸದೇ ಆರಾಮವಾಗಿದ್ದಾರೆ. ಈಗ ಚುನಾವಣೆ ಬರುತ್ತಿರುವುದರಿಂದ ತಮ್ಮ ಕುಟುಂಬದವರಿಗೆ ಟಿಕೆಟ್ ಕೇಳುತ್ತಿದ್ದಾರೆ. ನೀವು ಕುಟುಂಬದವರಿಗೆ ಟಿಕೆಟ್ ಕೇಳುವುದು ಎಷ್ಟು ಸರಿ ಎಂದ ಅವರು ಪಕ್ಷಕ್ಕಾಗಿ ದುಡಿದ ನಮಗೆ ಟಿಕೆಟ್ ಕೊಡಿಸಬೇಕಾದ್ದು ನಿಮ್ಮ ಕರ್ತವ್ಯ ನಮ್ಮಲ್ಲೊಬ್ಬರಿಗೆ ಟಿಕೆಟ್ ಕೊಡಿಸಿ ನೀವೆ ಓಡಾಡಿಕೊಂಡು ನಮ್ಮನ್ನು ಗೆಲ್ಲಿಸುವ ಕೆಲಸ ಮಾಡಿ. ಅದನ್ನು ಬಿಟ್ಟು 3 ಲಕ್ಷ ಸಂಬಳ ಬರುತ್ತಿದ್ದ ವೈದ್ಯ ವೃತ್ತಿಗೆ ನಿಮ್ಮ ಅಳಿಯ ಡಾ.ಮೋಹನ್ ಅವರಿಂದ ರಾಜೀನಾಮೆ ಕೊಡಿಸಿ ಕರೆ ತಂದು ಅವರಿಗೆ ಟಿಕೆಟ್ ಕೇಳುತ್ತಿರುವುದು ಸರಿಯೇ ಎಂದು ಕಿಡಿಕಾರಿದರು.

ಇಷ್ಟಕ್ಕೂ ನಿಮ್ಮ ಅಳಿಯನಿಗೆ ಯಾವ ಪುರುಷಾರ್ಥಕ್ಕೆ ಟಿಕೆಟ್ ಕೇಳುತ್ತಿದ್ದೀರಿ. ಅವರಿಗೆ ಟಿಕೆಟ್ ನೀಡಲು ಇರುವ ಮಾನದಂಡವಾದರೂ ಏನು? ಬಿಜೆಪಿ ಪಕ್ಷ ಮೋಹನ್‌ಗೆ ಯಾಕೆ ಟಿಕೆಟ್ ನೀಡಬೇಕು. ಪಕ್ಷಕ್ಕೆ ಮೋಹನ್ ಅನಿವಾರ್ಯವೇ ಎಂದ ವೆಂಕಟರಾಮು ಬಿಜೆಪಿ ವರಿಷ್ಠರು ಜನಪರವಾಗಿ ಕೆಲಸ ಮಾಡುತ್ತಿರುವ ಪಕ್ಷ ಸಂಘಟನೆಗಾಗಿ ದುಡಿದಿರುವ ಸ್ಥಳೀಯರನ್ನು ಗುರುತಿಸಿ ಟಿಕೆಟ್ ನೀಡಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯ ಕಾರ್ ಮಲ್ಲಪ್ಪ ಮಹದೇವಸ್ವಾಮಿ, ಡಾ.ಮಲ್ಲಿಕಾರ್ಜುನಸ್ವಾಮಿ, ರಾಜಶೇಖರ್, ಲಿಂಗರಾಜು, ಮರಪ್ಪಸ್ವಾಮಿ, ನಾಗಪ್ಪ ಮಲ್ಲೇಶ್, ಮಹೇಶ್ ಇದ್ದರು.

ನಾಗರಾಜು ನಿಧನ



ಬೆಟ್ಟದಪುರ, ಮಾ.2– ಇಲ್ಲಿಗೆ ಸಮೀಪದ ಅತ್ತಿಗೋಡು ಗ್ರಾಮದ ನಿವಾಸಿ ನಾಗರಾಜು(62) ಶನಿವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

COMMERCIAL SPACE FOR RENT

1000 Sqft., in 1st Floor, (Prime Location Diagonal) opp. to Javaregowda Park, Saraswathipuram. Suitable for Corporate office, Showroom, IT company etc., Contact:

9108198006

USED COMPUTERS FOR SALE

Dual Core/ 2GB Ram / 80GB HDD / 17"LCD **Rs.6,000/-**

For Quantity of 10 No's. **Rs.5,000/-** per system

Dual Core/ 4GB Ram / 160GB HDD / 17"LCD **Rs.8,000/-**

Core I 3/ 4GB Ram / 250GB HDD / 17"LCD **Rs.12,000/-**

Xeon/ 8GB Ram / 500GB HDD / 17"LCD **Rs.16,000/-**

Core I 3/ 8GB Ram / 1TB HDD / 17"LCD **Rs.20,000/-**

Core I 7/ 16GB Ram / 1 TB HDD / 17"LCD **Rs.30,000/-**

For System Without Monitor **Rs.2,000/-**(less)

LAPTOP

Core I 3/ 12GB Ram / 500GB HDD / Adaptor **Rs.20,000/-**

Courier Charges: **Rs.1,000/-** per system

COMPUTER HOUSE

L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, **BANGALORE** - 560075.

09886038331 / 080- 42076287

M. Srinivas International Public School
Hanakere, Mandya - 571404.

WE ARE HIRING TEACHERS !
For Kindergarten to 10th Standard

Principal:
M.A,Bed/M.Sc,B.Ed, Exp.: 3 to 5yrs

English assistant teacher:
Science assistant teacher
Maths assistant teacher:
Social assistant teacher:
Kannada assistant teacher:
Hindi assistant teacher:

Teachers Qualification
TGT / PGT
Class 1 to 5: PUC, D.Ed/ M.A,B.Ed
Class 6 to 8: Any Gegree with B.Ed
Class 8 to 10: Post Graduate with B.Ed

Kinder garden teacher: N.S.T/N.T.T
PE teacher: B.A, B.P, Ed/ M.P.Ed
Art and craft teacher:
Diploma in Art & craft
Office assistant:
PUC/any degree with computer knowledge

Interested candidates can post your resume as early as possible, first and the best candidates will be appointed
HOSTEL FACILITIES AVAILABLE

More Details Contact Us: 98450 41912 / 7204241020 / 6364458508 / 91485 76991
E-mail: msinternationalpublicschcol2@gmail.com

2.5 BHK HOME INTERIORS @ ₹ 2.5 Lacs*

Home Space Mart™

TALK TO OUR DESIGN TEAM
✆ 8197310113

ಲಿಂಗಾಯಿತ ವಧು ಬೇಕಾಗಿದೆ

ಹೆಸರು: ಸುನೀಲ್,
36 ವರ್ಷ, ಸ್ವಯಂ ಉದ್ಯೋಗ,
ಸ್ವಂತ ಮನೆ, ಮೈಸೂರು.

9845048051

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY* ISI

9845426862
9901291267

MUDA APPROVED
PREMIUM SITES FOR SALE @ V.B. CITY

ATTACHED TO KBL SILICON CITY
Corner & Intermediate Sites.
READY TO REGISTER

9844570530, 9620461052

SHAH MOBIKES PVT. LTD. (SHAH SINCE 1947)
CYCLE DIVISION, (Wholesale & Retailers in All Cycles & Cycle Spares)
Sri Harsha Road, Next to Hotel Govardhan, Mysore,

We Are Hiring for our Cycle Division

- SALES IN CHARGE - Showroom
- SPARES INCHARGE - Showoom
- SALES EXECUTIVES - Retail & Wholesale
- GODOWN INCHARGE
- ACCOUNTS INCHARGE
  Tally with Accounting Experience must
- Tempo Loaders, Packers, Fitters & Security
  Qualification Less Than SSLC & Hardcore workers

QUALIFICATION :
PUC & Above,
Salary will not a constraint for deserving candidate.

Interview on **4th,5th & 6th March** from 3pm to 6pm

Call : 9742297449, 0821-426009

FOR ADVERTISEMENT

STAR OF MYSORE
Please Call: 0821-2496522 / 23
Email: ad@starofmysore.com

ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com

We Make going solar simple & affordable

SmartEco®
Power Systems Pvt Ltd
ಸೌರಶಕ್ತಿ ಉಪಯೋಗಿಸಿ.. ವಿದ್ಯುತ್ ಬಿಲ್ ಉಳಿಸಿ...

Go Green, Go Solar for lifelong free electricity, ev charging, cooking...

Save Rs 14k/KW/Year, RoI 22 - 50%

Accelerated Depreciation, GST benefits for commercial customers

#2660/4, Kalidasa Road, V.V.Mohalla, Mysore - 570002 | info@smarteco.in
www.smarteco.in | Ph : 0821 - 241 6022 / 98803 96022 / 98866 50240

KODAGU MODEL SCHOOL
English Medium

Promoted by : Sri Kavery Kodava Association ® Mysore East
CA-4, Kaveri Road, Vidyashankar Nagar, Mysore-29

INVITES APPLICATIONS FOR THE FOLLOWING POSTS

Post	Nos	Qualification
English /Social	1	BA / MA B.Ed
TGT	1	B.Sc / BA, (NTT, D.Ed)
Physics/Mathematics	1	B.Sc / M.Sc B.Ed
Physical Education (PT)	1	B.PEd / M.P.Ed

Interested aspirants with good English communication skills, proficiency in their methodology and teaching experience can mail your resumes to **kodagums7004@gmail.com** on or before **11th March 2024 or Contact -6363647704**

Website- http://www.kodagumodelschool.in

MUDA APPROVED
SITES FOR SALE
30x40 East & West Face

Ready for Registration
Attached to Sun Citi Homes, Nagavala, Very close to Hunsur Road.

9880577788, 9008088099

ಸೈಟ್ ಮಾರಾಟಕ್ಕಿದೆ

40x 60, ದಕ್ಷಿಣ ದಿಕ್ಕಿನ
40 ಅಡಿ ರಸ್ತೆಯಲ್ಲಿ
ಸುವರ್ಣನಗರ, ಬೋಗಾದಿ ರಸ್ತೆ,
ರೈನ್‌ಬೋ ಸ್ಕೂಲ್ ಹತ್ತಿರ.
ಬೆಲೆ 48 ಲಕ್ಷ. ಸಂಪರ್ಕಿಸಿ:

9741561111/9945042875

COMMERCIAL SITE FOR SALE

80 Feet Srirampura Main Road,
Next to Kanti Sweets,
2850 Sqft, Rs. 2.86 Cr

Call: 89510 46224

ಸ್ಥಾಪನೆ : 1983 ದೂರವಾಣಿ : 0821–2422127

ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಅ.,

ನಂ.361/1, ಸಿ.ಹೆಚ್–15, ಡಿ.ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ,
ಮೈಸೂರು – 570024

ದಿನಾಂಕ: 02/03/2024

ಬಾಡಿಗೆಗೆ ಇದೆ

ಮೇಲ್ಕಂಡ ಸಂಘದ ಹೆಸರಿನಲ್ಲಿ ವಿಜಯನಗರ 4ನೇ ಹಂತ, 2ನೇ ಫೇಸ್ ನಂ. 5851/ಎ ಪೂರ್ವ ಪಶ್ಚಿಮ 12 ಮೀಟರ್, ದಕ್ಷಿಣೋತ್ತರ 18 ಮೀಟರ್ ಅಳತೆಯ ನಿವೇಶನದಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡದಲ್ಲಿ ಕೆಳಭಾಗದಲ್ಲಿ ಪಾರ್ಕಿಂಗ್ ಏರಿಯ **1675 SFT** ಹಾಗೂ ಭದ್ರತಾ ಸಿಬ್ಬಂದಿ ಕೊಠಡಿ **220 SFT** 1ನೇ ಮಹಡಿಯಲ್ಲಿ **1675 SFT** ಹಾಗೂ 1ನೇ ಮಹಡಿಯಲ್ಲಿ ಭದ್ರತಾ ಕೊಠಡಿ **(Strong Room)100 SFT** ಜಾಗವು ಬಾಡಿಗೆಗೆ ದೊರೆಯುತ್ತದೆ.

ಆಸಕ್ತರು ಸೊಸೈಟಿಯ ಕಾರ್ಯದರ್ಶಿಯವರನ್ನು ಸಂಪರ್ಕಿಸುವುದು.

–: ವಿಷಯ ಸೂಚನೆ :–

1) ಸೊಸೈಟಿ ಸದಸ್ಯರುಗಳಿಗೆ ಹಾಗೂ ಸೊಸೈಟಿ ಸದಸ್ಯರಲ್ಲದವರನ್ನು ಸದಸ್ಯರನ್ನಾಗಿ ಮಾಡಿಕೊಂಡು ಅವರ ಹೆಸರಿನಲ್ಲಿರುವ ಮನೆ / ನಿವೇಶನವನ್ನು ಸೊಸೈಟಿಗೆ ಆಧಾರ ಮಾಡಿಕೊಂಡು ರೂ.1,00,00,000/– (ಒಂದು ಕೋಟಿ ಮಾತ್ರ)ಗಳ ಸ್ಥಿರಾಧಾರ ಸಾಲ ಕೊಡಲಾಗುವುದು.
2) ಸೊಸೈಟಿ ಸದಸ್ಯರುಗಳಿಗೆ ಯಶಸ್ವಿನಿ ಕಾರ್ಡ್‌ನ್ನು ಮಾಡಿಕೊಡಲಾಗುವುದು. ಯಶಸ್ವಿನಿ ಕಾರ್ಡ್‌ನ್ನು ನೋಂದಾಯಿಸಿಕೊಳ್ಳಲು ದಿನಾಂಕ: **31/03/2024** ರಂದು ಕೊನೆಯ ದಿನವಾಗಿರುತ್ತದೆ.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/– **ಎಂ.ವಿ.ರವಿ**
ಕಾರ್ಯದರ್ಶಿ, 9741202595

SESHADRIPURAM INSTITUTIONS
27, Nagappa Street, Seshadripuram
Bengaluru-560 020. Phone: 22955350

Website: www.set.edu.in E-mail : info@set.edu.in

Require

for **Seshadripuram Institute of Technology**
Plot No. 4, 5, 6A, 6B & 7A, Kadakola Industrial Area, Kadakola Village, Jaipura Hobli, Mysuru Taluk, Mysuru - 571 311

Professor

Eligibility: B. E., / B. Tech., and M. E., M. Tech. in CSE, ISE, AI & ML, ME and EEE in relevant discipline with first class at least in any one of the programs. **Ph. D. compulsory.**

• Physics • Chemistry • Mathematics

First class in Master's Degree in the relevant subject.
Ph. D. with NET / KSET compulsory.

Minimum of 10 years of teaching / research experience of which at least 5 years should be at the level of Associate Professor or minimum of 13 years' experience in teaching / research.

At least total 6 research publications in SCI Journals / UGC / AICTE approved list of journals.

Industry professionals with requisite qualification and at least 15 years of industrial experience or superannuated having a zeal for academic career can also apply.

Associate Professor

Eligibility: B. E., / B. Tech., and M. E., M. Tech. in CSE, ISE, AI & ML, ME and EEE in relevant discipline with first class at least in any one of the programs. Ph. D. Compulsory.

• Physics • Chemistry • Mathematics

First class in Master's Degree in the relevant subject.
Ph. D. with NET / KSET compulsory.

Minimum of 8 years of teaching / research experience of which at least 2 years post Ph. D. experience is desirable.

At least total 6 research publications in SCI Journals / UGC / AICTE approved list of journals.

Industry professionals with requisite qualification and at least 10 years of industrial experience or superannuated having a zeal for academic career can also apply.

Assistant Professor

Eligibility: B. E., / B. Tech., and M. E., / M. Tech., in CSE, ISE, AI & ML, ME and EEE in relevant discipline with first class at least in any one of the programs. Ph. D. Desirable.

• Physics • Chemistry • Mathematics

First class in Master's Degree in the relevant subject.
Ph. D. with NET / KSET compulsory.

Minimum of 2 years of experience as an Assistant Professor and research / Industry is desirable.

The candidates along with teaching should have a passion for Research. Publications in SCI Journals / UGC / AICTE approved list of journals is desirable.

The candidates should assist Professors / Associate Professors in setting up laboratory and preparing manuals.

College Librarian

Eligibility: First class in Master of Library & information Science. Minimum of 2 years of experience.

Director of Physical Education

Eligibility: First class in Master of Physical Education. Minimum of 2 years of experience.

Salary as per AICTE Norms

Eligible candidates may apply in handwritten application along with a detailed resume, passport size photo & copies of testimonials etc., to the **Honorary General Secretary, Seshadripuram Educational Trust, Bengaluru-560 020 within 7 days through E-mail to sitsetmysuru@gmail.com**

N. R. Pandith Aradhya
President

Dr. Wooday P. Krishna
Honorary General Secretary

